ಆಮಂತ್ರಣವನ್ನು ಕೊಡುತ್ತೇವೆ, ಅವರು ಬರುವಂತಾಗಲಿ ಎಂದು ನಾನು ಬಯಸುತ್ತೇನೆ.

**ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು):** ಬಹಳ ಒಳ್ಳೆಯದು.

**5. ನಿಯಮ–69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ವಿಷಯ: ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ**

**ಶ್ರೀ ಟಿ.ಬಿ.ಜಯಚಂದ್ರ(ಸಿರಾ):** ಮಾನ್ಯ ಸಭಾಧ್ಯಕ್ಷರೆ, ನಾವು ಮಾತನಾಡ–ಬೇಕಾದಾಗ ಕೋರಂನ ಅಭಾವ ಇರುವುದರಿಂದ ಮಾತನಾಡುವುದು ಬೇಡ ಎಂದು ಹೇಳಿ ಇವತ್ತಿಗೆ ಚರ್ಚೆಯನ್ನು ಮುಂದುವರೆಸುತ್ತಿದ್ದೇವೆ. ಈ ಮಧ್ಯೆ ಒಂದು ವಿಚಾರ ನಾನು ಹೇಳಬೇಕಾಗಿದೆ, ನಾನು ಚರ್ಚೆಯನ್ನು ಪ್ರಾರಂಭಿಸಿ ಇವತ್ತು ರಾಜ್ಯದ ಪರಿಸ್ಥಿತಿ ಏನು ಎನ್ನುವುದನ್ನು ಸರ್ಕಾರಕ್ಕೆ ನಾವು ಮನದಟ್ಟು ಮಾಡುವುದಕ್ಕಿಂತ ಪೂರ್ವದಲ್ಲಿ ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರಾಗಿದ್ದಂತಹ ಶ್ರೀ ಈಶ್ವರಪ್ಪನವರು ನಿನ್ನೆ ಮತ ಕ್ಷೇತ್ರಕ್ಕೆ ಬಂದಿದ್ದರು. ಮತಕ್ಷೇತ್ರಕ್ಕೆ ಬಂದಾಗ ಅದನ್ನು ಅಧ್ಯಯನ ಮಾಡಿ ವಾಸ್ತವಿಕವಾಗಿರತಕ್ಕ ಸಂಗತಿ ಏನು ಎಂದು ಅರ್ಥ ಮಾಡಿಕೊಂಡು ನಾವು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾತ್ರಿ 9–30ರವರೆಗೂ ಸಭೆಯನ್ನು ನಡೆಸಿದೆವು. ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆಯನ್ನು ಮಾಡಿ ಸಭೆಯನ್ನು ಮಾಡಿದೆವು. ಸಭೆಯನ್ನು ಮಾಡಿದ ಕೊನೆಯಲ್ಲಿ ನನಗೆ ಬಹಳ ಸಂತೋಷವಾಗಿತ್ತು. ಆ ಸಂತೊಷವನ್ನು ನಾನು ಸಭೆಯಲ್ಲಿ ವ್ಯಕ್ತಪಡಿಸಿದೆ. ಇವತ್ತು ಶ್ರೀ ಈಶ್ವರಪ್ಪನವರು ಎಷ್ಟು ತಾಳ್ಮೆಯಿಂದ ಕುಳಿತು ವಿಚಾರವನ್ನು ಚರ್ಚೆ ಮಾಡುತ್ತಿದ್ದಾರೆ ಮತ್ತು ಆ ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ ಎನ್ನುವುದನ್ನು ಕೂಡ ಮೆಚ್ಚುಗೆಯಿಂದ ಮಾತನಾಡಿದೆ. ಬಹುಶಃ ಆ ರೀತಿಯಾದ ಕಳಕಳಿ, ಮತ್ತು ತಾಳ್ಮೆಯನ್ನು ಕೂಡ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂಥವರಿಗೆ ಇರಬೇಕಾಗುತ್ತದೆ, ಅದನ್ನು ಮೈಗೂಡಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದನ್ನು ಮಾಡಿ ಬಹಳ ಸಂತೋಷ. ನಿನ್ನೆ ನೀವು ಮಾತನಾಡುವಂತಹ ಸಂದರ್ಭದಲ್ಲಿ ನನಗೆ ಬಹಳ ಮುಖ್ಯವಾಗಿ ಕೆಲವು ಅಂಶಗಳು ನನ್ನ ಗಮನಕ್ಕೆ ಬರುತ್ತಿದ್ದವು. ನೀವುಮಾತಿನ ಪ್ರತಿ ಹಂತದಲ್ಲಿ ಕೂಡ ಒಂದು ಮಾತನ್ನು ಹೇಳುತ್ತಿದ್ದೀರಿ, ಮುಂದಿನ ಕುಡಿಯುವ ನೀರಿನ ಸಮಸ್ಯೆ ಹೇಗೆ

ಬಗೆಹರಿಸುವುದು? ಇವತ್ತು ಒಳ್ಳೆಯ ಕುಡಿಯುವ ನೀರನ್ನು ಕೊಡುವುದು ಹೇಗೆ? ಅದು ಸಾಧ್ಯವೇ? ಇಲ್ಲಿಯವರೆಗೆ ಏಕೆ ಮಾಡುವುದಕ್ಕೆ ಆಗಿಲ್ಲ? ಎನ್ನತಕ್ಕ ಪ್ರಶ್ನೆಯನ್ನು ಕೇಳುತ್ತಿದ್ದು ನನಗೆ ಬಹಳ ಮೆಚ್ಚುಗೆಯಾಯಿತು. ನಿಮ್ಮ ಮಾತು ಆ situationನಲ್ಲಿ ನಮ್ಮ ಜನ ಎಂಥ ಪರಿಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ನನಗೆ ಪತ್ರಿಕೆಯಲ್ಲಿ ನೋಡಿದಾಗ ಗೊತ್ತಾಯಿತು, ನೀವು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಭೇಟಿ ನೀಡಿದಾಗ ನಿಮಗೆ ಅಲ್ಲಿನ ಜನ ಬಂದು ಕುಡಿಯಲು ನೀರು ಕೊಟ್ಟು, ಇದು ವಿಷ ಅಲ್ಲ, ನೀರು ಕುಡಿಯಿರಿ, ನಾವು ಇದನ್ನೇ ಕುಡಿದು ಬದುಕುತ್ತಿದ್ದೇವೆ ಎಂದು ಹೇಳುವಾಗ, ಆ ನೀರನ್ನೂ ನೀವು ಕುಡಿದು ಬಂದಿದ್ದೀರಿ ಎಂದು ಪತ್ರಿಕೆಯಲ್ಲಿ ವರದಿ ಆಗಿರುವುದನ್ನು ನೋಡಿದಾಗ ನಿಜಕ್ಕೂ ಕೂಡ ನಾವು ಇವತ್ತು ground realitiesಏನು ಎನ್ನತಕ್ಕದ್ದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ ಇವತ್ತು ಬರ ಬಂದಿದೆ. ಬರ ಬರಬೇಕು ಎಂದು ಯಾರೂ ಬಯಸಿರಲಿಲ್ಲ ಅಥವಾ ನಾವು ಯಾವುದೇ ಒಂದು ಆಜ್ಞೆ ಮಾಡಿ ಮಳೆ ತರಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಪ್ರಕೃತಿಯಲ್ಲಿ ಆಗುವಂಥ ಪ್ರಕ್ರಿಯೆಗಳಿಗೆ ನಾವು ಎಷ್ಟರಮಟ್ಟಿಗೆ ಸವಾಲಾಗಿ ಸ್ವೀಕಾರ ಮಾಡುತ್ತೇವೆ? ನಾವು ಎಷ್ಟರಮಟ್ಟಿಗೆ ಆ ಪರಿಸ್ಥಿತಿಗನುಗುಣವಾಗಿ ಸವಾಲನ್ನು ಸ್ವೀಕರಿಸುವ ರೀತಿಯಲ್ಲಿ ಇವತ್ತು ಪಾಲಿಸಿಯನ್ನು ಮಾಡಿಕೊಂಡು ಹೋಗುತ್ತೇವೆ ಎನ್ನುವುದು ಬಹಳ ಮುಖ್ಯವಾಗಿರತಕ್ಕಂತಹ ವಿಚಾರ. ಈ ದಿಸೆಯಲ್ಲಿ ಒಂದೇ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಮುಂದೆ ಇರುವ ಸವಾಲಿಗೆ ಮುಖ್ಯ ಕಾರಣವೇನೆಂದರೆ ವಿಪರೀತವಾಗಿ ಬೆಳೆಯುತ್ತಿರುವ ನಮ್ಮ ಜನಸಂಖ್ಯೆ. ನಾವು 113 ಕೋಟಿ ಜನಸಂಖ್ಯೆ ಇರುವಂಥ ಈ ದೇಶ, ಕೇವಲ 60 ವರ್ಷಗಳಲ್ಲಿ ನಾವು 33 ಕೋಟಿಯಿಂದ 113 ಕೋಟಿ ಜನಸಂಖ್ಯೆಯಾಗಿರುವುದು, ನಮ್ಮ ಆರ್ಥಿಕವಾಗಿ ಆಗುತ್ತಿರುವಂಥ ಬೆಳವಣಿಗೆ, ಆ ಸಾಧನೆ, ಅದೆಲ್ಲಕ್ಕಿಂತ ಹೆಚ್ಚಿನದಾಗಿ ಕೃಷಿ ಇವತ್ತು ಹೆಚ್ಚಿನ ರೀತಿಯಲ್ಲಿ ಕೃಷಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅದೆಲ್ಲಕ್ಕಿಂತ ಹೆಚ್ಚಾಗಿ ಕೈಗಾರಿಕೆಯಲ್ಲಿ ಆಗುತ್ತಿರತಕ್ಕಂತ ಕ್ರಾಂತಿಯ ಹಿನ್ನೆಲೆಯಲ್ಲಿ, ಇವೆಲ್ಲದಕ್ಕೂ ಒತ್ತಡ ಜಾಸ್ತಿ ಆಗಿದೆ. ನಮಗೆ ಇವತ್ತಿನ ಸಂದರ್ಭದಲ್ಲಿ ಬಹಳ ಮುಖ್ಯವಾಗಿರುವುದೇನೆಂದರೆ, ಇವತ್ತು ನೀರನ್ನು ಯಾವ ರೀತಿಯಾಗಿ ರಕ್ಷಣೆ ಮಾಡಬಹುದು, ಯಾವ ರೀತಿಯಾಗಿ ನೀರನ್ನು savingಮಾಡಬಹುದು ಎನ್ನತಕ್ಕದ್ದು ಬಹಳ ಮುಖ್ಯವಾದ ವಿಚಾರ. ಅದಕ್ಕೆ ಪರ್ಯಾಯವಾಗಿ ನಾವು ಯಾವ ಯಾವ ರೀತಿಯಲ್ಲಿ ಯೋಜನೆಗಳನ್ನು ಮಾಡುತ್ತೇವೆ ಎನ್ನುವುದು ಕೂಡ ಬಹಳ ಮುಖ್ಯವಾಗಿರತಕ್ಕ ವಿಚಾರ ಎನ್ನುವ ಮಾತನ್ನು ಹೇಳುವ ಹಿನ್ನೆಲೆಯಲ್ಲಿ ಒಂದೇ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮಲ್ಲಿ ನೀರಿನ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಡಾ: ಅಮೃತಾ ಪಟೇಲ್ ರವರು ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. Water water, everywhere, but not a drop to drink. ಅದನ್ನು ಯಾವ ಹಿನ್ನೆಲೆಯಲ್ಲಿ ಹೇಳಿದ್ದಾರೆಂದರೆ, The Asian Development Bank in its draft report on 'Water operational Framework 2011-2020', explicitly cautioned that by 2030, water shortages are likely to aggregate 40% in developing Asia and in india. Water usage has been predicted to undergo significant change, by 89% in agriculture, 6% in industry and 5% in domestic use in 2000 and it has estimated that the irrigation sector would consume about 79% of the available water resources in 2015. Howerver, with the focused attention to promote improved water management practices in irrigation projects suffering from operational deficiencies, even a 10% improvement in the water use efficiency in agriculture is likely to increase its availability by 40%.ಅಂದರೆ ನಮ್ಮ ನೀರನ್ನು ಹೇಗೆ ಒಂದು ಪಾಲಿಸಿಯಡಿಯಲ್ಲಿ ತಂದು ನಿಯಂತ್ರಣ ಮಾಡಲು ಸಾಧ್ಯ, Saveಮಾಡಲು ಸಾಧ್ಯ, Utilisationಜಾಸ್ತಿ ಮಾಡಲು ಸಾಧ್ಯ ಎಂಬ ವಿಚಾರವನ್ನು ಕೂಡಾ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಎಲ್ಲವೂ ಕೂಡಾ ಬಹಳ ಮುಖ್ಯವಾದ ವಿಚಾರಗಳಾಗುತ್ತವೆ. ನಾನು ಮಂತ್ರಿಗಳಿಗೆ ಬೇಕಾದರೆ ಈ ವಿಚಾರಗಳನ್ನು ಕಳುಹಿಸಿಕೊಡುತ್ತೇನೆ. ಎಲ್ಲವನ್ನೂ ಓದಲು ಕಾಲಾವಕಾಶ ಇಲ್ಲವೆಂಬ ಕಾರಣಕ್ಕೆ ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಹೇಳುತ್ತಾರೆ. In 2008 besides 65000 villages are still 'no source' villages and estimated 20 crore people access unhygienic water. 20 ಕೋಟಿ ಜನರಿಗೆ ಕುಡಿಯುವ ನೀರಿಗೆ ಒಳ್ಳೆಯ ನೀರು ಸಿಗುತ್ತಿಲ್ಲ ಎನ್ನತಕ್ಕ report ಇದೆ. Number of villages are not only deprived of having a dependable source of drinking water but many others have, also, been experiencing impact of hazardous chemicals in the aquifers of groundwater viz., fluoride, nitrate, chloride, arsenic, sulphide, iron, zinc, chromium and salinity. These are all the concerns of the world bank reprot. ಇದನ್ನು ನಾನು ಏಕೆ ಉಲ್ಲೇಖ ಮಾಡಿದೆನೆಂದರೆ, ಮುಂದೆ ಏನಾಗುತ್ತದೆಂಬ ಬಗ್ಗೆ ನಮಗೆ ಎಲ್ಲೋ ಒಂದು ಕಡೆ ಎಚ್ಚರಿಕೆಯ ಗಂಟೆ ಇರಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಮತ್ತೆ ಬಹಳ ಮುಖ್ಯವಾಗಿ ಕರ್ನಾಟಕದ ಪರಿಸ್ಥಿತಿ ಏನಾಗಿದೆ ಎಂಬುದು ನೋಡಬೇಕು. ಏಕೆಂದರೆ ನಿಮ್ಮ ಕಳಕಳಿ, problematic villages ಎಷ್ಟಿದೆ ಎಂಬ ಬಗ್ಗೆ ಕೇಳುತ್ತಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ. ಈಗ ನಮ್ಮಲ್ಲಿexploitation ಎಷ್ಟು ಆಗಿದೆ ಎಂದರೆ, ಕರ್ನಾಟಕದಲ್ಲಿರುವ ಪ್ರತಿಯೊಂದು ಜಿಲ್ಲೆಯ exploitationಎಷ್ಟಾಗಿದೆ ಎಂಬ ಅಂಕಿ ಅಂಶಗಳು ನನ್ನ ಬಳಿಯಿದೆ. 30 ಜಿಲ್ಲೆಗಳಲ್ಲಿ ಕೂಡ ಇವತ್ತು most critical ಎಂದರೆ 35 ತಾಲ್ಲೂಕುಗಳು. ಅದರಲ್ಲಿ safer, ಅಂದರೆ semi-critical ಎನ್ನುವಂತಹದು ಸುಮಾರು 70–80 ಇದೆ. safeಎನ್ನುವುದು ಕೇವಲ 70 ತಾಲ್ಲೂಕುಗಳು ಮಾತ್ರ. 176 ತಾಲ್ಲೂಕುಗಳಲ್ಲಿ 70 ತಾಲ್ಲೂಕುಗಳನ್ನು ಬಿಟ್ಟರೆ ಇನ್ನು 106 ತಾಲ್ಲೂಕುಗಳು ಇವತ್ತು critical & semi-critical. That means over exploited. Exploitation to what extent?ಇವತ್ತು ಬಾಗಲಕೋಟೆಯಲ್ಲಿ 99% exploitationಆಗಿದೆ. ಬೆಂಗಳೂರು ಗ್ರಾಮಾಂತರದಲ್ಲಿ 132%, ಬೆಂಗಳೂರು ನಗರ ಜಿಲ್ಲೆಯಲ್ಲಿ 142%, ರಾಮನಗರದಲ್ಲಿ 109%, ಬೆಳಗಾವಿ 107%, ಕೋಲಾರ 180% ಇಷ್ಟರಮಟ್ಟಿಗೆ exploitationಆದರೆ ಮುಂದಿನ 10 ವರ್ಷಗಳಲ್ಲಿ ಕರ್ನಾಟಕ ಒಂದು ಮರುಭೂಮಿ ಆಗುತ್ತದೆ ಎನ್ನುವುದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಅರ್ಥ ಮಾಡಿಕೊಂಡು ಇವತ್ತು ಯಾವರೀತಿ ನಿಯಂತ್ರಣ ಮಾಡಲು ಸಾಧ್ಯ, ನೀರನ್ನು ಹೇಗೆ ರಕ್ಷಣೆ ಮಾಡುವುದಕ್ಕೆ ಎಂಬ ಬಗ್ಗೆ ಯೋಚನೆ ಮಾಡಬೇಕಾದಾಗ ನನ್ನ ಒಂದೇ ಸಲಹೆ ಎಂದು ಹೇಳಿದರೆ, ಇವತ್ತು Micro irrigation is only the system that can save karnataka,ಇನ್ನೇನೂ ಅಲ್ಲ. ಬೇರೆ ಬೇರೆ ರಾಜ್ಯಗಳಲ್ಲಾಗಿರುವ experiments ಅನ್ನು ಕೂಡ ಅರ್ಥ ಮಾಡಿಕೊಳ್ಳಲು ಪ್ರಯತ್ನ ಪಡೋಣ. ಅರ್ಥ ಮಾಡಿಕೊಂಡು ಇದನ್ನು ಏನಾದರೂ ಮಾಡಿ ಈ ರೀತಿ ಕರ್ನಾಟಕ ಮರುಭೂಮಿ ಆಗುವುದನ್ನು ತಪ್ಪಿಸಲು ಸಾಧ್ಯವೇ ಎಂಬ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಬಹುಶಃ ಈ ವಿಚಾರದಲ್ಲಿ ಹೆಚ್ಚಿನ ಬೆಳಕನ್ನು ಚೆಲ್ಲಬೇಕೆಂದು ನಾನು ಯೋಚನೆ ಮಾಡಿದ್ದರೂ ಕೂಡ ಅದಕ್ಕೆ ಕಾಲಾವಕಾಶ ಇಲ್ಲದ ಕಾರಣ ಹೆಚ್ಚಾಗಿ ಹೇಳಲು ಹೋಗುವುದಿಲ್ಲ. ಆದ್ದರಿಂದ ದಯಮಾಡಿ ಅದರ ಬಗ್ಗೆ ನೀವು ಹೆಚ್ಚು ಯೋಚನೆ ಮಾಡಬೇಕು. ಈ ರೀತಿ over exploitation ಆದಾಗ ನೀರಿನ qualityಹೇಗಿರುತ್ತದೆ ಎಂಬುದನ್ನು ಹೇಳಬೇಕಾ? ನಮ್ಮ ಜಿಲ್ಲೆಯ 238 ಹಳ್ಳಿಗಳಲ್ಲಿ ಕುಡಿಯುವ ನೀರು

fluorideಯುಕ್ತವಾಗಿದ್ದು, ಅದನ್ನು ಕುಡಿಯಲು ಸಾಧ್ಯವೇ ಇಲ್ಲ. ಅದಕ್ಕೆ ಪರ್ಯಾಯವಾದ ವ್ಯವಸ್ಥೆ ಮಾಡಬೇಕೆಂದು ನಿನ್ನೆ ಚರ್ಚೆ ಮಾಡಿದ ಹಿನ್ನೆಲೆಯಲ್ಲಿ ರಾಜ್ಯದ ಪರಿಸ್ಥಿತಿಯನ್ನು ಕೂಡ ಇಂದು ಅವಲೋಕನ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಇಂತಹ ಹಳ್ಳಿಗಳು ಎಷ್ಟಿವೆ ಎಂಬುದನ್ನು ನೋಡಬೇಕಾಗುತ್ತದೆ. ಆ ದಿಸೆಯಲ್ಲಿ ಎಲ್ಲೋ ಒಂದು ಕಡೆ ಯೋಚನೆ ಮಾಡದಿದ್ದರೆ ಬಹಳ ಕಷ್ಟ ಆಗುತ್ತದೆ. ದಯಮಾಡಿ ಇದರ ಬಗ್ಗೆ ಗಮನವನ್ನು ಹರಿಸುವ ಕೆಲಸ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಅಧ್ಯಕ್ಷರೆ, ನಾನು ಒಂದೇ ಒಂದು ವಿಚಾರವನ್ನು ಈ ಮಧ್ಯೆ ಹೇಳುತ್ತೇನೆ. ನಾವು ಇದನ್ನು ನಿಯಂತ್ರಣ ಮಾಡಲು ಸಾಧ್ಯ ಇದೆಯೇ ಎಂದರೆ, ಸಾಧ್ಯವಿದೆ. ನೀರನ್ನು ಎಷ್ಟರಮಟ್ಟಿಗೆ ದುರ್ಬಳಕೆ ಮಾಡುತ್ತಿದ್ದೇವೆಂದರೆ, ನಾವು ರಾಗಿ ಬೆಳೆಯಬೇಕೆಂದರೆ, 1 ಕೆ.ಜಿ ರಾಗಿಗೆ ಕೇವಲ 300 ಲೀಟರ್ ನೀರನ್ನು ಉಪಯೋಗಿಸುತ್ತೇವೆ. ಆದರೆ ಒಂದು ಕೆ.ಜಿ. ಭತ್ತವನ್ನು ಬೆಳೆಯಬೇಕಾದರೆ ಎರಡ ರಿಂದ ಎರಡೂವರೆ ಸಾವಿರ ಲೀಟರ್ ನೀರನ್ನು ಉಪಯೋಗಿ–ಸುತ್ತೇವೆಂದರೆ, ಅದರ ಮೇಲೆ ನಿಯಂತ್ರಣ ತರದಿದ್ದರೆ, ಅದಕ್ಕೆ ಒಂದು ರೀತಿ ಯೋಜನೆಗಳನ್ನು ಮಾಡದಿದ್ದರೆ ನಾವು ಹೇಗೆ ನೀರು ಒದಗಿಸಲು ಸಾಧ್ಯ? ನೀರನ್ನು ನಾವು ಯಾರೂ ಕೂಡಾ ಸೃಷ್ಟಿ ಮಾಡಲು ಸಾಧ್ಯವಿಲ್ಲ. ಪ್ರಕೃತಿದತ್ತವಾ–ಗಿರತಕ್ಕಂತಹ ನೀರನ್ನು ಉಳಿಸಬೇಕಾದಾಗ ನಮ್ಮದೇ ಆಗಿರತಕ್ಕಂತಹ ಪಾಲಿಸಿ ತೆಗೆದುಕೊಳ್ಳಬೇಕು ಎಂಬ ಮಾತನ್ನು ಹೇಳುವಾಗ ಒಂದೇ ಒಂದು ಮಾತನ್ನು ನಾನು ಹೇಳುತ್ತೇನೆ. ಇವತ್ತು ಅದಕ್ಕೆ immediateಆಗಿ ಶಾಶ್ವತವಾಗಿರತಕ್ಕ ಯೋಜನೆಗಳನ್ನು ಮಾಡಬೇಕಾದಾಗ ಹತ್ತಾರು ವರ್ಷಗಳು ಆಗುತ್ತವೆ. ಅಲ್ಲಿಯವರೆಗೆ ಜನರು ಬದುಕಬೇಕು. ಬಾಳುವೆ ಮಾಡಬೇಕು. ಅದರಲ್ಲೂ ಯುವಕರು ಮಕ್ಕಳು, ಹೆಚ್ಚು fluorideಯುಕ್ತ ನೀರಿನಿಂದ ಅಂಗಹೀನ, ಊನ ಆಗುತ್ತಿರುವುದು ಇವತ್ತು ನಮಗೆ ಕಂಡುಬರುತ್ತಿರುವ ದೃಶ್ಯ. ಹಾಗಾಗಿ ಅದಕ್ಕೆ ನೀವು ಒಂದು ಯೋಜನೆ ಮಾಡಬೇಕಾದಾಗ ನಾವು ನಿನ್ನೆ ಯೋಚನೆ ಮಾಡಿದಂತಹ ರೀತಿಯಲ್ಲಿ ನಮ್ಮಲ್ಲಿ ಕೆಲವು ಅವಕಾಶ ಇದೆ. ನಾನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯವರ ಬಗ್ಗೆ ಪ್ರಸ್ತಾಪ ಮಾಡಿದೆ. ಸಭೆ ಮುಗಿದ ತಕ್ಷಣ ಅವರ ಜೊತೆ ಚರ್ಚೆ ಮಾಡಿದಾಗ ಅವರು ನಮ್ಮ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿರತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆನ್ನತಕ್ಕ ಮಾತನ್ನು ಹೇಳಿದ್ದಾರೆ ಹಾಗೂ ಒಪ್ಪಿಕೊಂಡಿದ್ದಾರೆ. ಇನ್ನು ಒಂದು ಬಹಳ ಮುಖ್ಯವಾದ ಸರ್ಕಾರದ ಆದೇಶ ಸಂಖ್ಯೆ: 11.06.2012ರಲ್ಲಿ ಮೂರು ಕಂಪನಿಗಳು, Smart

Aqua Technology, water life, sri sai water Treatmentಎಂಬ ಮೂರು ಜನರಿಗೆ ಇವತ್ತು entrustಮಾಡಿದ್ದಾರೆ.ಇದನ್ನು ಬಹಳ ವರ್ಷದ ನಂತರ entrustಮಾಡಿದ್ದಾರೆ.ಅದನ್ನು ಮಾಡಿದರೂ ಕೂಡ ಇಲ್ಲಿಯವರೆಗೆ ಯಾರೂ ಬಂದಿಲ್ಲ. ದಯಮಾಡಿ ಅವರನ್ನು ನೀವೇ ಕರೆದು ಚರ್ಚೆ ಮಾಡಿ, ಇದಕ್ಕೆ addressಮಾಡುವ ರೀತಿಯಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಬೇಕು. ಆಗ ಧರ್ಮಸ್ಥಳದವರನ್ನು ಕರೆದು ಅವರು ಎಷ್ಟರಮಟ್ಟಿಗೆ ಮಾಡುತ್ತಾರೆ ಎಂಬುವುದನ್ನು ನೀವೇ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು ಎಂಬ ಮಾತನ್ನು ಹೇಳುತ್ತಾ, ನಿನ್ನೆ ಸಭೆಯಲ್ಲಿ ಹೋದಾಗ ಒಂದು ವಿಚಾರ ನಿಮ್ಮ ಗಮನಕ್ಕೆ ಬಂತು. ಮೇವಿನ ದರದ ಬಗ್ಗೆ ಒಂದು ಪ್ರಶ್ನೆ ಬಂತು. ನಿಮ್ಮ Government order ಪ್ರಕಾರ ಮೇವು ಇರತಕ್ಕದ್ದು ಕೇವಲ ಭತ್ತದ ಒಣ ಹುಲ್ಲಿಗೆ 4500ರೂ, ಬಾಡದ ಕಬ್ಬು ಬಾಡಿದ ಕಬ್ಬು, ಸೋಗೆ ಸಹಿತ 2 ಸಾವಿರ ರೂ. ಹಸಿರು ಮೇವಿಗೆ 1500 ರೂ. ರಾಗಿಯ ಒಣಹುಲ್ಲು 4 ಸಾವಿರ ರೂ. ನನಗೆ ಅನಿಸುತ್ತದೆ ರಾಗಿ ಒಣ ಹುಲ್ಲು ಇವತ್ತು 15 ರಿಂದ 20 ಸಾವಿರ ಕೊಟ್ಟರೂ ರಾಗಿ ಹುಲ್ಲು ಇವತ್ತು ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಸರ್ಕಾರಿ ಆದೇಶಗಳು ಈ ರೀತಿಯಾದರೆ, ನಮ್ಮ ಕರ್ನಾಟಕ ಸರ್ಕಾರದ ನಡವಳಿಗಳಲ್ಲಿ ಈ ರೀತಿಯಾಗಿ ಹೇಳಿದರೆ ಅಧಿಕಾರಿಗಳು ಯಾವ ರೀತಿಯಾಗಿ ಧೈರ್ಯವಾಗಿ ಕೆಲಸ ಮಾಡುತ್ತಾರೆ ದಯಮಾಡಿ ಯೋಚನೆ ಮಾಡಿ. ನೀವು ಯಾವುದೇ ಕಾಲದಲ್ಲಿಯೂ ಕೂಡ ಇವತ್ತು ಮಾರ್ಕೆಟ್‌ನಲ್ಲಿ ಏನು ಸಿಗುತ್ತಿದೆ, ಆ ರೇಟ್‌ನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಬೇಕು. ಆ ರೀತಿಯಾದಂತಹ instructionsಅನ್ನು ನೀವು ಜಿಲ್ಲಾಧಿಕಾರಿಗಳಿಗೆ ಕೊಡಬೇಕು.ದಯಮಾಡಿ, ರಾಗಿ ಹುಲ್ಲಿಗೆ ಇವತ್ತು 4 ಸಾವಿರ ಎಂದು ಇದೆ, ಇದನ್ನು ದಯಮಾಡಿ ಬದಲಾಯಿಸುವಂತಹ ಕೆಲಸವನ್ನು ಮಾಡಿ. ಇದು ಕೇವಲ 3–4 ತಿಂಗಳಲ್ಲಿ ಮಾಡಿರತಕ್ಕಂತ ಆದೇಶ. ರಾಗಿ ಹುಲ್ಲು ಅಂದರೇನು, ಭತ್ತದ ಹುಲ್ಲು ಎಂದರೇನು, ಒಣ ಹುಲ್ಲು ಎಂದರೇನು ಎಂದು ಗೊತ್ತಿಲ್ಲದೇ ಇರತಕ್ಕಂತಹ ಇಲಾಖೆಯವರ ಸಲಹೆಗಳ ಮೇಲೆ ಇಂಥ ಆದೇಶಗಳನ್ನು ಹೊರಡಿಸುವುದರಿಂದ ಇವತ್ತು ಜನ ನಗುತ್ತಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಬಹಳ ಮುಖ್ಯವಾದ ಅಂಶವೆಂದರೆ, ಇವತ್ತು ಬೇರೆ ಬೇರೆ ರಾಜ್ಯದಲ್ಲಿ ಏನೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದು ನೋಡಬೇಕಾದರೆ ನಾನು ಕೆಲವು ರಾಜ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇವತ್ತು ಮುಖ್ಯವಾಗಿ ಹೇಳತಕ್ಕಂತಹದು ಎಂದರೆ ಜನರು ವಲಸೆ

ಹೋಗುತ್ತಿದ್ದಾರೆ. ವಲಸೆ ಹೋಗಬೇಕಾದಾಗ ಅವರ ಕೈಗೆ ಉದ್ಯೋಗವನ್ನು ಕೊಡಬೇಕು. ಉದ್ಯೋಗವನ್ನು ಕೊಡಬೇಕಾದಾಗ ನಮ್ಮಲ್ಲಿರತಕ್ಕಂತಹ ಯೋಜನೆ ಏನೆಂದರೆ ಹೇಳಿದರೆ, ಅದು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ. ಉದ್ಯೋಗ ಖಾತರಿ ಯೋಜನೆಯನ್ನು ನಾವು ಜಾರಿಗೊಳಿಸಬೇಕಾದಾಗ ಇರತಕ್ಕಂತಹ ತೊಂದರೆಗಳೇನಿವೆ ಎನ್ನುವ ಬಗ್ಗೆ ನಾನು ಸೂಕ್ಷ್ಮವಾಗಿ ನಿಮ್ಮ ಗಮನಕ್ಕೆ ತರಬೇಕಾಗುತ್ತದೆ. ಹಿಂದಿನ ಮುಖ್ಯ ಮಂತ್ರಿಗಳು ಇವತ್ತು ಆ ಖಾತೆಯನ್ನು ನಿರ್ವಹಿಸುತ್ತಿದ್ದರು. ಆವತ್ತಿನ ಸಂದರ್ಭ ಬೇರೆ, ಇವತ್ತಿನ ಸಂದರ್ಭ ಬೇರೆ. ಅತ್ಯಂತ ಸಂಕಷ್ಟದಲ್ಲಿರತಕ್ಕಂತಹ ಸಂದರ್ಭದಲ್ಲಿ ಇವತ್ತು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದೀರಿ. ಈಗ ನೀವು ಮಾಡಬೇಕಾಗಿರತಕ್ಕಂತಹದು ಏನು ಎನ್ನುವ ಬಗ್ಗೆ ಸೂಕ್ಷ್ಮವಾಗಿ ವಿಚಾರವನ್ನು ನಿಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಾವು ಯಾವ ರೀತಿಯಾಗಿ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡು ಬಂದಿದ್ದೇವೆ ಎನ್ನುವ ಬಗ್ಗೆ ಹೇಳುತ್ತೇನೆ. 2006–07 ರಿಂದ 2012–13 ರವರೆಗೂ ಕೂಡ ಎಷ್ಟರಮಟ್ಟಿಗೆ ನಾವು ಆ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದೇವೆಂದರೆ, ನಿಮಗೆ ಅಂಕಿ ಅಂಶಗಳನ್ನು ಹೇಳಿದರೆ ಗೊತ್ತಾಗುತ್ತದೆ. ನಾವು 2006–07 ರಲ್ಲಿ ರೂ.341 ಕೋಟಿ ಹಣ ಲಭ್ಯವಿದ್ದು, ಬಳಕೆ ಮಾಡಿರುವುದು ರೂ.251 ಕೋಟಿ ಮಾತ್ರ. ಅದರಲ್ಲಿ ಸೇವಿಂಗ್ ಆಯಿತು. 2007–08 ರಲ್ಲಿ ರೂ.419 ಕೋಟಿ ಇತ್ತು, ನಾವು ಖರ್ಚು ಮಾಡಿರುವುದು ರೂ.236 ಕೋಟಿ. 2008–09 ರಲ್ಲಿ ರೂ.3038 ಕೋಟಿ ಇತ್ತು, ನಾವು ಖರ್ಚು ಮಾಡಿರುವುದು ರೂ.2216 ಕೋಟಿ. 2009–10 ರಲ್ಲಿ 3305 ಕೋಟಿ ಇತ್ತು, ನಾವು ಖರ್ಚು ಮಾಡಿರುವುದು ರೂ.1856 ಕೋಟಿ. 2010–11 ರಲ್ಲಿ ರೂ.1903 ಕೋಟಿ ಇತ್ತು, ಖರ್ಚು ಮಾಡಿರುವುದು ರೂ.1430 ಕೋಟಿ. ಇವತ್ತು ರೂ.1430 ಕೋಟಿ ಮಾತ್ರ ಬಳಕೆ ಮಾಡಿಕೊಂಡಿರತಕ್ಕದ್ದು. 2011–12 ರಲ್ಲಿ ನಾವು ಬಳಕೆ ಮಾಡಿರುವುದು ರೂ.1430 ಕೋಟಿ. ಅಂದಾಜು 2012–13 ರಲ್ಲಿ ಎಷ್ಟಾಗಿದೆ ಎನ್ನುವುದು ನಾವು ನಿನ್ನೆ ನೋಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಎಷ್ಟಾಗಿದೆ ಎಂದರೆ, 2 ಲಕ್ಷ 45 ಸಾವಿರ ಜನ ಇವತ್ತು cardholdersಇದ್ದಾರೆ. ಕೂಲಿ ಬೇಕೆಂದು ರಿಜಿಸ್ಟರ್ ಮಾಡಿರುವವರು 2 ಲಕ್ಷ 45 ಸಾವಿರ ಕಾರ್ಡ್‌ದಾರರುಗಳು ಇದ್ದಾರೆ, ಅದರ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ ಇಲ್ಲಿಯವರೆಗೆ ,ನಾವು ಬಳಕೆ ಮಾಡಿರುವುದು ಕೇವಲ 96 ಲಕ್ಷ ರೂ.ಗಳು. 4 ತಿಂಗಳಲ್ಲಿ ಕೇವಲ ಒಂದು ಕೋಟಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆ. ಏಪ್ರಿಲ್, ಮೇ,ಜೂನ್, ಜುಲೈ ಆಗಿದೆ. Now we are entering August.ನಾಲ್ಕು ತಿಂಗಳಲ್ಲಿ ಕೇವಲ ಒಂದು ಕೋಟಿ ಪ್ರೋಗ್ರೆಸ್

ಮಾಡಿತು ಎಂದರೆ ಅದು ಹೇಗೆ? ಅದನ್ನು ನಾವು ಯಾವ ರೀತಿಯಾಗಿ ಜಾಸ್ತಿ ಮಾಡುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಕೂಲಿಗೋಸ್ಕರ ಜನರು ವಲಸೆ ಹೋಗುತ್ತಿದ್ದಾರೆ ಎನ್ನುವುದು ಎಲ್ಲಾ ಪತ್ರಿಕೆಗಳಲ್ಲಿ ಕೂಡ ಸಾರಾಸಗಟಾಗಿ ಬಂದಿರತಕ್ಕಂತಹದು. ನಾವು ಗಡಿ ಪ್ರದೇಶದಲ್ಲಿರತಕ್ಕಂತವರು, ವ್ಯಾಪಕವಾಗಿ ನಮ್ಮ ಭಾಗಗಳಲ್ಲಿ ನೋಡುತ್ತೇವೆ. ತಮ್ಮ ದನಗಳನ್ನು ಹೊಡೆದುಕೊಂಡು ಅವರು ಕೂಡ ಜೀವನಕ್ಕೋಸ್ಕರ ಆಂಧ್ರಪ್ರದೇಶಕ್ಕೆ ಸಾಲುಸಾಲಾಗಿ ಹೋಗುತ್ತಿರುವ ದೃಶ್ಯವನ್ನು ಇವತ್ತು ನಾವು ನೋಡುತ್ತಿದ್ದೇವೆ. ಇವತ್ತು ವಿಧಾನ ಸಭೆಯಲ್ಲಿ ಕೇವಲ ಮಾತಾಡಬೇಕು ಅನ್ನುವ ಕಾರಣಕ್ಕೋಸ್ಕರ ಇದನ್ನು ಹೇಳುತ್ತಿಲ್ಲ. ಇದು ವಾಸ್ತವವಾಗಿರತಕ್ಕಂತಹ ಸಂಗತಿ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ಮುಖ್ಯವಾಗಿರತಕ್ಕಂತಹ ಅಂಶವೆಂದು ಹೇಳಿದರೆ, ನಾವು ಇವತ್ತು ಕೂಲಿಗೋಸ್ಕರ onlineನಾವು amount transfer ಮಾಡುತ್ತೇವೆ. ಕೂಲಿಗೋಸ್ಕರ ನಾವು ಕೊಡುತ್ತೇವೆ. ಆದರೆ ಕೂಲಿಗೋಸ್ಕರ ಕೊಡುವಂತಹ ಸಂದರ್ಭದಲ್ಲಿ ನಾವು ಇವತ್ತು ಹಣ ಖರ್ಚಾಗದೆ ಇರತಕ್ಕಂತದು ಎಷ್ಟಿದೆ ಎಂದರೆ, 2008–09 ರಲ್ಲಿ 857 ಕೋಟಿ ರೂ.ಗಳು ಉದ್ಯೋಗ ಖಾತ್ರಿಯಲ್ಲಿ labour budget ಎಂದು ಇಟ್ಟಂತಹ ಹಣ ಬಿಡುಗಡೆಯಾಗಿಲ್ಲ. 2009–10 ರಲ್ಲಿ 1508 ಕೋಟಿ ರೂ.ಗಳು ಖರ್ಚಾಗಲಿಲ್ಲ. 2010–11ರಲ್ಲಿ 3643 ಕೋಟಿ ರೂ.ಗಳು ಖರ್ಚಾಗಲೇ ಇಲ್ಲ. 2011–12 ರಲ್ಲಿ ರೂ.1503 ಕೋಟಿ labourಗೆ issueಆಗಿದ್ದಂತಹ ಹಣ ಖರ್ಚಾಯಿತು. ಆದರೆ materialcomponentಗೆ ಆಯಿತೇವಿನಹ ಲೇಬರ್‌ಗೋಸ್ಕರ ಇದ್ದಂತಹ ಹಣ ಖರ್ಚಾಗಲೇ ಇಲ್ಲ. ಅಂದರೆ ಯಾವ ಬಡವರ ಕೈಗೆ ಕೂಡ ಹಣ ದೊರಕಲೇ ಇಲ್ಲ. ಇದು ನಿಮ್ಮ ಗಮನದಲ್ಲಿರಲಿ.. ಇದನ್ನು ಮಾಡಬೇಕಾದಾಗ, ಇವತ್ತು ನಿಮಗೆ ಕೆಲವು ಅವಕಾಶವಿದೆ. ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಯಲ್ಲಿ ತಾವು ನೋಡಿದ್ದೀರಿ. ಈಗಾಗಲೇ The Hinduನಲ್ಲಿ ಕೋಟ್ ಮಾಡಿರತಕ್ಕಂತಹದನ್ನು ನೋಡಿದಾಗ, ದೇಶದಲ್ಲಿ ಸುಮಾರು 8 ರಾಜ್ಯಗಳು ಬರಗಾಲಕ್ಕೆ ತುತ್ತಾಗಿರತಕ್ಕಂತಹದು ಇದೆ. ಅದರಲ್ಲಿ ಕೂಡ ವಿಶೇಷವಾಗಿ, ಕರ್ನಾಟಕದಲ್ಲಿ ವ್ಯಾಪಕವಾಗಿದೆ, ಜಾಸ್ತಿ ಇದೆ. ಇವತ್ತು ಇದನ್ನು ಎಲ್ಲರೂ ಕೂಡ ಗಮನಿಸಬೇಕಾಗಿರತಕ್ಕಂತಹದು. ಅದಕ್ಕೆ ಪರ್ಯಾಯವಾಗಿ ಯಾವ ಯಾವ ರೀತಿಯಾದಂತಹ ಯೋಜನೆಗಳನ್ನು ಮಾಡಬೇಕು ಎನ್ನುವ ಬಗ್ಗೆ ಕೂಡ ವಿಶ್ಲೇಷಣೆ ಇದೆ. ಅದನ್ನು ನಾವು ಯೋಚನೆ ಮಾಡಬೇಕಾದಾಗ, ಕುಡಿಯುವ ನೀರಿನದು ಕೂಡ ಬಹಳ ಪ್ರಮುಖವಾಗಿರುಗವಂತಹದು. ಅದಕ್ಕೆ ಏನು

ಮಾಡಬೇಕು ಎನ್ನುವ ಬಗೆ ಈಗಲೇ ನಾವು ಚಿಂತನೆ ಮಾಡತಕ್ಕಂತಹದು ಸೂಕ್ತ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹಳ ಮುಖ್ಯವಾಗಿರುವಂತಹ ಇನ್ನೊಂದು ವಿಷಯವೆನೆಂದರೆ, ಈಗ ಹಸಿದ ಹೊಟ್ಟೆಗಳು. ಇವತ್ತು ಅರೆ ಹೊಟ್ಟೆಯಲ್ಲಿರತಕ್ಕಂತಹ ಕೂಲಿಗಾರರು ಇದ್ದಾರೆ. ಅವರ ಪರಿಸ್ಥಿತಿ ಏನು? ಬೇರೆ ಬೇರೆ ರಾಜ್ಯದಲ್ಲಿ ಏನು ಮಾಡಿದ್ದಾರೆ ಎನ್ನುವ ಬಗ್ಗೆ ಯೋಚನೆ ಮಾಡಬೇಕು. ನಿನ್ನೆ ಮತ್ತು ಬೆಳಿಗ್ಗೆ ಕೂಡ ನಾನು ಮಾತನಾಡಿದ್ದೇನೆ. ಇವತ್ತು ನಮ್ಮ ಗಡಿ ಭಾಗದಿಂದ ಆಂಧ್ರಪ್ರದೇಶಕ್ಕೆ ಜನ ಯಾವ ಕಾರಣಕ್ಕೋಸ್ಕರ ವಲಸೆ ಹೋಗುತ್ತಿದ್ದಾರೆಂದರೆ, ಆಂಧ್ರ ಪ್ರದೇಶದಲ್ಲಿ ಏನು ಮಾಡಿದ್ದಾರೆಂದರೆ, ಅಲ್ಲಿಯೂ ಕೂಡಾ ನಮ್ಮಷ್ಟೇ ಬರಗಾಲವಿದೆ. ಆ ಬರಗಾಲ ಇರತಕ್ಕಂತಹ ಪ್ರದೇಶಗಳಲ್ಲಿ ಅವರು ಏನು ಕಾರ್ಯಕ್ರಮಗಳು ಹಮ್ಮಿಕೊಂಡಿದ್ದಾರೆಂದರೆ, ಅವರು ಆಹಾರ ಧಾನ್ಯಗಳನ್ನು ಎಷ್ಟು ಕೊಡುತ್ತಾರೆಂದು ಕೇಳಿದರೆ, ನಮ್ಮ ಹಾಗೆ ತಲೆಗೆ 4 ಕೆ.ಜಿ. ಎಂದು ಲೆಕ್ಕ ಹಾಕಿ ಕೊಡುತ್ತಾರೆ.ಅವರಲ್ಲಿ minimumಇಲ್ಲ, maximumಇಲ್ಲ. ನೀವು ಮನೆಯಲ್ಲಿ 10 ಜನ ಇದ್ದು, ಅದರಲ್ಲಿ ಒಂದು ಮಗು ಇದ್ದರೂ ಸಹ ಪ್ರತಿಯೊಂದು ತಲೆಗೆ 4 ಕೆ.ಜಿ.ಯಂತೆ ಲೆಕ್ಕ ಹಾಕುತ್ತಾರೆ. ಆದರೆ ನಾವು 12 ವರ್ಷದ ಒಳಗಿನ ಮಕ್ಕಳಿಗೆ ಒಂದು ತಲೆ ಎಂದು ಗುರುತಿಸುವುದಿಲ್ಲ. ಅವರಿಗೆ ಆಹಾರ ಧಾನ್ಯಗಳನ್ನು ಕೊಡುವುದಿಲ್ಲ. ಆಂಧ್ರ ಪ್ರದೇಶದಲ್ಲಿ averageಎಂದು ಹೇಳಿದರೆ ಒಂದು ಕಾರ್ಡ್‌ಗೆ 35 ಕೆ.ಜಿ. ಸರಾಸರಿ ಬರುತ್ತಿದೆ. ಎಷ್ಟು ರೇಟ್ ಎಂದು ಹೇಳಿದರೆ, ದಯಮಾಡಿ, ನಾವು ಯೋಚನೆ ಮಾಡಬೇಕು, 1 ಕೆ.ಜಿ.ಗೆ 1 ರೂ. ಅದರ ಜೊತೆಯಲ್ಲಿ ಕಾರ್ಡ್‌ನ್ನು ಯಾರಿಗೆ ಕೊಟ್ಟಿದ್ದಾರೆಂದರೆ, 2 ಕೋಟಿ 60 ಲಕ್ಷ ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಎಪಿಎಲ್, ಬಿಪಿಎಲ್, ಅಂತ್ಯೋದಯ ಎಂದು ಯಾವುದೂ ಇಲ್ಲ. ಬಡವರು ಎನ್ನಿಸಿಕೊಂಡಂತಹ ಎಲ್ಲರಿಗೂ ಕೂಡ ಸಾರಾಸಗಟಾಗಿ ಕಾರ್ಡ್‌ನ್ನು ಕೊಡುವಂತಹ ಕೆಲಸವನ್ನು ಮಾಡಿ, ಬಜೆಟ್‌ನಲ್ಲಿ ಸುಮಾರು 4 ಸಾವಿರ ಕೋಟಿ ರೂ.ಗಳನ್ನು ಒಂದು ವರ್ಷಕ್ಕೆ ಖರ್ಚು ಮಾಡುತ್ತಿದ್ದಾರೆ. ಆ ಕಾರಣಕ್ಕೋಸ್ಕರ ಇವತ್ತು ಜನ ಬೇರೆ ರಾಜ್ಯಕ್ಕೆ ವಲಸೆ ಹೋಗುತ್ತಿಲ್ಲ, ಅದನ್ನು ಹುಡುಕಿಕೊಂಡು ಇವತ್ತು ಜನ ನಮ್ಮ ರಾಜ್ಯದಿಂದ ಹೊರಗಡೆ ಹೋಗುತ್ತಿದ್ದಾರೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಬೇರೆಯವರು ಮಾಡಿರುವುದನ್ನು ನಾವು ಏಕೆ ಮಾಡುವುದಕ್ಕೆ ಆಗುವುದಿಲ್ಲ? ಅದನ್ನೂ ತಾವು ಯೋಚನೆ ಮಾಡಿ. ಇನ್ನೊಂದುphysically handicappedಗೆ ಸಂಭಂದಿಸಿದಂತೆ ಕಂದಾಯ ಇಲಾಖೆ ಉಪ ಮುಖ್ಯಮಂತ್ರಿಗಳೇ, ನಿಮ್ಮದೇ ಆಗಿದೆ. ನಾನು ಹಿಂದೆ ಮಾನ್ಯ

ಸದಾನಂದ–ಗೌಡರಿಗೆ ಒಂದು ಮಾತನ್ನು ಹೇಳಿದ್ದೆ, ಸದನದಲ್ಲಿ physically handicapped ಬಗ್ಗೆ ಹೇಳಿಕೆಯನ್ನು ಕೊಡಬೇಡಿ, ಅಧಿಕಾರಿಗಳು ಬರೆದು ಕೊಟ್ಟಿರುವ ಉತ್ತರವನ್ನು ಹೇಳಬೇಡಿ, ನಮ್ಮಲ್ಲಿ ದುಡ್ಡು ಇಲ್ಲ, ಲಕ್ಷಾಂತರ ಜನರು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಬೇಡಿ, ಲಕ್ಷ, ಕೋಟಿ ಬಗ್ಗೆ ಮಾತನ್ನಾಡುತ್ತೀರಿ, ಈ physically handicapped ಗೆ ರೂ.400\– ಕೊಡುವುದಕ್ಕೆ ತಾರತಮ್ಯ ಮಾಡುತ್ತಿದ್ದೀರೆಂದು ಹೇಳಿದಾಗ ಅವರು ಅದಕ್ಕೆ, ಇದನ್ನು ಮರುಪರಿಶೀಲನೆ ಮಾಡುತ್ತೇನೆಂದು ಹೇಳಿದರು. ನಾನು ನನ್ನ ಮತಕ್ಷೇತ್ರದ್ದನ್ನೇ ಹೇಳುತ್ತೇನೆ. 3300 ಜನ physically handicappedಗೆ ರೇಷನ್ ಕೊಡುವುದಕ್ಕೆ ಆಗುವುದಿಲ್ಲವೆಂದು cancelಮಾಡಿದ್ದರು. ಕೊನೆಗೆ ಅದರ ಮರು ಪರಿಶೀಲನೆ ಮಾಡಿ ಸರ್ಕಾರ ಆದೇಶ ಮಾಡಿದ ಮೇಲೆ 1900 ಜನಕ್ಕೆ ತಪ್ಪಾಗಿದೆ, ಅವರಿಗೆ ಕೊಡಬೇಕೆಂದು ಅಧಿಕಾರಿಗಳು ತೀರ್ಮಾನ ಮಾಡಿದರು. ಆ ವರದಿ ಬಂದು ಸರ್ಕಾರದ ಮುಂದೆ ಕುಳಿತಿದೆ. ಒಂದು ವರ್ಷವಾದರೂ ಕೂಡಾ ಇವತ್ತಿನವರೆಗೆ ಇದನ್ನು ಇತ್ಯರ್ಥ ಮಾಡಲಿಲ್ಲ. ನೀವು ಯಾವ ಊರಿಗೆ ಹೋದರೂ ಕೂಡ physically handicapped ನವರು ನಮಗೆ ಏನು ಕೊಟ್ಟಿದ್ದೀರಿ, ನಮಗೆ ಏಕೆ ನಿಲ್ಲಿಸಿದ್ದೀರಿ, ನಾವು ಹೇಗೆ ಜೀವನ ಮಾಡಬೇಕೆಂದು ಕೇಳಿದಾಗ, ಇವತ್ತು ನಿಜವಾಗಲೂ ಕೂಡ ಕರುಳು ಕಿತ್ತುಕೊಂಡು ಬರುತ್ತದೆ. ಅಂತಹ ಪರಿಸ್ಥಿತಿ ಇವತ್ತು ಹಳ್ಳಿಗಳಲ್ಲಿದೆ. ಹಳ್ಳಿಗಳಲ್ಲಿ ನಾವು ನಮ್ಮ ಗಾಡಿಯಿಂದ ಇಳಿದ ತಕ್ಷಣ physically handicapped persons ನಮ್ಮ ಎದುರಿಗೆ ಬಂದು ನಿಲ್ಲುತ್ತಾರೆ. ನಮಗೆ Ration card ಇಲ್ಲ ಎಂದು ದೂರುತ್ತಾರೆ. ಅವರಿಗೂ ಕೂಡ Ration card ಕೊಟ್ಟಿಲ್ಲ. ಆಗ ನಾನು ಯೋಚನೆ ಮಾಡಿದೆ. ಆಂಧ್ರ ಪ್ರದೇಶದಲ್ಲಿ ಏನು ಮಾಡುತ್ತಿದ್ದಾರೆಂದರೆ,physically handicapped personsಗೆ compulsory 3.5 ಕೆ.ಜಿ.ಯನ್ನು 1ರೂ. ರೇಟಿನಂತೆ ಕೊಡುತ್ತಿದ್ದಾರೆ, ತಿಂಗಳಿಗೆ 500 ರೂ.ಗಳನ್ನು ಸಹಾ ಕೊಡುತ್ತಿದ್ದಾರೆ. ನಾವು ಏಕೆ ಇದನ್ನೆಲ್ಲಾ ಮಾಡಲಿಕ್ಕೆ ಸಾಧ್ಯವಿಲ್ಲ? ದಯಮಾಡಿ ಯೋಚನೆ ಮಾಡಿ. ಇನ್ನೊಂದು ಬಹಳ ಮುಖ್ಯವಾಗಿ, ಇವತ್ತು ನಮ್ಮ ಹಾಗೆ ಬರಗಾಲಕ್ಕೆ ತುತ್ತಾಗಿರತಕ್ಕ ಪ್ರದೇಶದಲ್ಲಿ ರೈತರಿಗೆ ಅವರು ಪರಿಹಾರ ಕೊಡುತ್ತಿದ್ದಾರೆ. ಅಂತಹವರಿಗೆ 1 ಹೆಕ್ಟೇರ್‌ಗೆ 4,500/– ರೂ.ಗಳಂತೆ, ಸಾರಾಸಗಟಾಗಿ ಬೆಳೆ ಹಾಳಾಗಿರತಕ್ಕವರೆಲ್ಲರಿಗೂ ಕೂಡ out of state fund, they are giving money. CRF ನಲ್ಲಿ ಬರತಕ್ಕಂಥ ಹಣದ ಜೊತೆಗೆ ಇದನ್ನು ಕೊಡುತ್ತಿದ್ದಾರೆ. ಇವತ್ತು CRF ನ ಅಡಿಯಲ್ಲಿ ಬೆಳೆ

ನಷ್ಟ ಆಗಿರತಕ್ಕಂಥ ಸಂದರ್ಭದಲ್ಲಿ ಏನು ಕೊಡಬೇಕು ಎನ್ನುವಂಥದ್ದನ್ನು ನಾವು ಒಪ್ಪಿಕೊಂಡಿದ್ದೇವೆ.ಅದನ್ನು ಅವರು ಅಲ್ಲಿ ಕೊಡುತ್ತಿದ್ದಾರೆ, ನಾವು ಕೊಡುತ್ತಿಲ್ಲ. ಯಾವ ಮಟ್ಟದಲ್ಲಿ ನಮ್ಮ ರೈತನಿದ್ದಾನೆ ಎನ್ನುವುದಕ್ಕೆ ಒಂದೇ ಒಂದು ಮಾತನ್ನು ಹೇಳುತ್ತೇನೆ. 'The Agriculture and allied sectors have shown a negative growth of 2.9 ನಿನ್ನೆ ಮಾತನಾಡಬೇಕಾದಾಗ, ಗುಜರಾತ್‌ನಲ್ಲಿ 11% ಇದೆ, ನಾವ್ಯಾಕೆ 2.9% ರಲ್ಲಿದ್ದೇವೆ ಎಂದು ನಾನು ಹೇಳಿದೆ. ನಾವು ಏಕೆ ಅವರಿಂದ ಪಾಠವನ್ನು ಕಲಿಯಬಾರದು ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ಇವತ್ತು, the negative growth in agriculture is mainly due to crop due to drought and floods. ಕರ್ನಾಟಕದ ಪರಿಸ್ಥಿತಿ ಏನೆಂದರೆ, 'Composition of GSDP shows a further decline in the share of Agriculture and allied activities sector (16.9% in 2010-11 to 15.9% in 2011-12) as well as the industry sector (28.6% in 2010-11 to 27.77% in 2011-12) The survey states that, it's a matter of concern that, over the years, the contribution of Agriculture sector to the economy has been declining continuously without a commensurate decline in the workforce deployed in agriculture. ಇದು ಬಹಳ ಮುಖ್ಯವಾಗಿರುವಂತಹದ್ದು. ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ನೀವು ಬರುವುದಕ್ಕೆ ಸಾಧ್ಯವೇ? ಎನ್ನುವ ಬಗ್ಗೆ ಒಂದು ಪ್ರಶ್ನೆಯನ್ನು ಇಡುತ್ತೇನೆ. ಇಂದೂ ಕೂಡ ನಾವು ರೈತರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಒಂದು ಕಡೆ ಉದ್ಯೋಗ ಖಾತ್ರಿ ಯೋಜನೆಗೆ ಕೊಟ್ಟಂತಹ ಹಣ ಖರ್ಚು ಮಾಡಲಿಕ್ಕಾಗುತ್ತಿಲ್ಲ. ಈ ವರ್ಷ ಇರತಕ್ಕಂಥ ದುಡ್ಡಿನಲ್ಲಿ ನಾನು ಹೇಳುತ್ತೇನೆ, ನೀವು 100 ಕೋಟಿ ರೂ.ಗಳ ಸಾಧನೆಯನ್ನೂ ಕೂಡ ಮಾಡಲಿಕ್ಕೆ ನಿಮಗೆ ಸಾಧ್ಯವಿಲ್ಲ. ಆ ಮಟ್ಟಕ್ಕೆ ಇರಬೇಕಾದಾಗ ನೀವು ಈಗ ಯೋಚನೆ ಮಾಡಬೇಕು. ಈಗ ಏನಾದರೂ ಮಾಡಿ ರೈತರನ್ನು ಮತ್ತು ಉದ್ಯೋಗ ಖಾತ್ರಿ ಯೋಜನೆಯನ್ನು ಸಿಂಕ್ರೊನೈಸ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರ ಅನುಮೋದನೆ ಮಾಡಿರತಕ್ಕ ಯೋಜನೆಗಳು ಇವತ್ತು ಕೃಷಿ ಇಲಾಖೆಯಲ್ಲಿ ಈಗಾಗಲೇ ಜಾರಿಯಲ್ಲಿವೆ. ಗ್ರಾಮೀಣ ಪ್ರದೇಶದಲ್ಲಿ ಅವನು ಹೊಲದಲ್ಲಿ ಮಾಡತಕ್ಕಂಥ ಕೆಲಸ, ಊರಿನಲ್ಲಿ ಮಾಡತಕ್ಕಂಥ ಕೆಲಸ, ಇವತ್ತು ಕೃಷಿ ಇರಬಹುದು, ತೋಟಗಾರಿಕೆ ಇರಬಹುದು ಅಥವಾsericulture ನಲ್ಲಿ ಇರಬಹುದು, ಏನೇನು ಮಾಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರ

ಒಪ್ಪಿತರತಕ್ಕಂಥಯೋಜನೆಗಳಿವೆ. ಆ ಯೋಜನೆಯನ್ನು link ಮಾಡತಕ್ಕಂಥ ಕೆಲಸವನ್ನು ನೀವು ಮಾಡಿದರೆ, ಬಹುಶಃ ಇವತ್ತು ನಿಜವಾಗಿಯೂ ಕೂಡ ಕೂಲಿಕಾರರು ಬದುಕಲಿಕ್ಕೆ ಸಾಧ್ಯವಿದೆ, ಕೃಷಿಕರೂ ಕೂಡ ಬದುಕಲಿಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಇವತ್ತು ಗ್ಯಾಲರಿಯಲ್ಲಿ ಕುಳಿತಿರತಕ್ಕ chief Secretary ಯವರೂ ಸಹ ಇದರ ಬಗ್ಗೆ ಯೋಚನೆ ಮಾಡಬೇಕು. ಇಡೀ ದೇಶದಲ್ಲಿ ಯಾರೂ ಕೂಡ ಇದರ ಬಗ್ಗೆ ಯೋಚನೆ ಮಾಡಿಲ್ಲ. ಇವತ್ತು ಉದ್ಯೋಗ ಖಾತ್ರಿ ಯೋಜನೆ ಮೂಲಕ ರೈತರ ನೆರವಿಗೆ ಹೋಗಿ, ಅವನಿಗೆ ಸಹಾಯ ಮಾಡತಕ್ಕಂಥ ಚಿಂತನೆಯನ್ನು ಇವತ್ತು ಆಂಧ್ರ ಪ್ರದೇಶದಲ್ಲೂ ಕೂಡ ಮಾಡುತ್ತಿದ್ದಾರೆ. ಇವತ್ತು ಸರ್ಕಾರವೇ ಮುಂದೆ ಹೋಗಿ, ಪ್ರತಿಯೊಬ್ಬರಿಗೂ ಕೂಡ 5 ಎಕರೆಯವರೆಗೂ ತೋಟಗಳನ್ನು ಮಾಡಿಕೊಡುವಂತಹ ಕೆಲಸ ಮಾಡಿದೆ. ಮಾವನ್ನು ನೆಡಿಸುವುದು ಮತ್ತು ರೈತ ಆಗಿರತಕ್ಕವನು ಅದನ್ನು maintain ಮಾಡತಕ್ಕ ಕೆಲಸವನ್ನು ಅಲ್ಲಿ ಮಾಡಿದ್ದಾರೆ. ಇದನ್ನು ಅವರು ಯೋಚನೆ ಮಾಡಬೇಕಾದಾಗ, ನಾವ್ಯಾಕೆ ಹಿಂದೆ ಬಿದ್ದಿದ್ದೇವೆ? ದಯಮಾಡಿ ಅದರ ಬಗ್ಗೆ ಯೋಚನೆ ಮಾಡಿ. ಹೋದ ವರ್ಷ ಮಳೆಯಿಲ್ಲ, ಈ ವರ್ಷವೂ ಇಲ್ಲ, ಮಳೆ ಬಂದರೂ ಕೂಡ ಇಲ್ಲಿ ಬೆಳೆ ಇಲ್ಲ, ಕುಡಿಯಲಿಕ್ಕೆ ನೀರು ಸಿಗಬಹುದು ಅಷ್ಟೇ. ಇಂತಹ ಸಂದರ್ಭದಲ್ಲಿ ರೈತರಾಗಿರತಕ್ಕವರು ನಕ್ಸಲೀಯರಾಗಿ ಬೆಳೆಯುತ್ತಾರೆ. ಇವತ್ತು ರೈತರು ನಕ್ಸಲೀಯರಾಗುತ್ತಾರೆ. ಅವರ ಸಾಲಗಳು ಇವತ್ತು ದುಬಾರಿಯಾಗಿವೆ. ಹಳ್ಳಿಗಳಿಗೆ ಹೋದಾಗ ನಮಗೆ ಕಾಣತಕ್ಕದ್ದು ಒಂದೇ ಒಂದು ದೃಶ್ಯ. 'ನಮಗೆ ಸಾಲದ ನೋಟಿಸು ಬಂದಿದೆ, ನಮ್ಮ ಕೈಯ್ಯಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲ' ಎಂದು ಹೆಳುತ್ತಾರೆ. ಸ್ತ್ರೀ ಶಕ್ತಿ ಸಂಘದವರು ಬಂದು, 'ನಮಗೆ ದುಡ್ಡು ಕಟ್ಟುವುದಕ್ಕಾಗುವುದಿಲ್ಲ, ನಮಗೆ ಟೈಮ್ ಕೊಡಿಸಿ, ನಾವು ಜೀವನ ಮಾಡುವುದೇ ಕಷ್ಟವಾಗಿದೆ, ನಾವು ಮಕ್ಕಳನ್ನು ಸಾಕುವುದೆ ಕಷ್ಟವಾಗಿದೆ' ಎಂದು ಹೇಳುವಂತಹ ಮಟ್ಟದಲ್ಲಿ ನಾವು ಇದ್ದೇವೆ. ದಯಮಾಡಿ ಯೋಚನೆ ಮಾಡಿ. ನಾವು ಎಲ್ಲೋ ಒಂದು ಕಡೆಗೆ ರೈತರಿಗೆ ಮುಕ್ತಿಯನ್ನು ಕೊಡಬೇಕಾದಾಗ, ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ. ಅದನ್ನು ಸ್ವಲ್ಪಮಟ್ಟಿಗೆ ಮಾಡಬೇಕಾಗುತ್ತದೆ. ಸಾಲ ಮನ್ನಾ ಮಾಡಿದಾಕ್ಷಣಕ್ಕೆ ಎಲ್ಲಾ ರೈತರಿಗೆ ಸಹಾಯವಾಗುತ್ತದೆ ಎಂದು ನಾನು ಹೇಳುವುದಿಲ್ಲ. ಯಾವ್ಯಾವ ರೈತರಿಗೆ ಎಷ್ಟೆಷ್ಟು percent, ಯಾವ್ಯಾವ ರೀತಿಯಲ್ಲಿ ಅವನ ಸಾಲದ ಹೊರೆಯನ್ನು ಇಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸರ್ಕಾರದವರು ಇಲ್ಲಿ ಕುಳಿತು ಯೋಚನೆ ಮಾಡುವುದು ಸೂಕ್ತ. ಇವತ್ತು ಅರೆ ಹೊಟ್ಟೆಯಲ್ಲಿ ಬದುಕುತ್ತಿರುವ ರೈತರಿಗೆ, ಕೂಲಿ ಕಾರ್ಮಿಕರಿಗೆ, ಆ ಯೋಜನೆಯನ್ನು

ಸಂಯೋಜಿಸಿ ಆ ಯೋಜನೆಯನ್ನು ಸಿಂಕ್ರೊನೈಸ್ ಮಾಡತಕ್ಕಂತ ಕೆಲಸವನ್ನು ಮಾಡಿದರೆ ಹೆಚ್ಚಿನ ಸಹಾಯವಾಗುತ್ತದೆ. ಅದರ ಬಗ್ಗೆ ಯೋಚನೆಯನ್ನು ಮಾಡಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ ಹೇಳುವುದಾದರೆ, ಬರಗಾಲಕ್ಕೆ ಸಂಬಂಧಿಸಿದ್ದು ಅಲ್ಲದಿದ್ದರೂ ಕೂಡ, ಒಂದು ಯೋಚನೆಯನ್ನು ನಾವು ಮಾಡಬೇಕಾಗುತ್ತದೆ. ನೀವು ಬರಗಾಲದ ಪೀಡಿತ ಪ್ರದೇಶ ಎಂದು ಏನು ಹೇಳುತ್ತೀರೋ, ಅಲ್ಲಿ ನಮಗೆ ಒಮ್ಮೊಮ್ಮೆ ನೋಡಿದರೆ, ಬರಗಾಲ ಇದೆಯೋ? ಇಲ್ಲವೋ? ಎಂದೆನಿಸುತ್ತದೆ. ಜೂಜು, ಮಟ್ಕಾ, ಕಳ್ಳಭಟ್ಟಿ ದಂಧೆ ಅಲ್ಲಿ ನಡೆಯುತ್ತಿದೆ. ಇವತ್ತು ಅನಧಿಕೃತವಾಗಿ ಸಾರಾಯಿ ಹಳ್ಳಿಗಳಲ್ಲಿ ಸಾರಾ ಸಗಟಾಗಿ ಸಿಗುತ್ತಿದೆ. ಇವತ್ತು ಅಲ್ಲಿ ನಮಗೆ ಸಿಗುತ್ತಿರುವುದು ನೀರಲ್ಲ, ಸಾರಾಯಿ! ಅಧ್ಯಕ್ಷರೆ, ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಎಷ್ಟೋ ಸಂಸಾರಗಳು, ಮಾಂಗಲ್ಯಗಳು ಇದರಿಂದಾಗಿ ಹಾಳಾಗಿ ಹೋಗಿವೆ. ನಿನ್ನೆ Deputy Commissioner officeಬಾಗಿಲಿನಲ್ಲಿ, ಮಾನ್ಯ ಈಶ್ವರಪ್ಪನವರು ಬರುವುದಕ್ಕೆ ಮುಂಚೆ ನಾನು ಹೋಗಿದ್ದೆ, ಆಗ ಅಲ್ಲಿ 200 ಜನ ಕುಳಿತಿದ್ದರು. ಪಾಪ! ಅಧಿಕಾರಿಗಳೆಲ್ಲರೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳು ಬರುತ್ತಿದ್ದಾರೆಂದು ಅವರನ್ನು ಕಳುಹಿಸಿದರು. ನಾನು ಹೋಗಿ ಅವರನ್ನು ಏನು ಎಂದು ಕೇಳಿದೆ? 'ನಮ್ಮ ಮನೆಯಲ್ಲಿ ಕುಡಿದು ಯದ್ವಾತದ್ವಾ ಗಲಾಟೆಗಳನ್ನು ಮಾಡುತ್ತಾರೆ, ನಮ್ಮ ಮಾಂಗಲ್ಯ ಉಳಿಸಿ ಎಂದು ತೋರಿಸುವುದಕ್ಕೋಸ್ಕರವಾಗಿ Deputy Commissionerನವರ ಹತ್ತಿರ ನಾವು ಬಂದಿದ್ದೇವೆ' ಎಂದು ಅವರು ನನಗೆ ಹೇಳಿದರು. ನಾನು Excise Superintendent ನವರನ್ನು ಮತ್ತು Inspector ರವರನ್ನು ಈ ಬಗ್ಗೆ ಕೇಳಿದೆ. ಅವರು 'ನಮಗೆ target ಕೊಟ್ಟಿದ್ದಾರೆ, ಆ target ಅನ್ನು ನಾವು achieve ಮಾಡಲೇಬೇಕು, target achieve ಮಾಡಬೇಕಾದಾಗ ಅದನ್ನು sale ಮಾಡಲೇಬೇಕು' ಎಂದರು. ಅಂದರೆ, ನಾವು ನೀರು ಕೊಡುತ್ತಿಲ್ಲ, ಸಾರಾಯಿ ಕೊಡುತ್ತಿದ್ದೇವೆ. ಅವರಿಗೆ ನೀರು ಕುಡಿ ಎಂದು ಹೇಳುತ್ತಿಲ್ಲ, ನಾವು ಸಾರಾಯಿ ಕುಡಿ ಎಂದು ಹೇಳುತ್ತಿದ್ದೇವೆ. ಎಂದರೆ Law and order ಏನಾಗಿದೆ? Law and order and villagers are in the control of very bad elements.ಆ ಗೂಂಡ ಪ್ರವೃತ್ತಿ ಇವತ್ತು ಹಳ್ಳಿಗಳಲ್ಲಿ ಬೆಳೆಯುತ್ತಿದೆ. ಮಾನ್ಯ ಶಿವಣ್ಣನವರು ಈಗತಾನೇ ಸದನಕ್ಕೆ ಬಂದರು. ಈ ಗುಂಡಾ ಪ್ರವೃತಿ ಎಷ್ಟರಮಟ್ಟಿಗೆ ಬೆಳೆಯುತ್ತಿದೆ ಎಂದರೆ, ಮರಳು ದಂಧೆ ಇದೆ ಇವತ್ತು ಕುಡಿತದಿಂದಾಗಿ ಮಾಂಗಲ್ಯಗಳನ್ನು ಹರಾಜಿಗೆ ಹಾಕುವ ಮಟ್ಟಕ್ಕೆ ಪರಿಸ್ಥಿತಿ

ಬಂದಿವೆ. ಎಂದರೆ ಇದನ್ನು ನಾವು ಏಕೆ ನಿಯಂತ್ರಣ ಮಾಡಬಾರದು? ದಯಮಾಡಿ ಇದರ ಕಡೆಗೂ ಕೂಡ ಗಮನ ಇರಬೇಕು. ಇವತ್ತು ಕೂಲಿ ಕಾರ್ಮಿಕರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಮಹಿಳೆಯವರು ಇವತ್ತು ಅಳುತ್ತಿದ್ದಾರೆ. ಯಾವ ರೀತಿಯಲ್ಲೂ ಇವತ್ತು ಕುಡಿತವನ್ನು control ಮಾಡಲಿಕ್ಕಾಗುತ್ತಿಲ್ಲ. ಅಧ್ಯಕ್ಷರೆ, ಯಾವ ತರಹ ಎಂದರೆ rationing ರೀತಿ ಮಾರಾಟವಾಗುತ್ತಿದೆ. ನೀವು ಅಂಗಡಿಗೆ ಹೊಗಿ, ಅಕ್ಕಿ ಬೇಕು ಎಂದರೆ, ಅಕ್ಕಿ ಜೊತೆಗೆ ಒಂದು ಬಾಟಲ್ ಸಾರಾಯಿಯನ್ನೂ ಸಹ ತೆಗೆದುಕೊಳ್ಳಬೇಕು ಎನ್ನುತ್ತಾರೆ. It was made compulsory. ಪೊಲೀಸ್‌ನವರಾಗಲಿ ಅಥವಾ ಇಲಾಖೆಯವರಾಗಲಿ, ಯಾರೂ ಕೂಡ ಇದರ ಬಗ್ಗೆ ಗಮನ ಹರಿಸುತ್ತಿಲ್ಲ. ಏಕೆಂದರೆ ಅವರಿಗೆ ವರಮಾನ ಬರಬೇಕಲ್ಲವೇ? ಅವರಿಗೆ ವರಮಾನ ಬರುವುದಕ್ಕೋಸ್ಕರ ಸಾರಸಗಟಾಗಿ ಇವತ್ತು ಇದನ್ನು ನಡೆಯಲು ಬಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಇವತ್ತು ಸರ್ಕಾರ ಯೋಚನೆ ಮಾಡಬೇಕು. ಹೇಗೆ ಇದನ್ನು ಹೊರಗಡೆ ತರಬೇಕು ಎಂಬ ಬಗ್ಗೆ ನೀವು ಯೋಚನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಬಹಳ ಮುಖ್ಯವಾಗಿ ಇನ್ನೊಂದು point ಅನ್ನು ಹೇಳುವುದಕ್ಕೆ ನಾನು ಮರೆತೆ. ಇವತ್ತು BAIF ಎಂಬಂತಹ ಸಂಸ್ಥೆಯೊಂದು ಇದೆ. ಅದು Nationally known ಸಂಸ್ಥೆಯಾಗಿದೆ. ಆ ಸಂಸ್ಥೆ ನಮ್ಮ ತಾಲ್ಲೂಕಿನಲ್ಲಿ, ವಿಶೇಷವಾಗಿ ಆಂಧ್ರ ಮತ್ತು ಇಲ್ಲೆಲ್ಲಾ ಕೂಡ, ಫ್ಲೋರೋಸಿಸ್ ಪೀಡಿತವಾಗಿ– ರತಕ್ಕಂಥ ಪ್ರದೇಶಗಳಲ್ಲಿ ಇವತ್ತು ಮಳೆನೀರು ಕೊಯ್ಲು ಮಾಡುವ 'ಸಚೇತನಾ' ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಿದ್ದಾರೆ. ನಾನು ನಿನ್ನೆ ನಿಮ್ಮನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಲಿಕ್ಕೆ ಆಗಲಿಲ್ಲ. ಆಗ ಮಳೆ ಹನಿ ಶುರುವಾಯಿತು, ಹಾಗಾಗಿ ನಾನು ನಿಮಗೆ ತೋರಿಸಲಿಕ್ಕಾಗಲಿಲ್ಲ. ಹಿಂದೆ,ಮಾನ್ಯ ಜಗದೀಶ್ ಶೆಟ್ಟರ್‌ರವರನ್ನು ಕರೆದುಕೊಂಡು ಹೋಗಿ ಅವರಿಗೆ ತೋರಿಸಿದ್ದೆ. ಮಾನ್ಯ ಈಶ್ವರಪ್ಪನವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ನಿಜವಾಗಿಯೂ ಕೂಡ ಅದನ್ನು ಮೆಚ್ಚಿ ಒಂದು project ಅನ್ನು ಮಾಡಿಸಿದರು. ಶಿರಾ ತಾಲ್ಲೂಕಿನ ಫ್ಲೋರೋಸಿಸ್ ಪೀಡಿತ ಹಳ್ಳಿಗಳಲ್ಲಿ 'ಸಚೇತನಾ' ಕುಡಿಯುವ ನೀರಿನ ಬಗ್ಗೆ ಎರಡನೇ ಹಂತದ ಮಂಜೂರಾತಿಗೋಸ್ಕರ ಈಗಾಗಲೇ ಪ್ರಸ್ತಾವನೆ ಒಂದು ವರ್ಷವಾಯಿತು. ಒಂದು ವರ್ಷದಿಂದ ಈ ಪ್ರಸ್ತಾವನೆಗೆ ಸರ್ಕಾರದಿಂದ ಅನುಮೋದನೆ ಸಿಗಲಿಲ್ಲ. ಬಹುಶಃ ಅದನ್ನು ಮಾಡಿದ್ದಾರೆ, ಬಹಳ ತೊಂದರೆ ಇರತಕ್ಕಂಥ ಪ್ರದೇಶಗಳಿಗೆ ಬಹಳಷ್ಟು ಸಹಾಯವಾಗುತ್ತದೆ. ದಯವಿಟ್ಟು ಅದರ ಕಡೆಗೆ ಗಮನ ಕೊಡಬೇಕು. ಇವತ್ತು ಮಳೆ ನೀರು ಕೊಯ್ಲನ್ನು regularize

ಮಾಡತಕ್ಕಂಥ ರೀತಿಯಲ್ಲಿ ನೀವು ಹೋಗಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇದು ನಿಮ್ಮ ಬಿ.ಜೆ.ಪಿ. ಪಕ್ಷದ ಒಂದು ನೀತಿಯೂ ಕೂಡ ಹೌದು. ಅದನ್ನು ನೀವು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಕುಡಿಯುವ ನೀರು ನೈರ್ಮಲ್ಯ ವಿಚಾರ ಪ್ರಸ್ತಾಪ ಬಂದಾಗ ರಾಜ್ಯದ ಎಲ್ಲಾ ಜನರಿಗೂ ಕುಡಿಯುವ ನೀರಿನ ಸೌಲಭ್ಯ ಗುಣಮಟ್ಟ ರಕ್ಷಣೆ ಮತ್ತು fluorosis ಮತ್ತಿತರ ರೋಗಗಳ ನಿಯಂತ್ರಣಕ್ಕೆ ಕ್ರಮವನ್ನು ವಹಿಸುತ್ತೇವೆನ್ನುವುದನ್ನು ಹಿಂದೆಯೇ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ರಾಜ್ಯಾದ್ಯಂತ ಮಳೆ ನೀರಿನ ಕೊಯ್ಲು ಮತ್ತು ಪುನರ್ ಶುದ್ಧೀಕರಣ ಹಾಗೂ ಜಲ ಸಂರಕ್ಷಣೆಗೆ ಕ್ರಮವನ್ನು ಮಾಡುತ್ತೇವೆ, ಎಲ್ಲಾ ಪ್ರದೇಶಗಳ ಮೇಲೆ ನೀರಿನ ಚರಂಡಿ, ಒಳಚರಂಡಿಗಳನ್ನು ಸರ್ವ ಸಮರ್ಪಕವಾಗಿ ಮಾಡುತ್ತೇವೆ. ಮನೆಗೊಂದು ಶೌಚಾಲಯ ನಿರ್ಮಾಣ ಕಾರ್ಯಕ್ರಮವನ್ನು ಚುರುಕುಕೊಳಿಸಿ ಮುಂದಿನ 2 ವರ್ಷದೊಳಗಾಗಿ ಇಡೀ ರಾಜ್ಯದಲ್ಲಿ ನೈರ್ಮಲ್ಯ ಮಟ್ಟವನ್ನು ಹೆಚ್ಚಿಸುತ್ತೇವೆ. ಸ್ವಸಹಾಯ ಸ್ತ್ರೀಶಕ್ತಿ ಗುಂಪುಗಳು, ನೈರ್ಮಲ್ಯದ ಬಗ್ಗೆ ಜನಜಾಗೃತಿ ಕ್ರಮದಲ್ಲಿಡುವುದು. ಇದೆಲ್ಲವನ್ನೂ ಹೇಳಿದ್ದೀರಿ, ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದು ಯಾವುದು ಆಗಿಲ್ಲ. ನಾನು ಪ್ರಣಾಳಿಕೆಯನ್ನು ತೆಗೆದಿರಲಿಲ್ಲ, ಇಟ್ಟಿದ್ದೆ, ಏಕೆಂದರೆ, ಈ ವರ್ಷ ತೆಗೆಯಬೇಕಾಗುತ್ತದೆ. ಇನ್ನು ವರ್ಷವಿಲ್ಲ, ಕೇವಲ 10 ತಿಂಗಳಿರುವಾಗ ನೀವು ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಏನೂ ಮಾಡಲಿಲ್ಲ, ಪ್ರಣಾಳಿಕೆಯಲ್ಲಿತ್ತು ಎನ್ನುವುದನ್ನು ಒಂದು ಸಾರಿ ನಿಮಗೆ ಜ್ಞಾಪಿಸಿಕೊಡುತ್ತೇನೆ. ಹಿಂದೆ ನೀವು ಬಿಜೆಪಿ ಅಧ್ಯಕ್ಷರಾಗಿದ್ದೀರಿ, ಪ್ರಣಾಳಿಕೆಯಲ್ಲಿ ಏನಿತ್ತು, ಜನರಿಗೆ ಏನು ವಚನ ಕೊಟ್ಟಿದ್ದೀರೆನ್ನುವುದನ್ನು ನೋಡಿಕೊಂಡು ನೀವು ಹೇಳಿದ್ದನ್ನು ಮಾಡಿ ಎಂದು ಹೇಳುವುದಕ್ಕೆ ಹೊರಟ್ಟಿದ್ದೇವೆಯೇ ಹೊರತು, ನಾವು ಹೇಳಿದ್ದನ್ನು ಕೇಳದಿದ್ದರೂ ಪರವಾಗಿಲ್ಲ, ನೀವು ಹೇಳಿದ ಕೆಲಸವಾದರು ದಯಮಾಡಿ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು Insurance ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನಿನ್ನೆ ಕಣ್ಣಾರೆ ನೋಡಿದಿರಿ, ಸ್ವಲ್ಪ ಮಳೆ ಬಂತು.ನಮ್ಮಲ್ಲಿ ಮಳೆ ಬಂದ ತಕ್ಷಣ 5 ಸೆಂಟಿ ಮೀಟರ್ ಮಳೆ ಬಂದರೆ ಶೇಂಗ್ ಬಿತ್ತನೆ ಮಾಡುತ್ತಾರೆ, ನನಗೆ ಅನಿಸುತ್ತದೆ ಒಂದು ವಾರದೊಳಗಾಗಿ 90% ಬಿತ್ತನೆ ಮಾಡಿದರೂ ಆಶ್ಚರ್ಯವಿಲ್ಲ. ಅಂಥ ಪ್ರದೇಶದಲ್ಲಿ Insurance ಸೌಲಭ್ಯವಿರ–ಬೇಕಾದಾಗ ಈ ತಿಂಗಳ ಕೊನೆಯವರೆವಿಗೂ, ಇವತ್ತು 1 ನೇ ತಾರೀಖು ಇನ್ನೊಂದು ವಾರ ಮುಂದೂಡಿಸಿ 30ನೇ ತಾರೀಖಿನವರೆಗೆ Insurance ಸೌಲಭ್ಯವನ್ನು ಕೊಡಬೇಕು, ಅದಕ್ಕೆ ಕೇಂದ್ರ ಸರ್ಕಾರದೊಡನೆ ಮಾತನಾಡಿ, 30ನೇ ತಾರೀಖಿನವರೆಗೆ ವಿಸ್ತರಿಸಬೇಕು. ಲೋನಿ ಫಾರ್ಮರ್ ಮತ್ತು ನಾನ್

ಲೋನಿ ಫಾರ್ಮರ್ಸ್ ಎಂದು ಇರುತ್ತಾರೆ, ಆದರೆ 90% ನಾನ್ ಲೋನಿ ಫಾರ್ಮರ್ಸ್ ಜಾಸ್ತಿ ಇರುವುದು, ಲೋನಿ ಫಾರ್ಮರ್ಸ್ 10% ಮಾತ್ರ ಇರುತ್ತಾರೆ. Insurance ಮಾಡುವ ಸಂದರ್ಭದಲ್ಲಿ ನಾನ್ ಲೋನಿ ಫಾರ್ಮರ್ಸ್‌ಗೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ಕಡೆಗೆ ವಿಶೇಷ ಗಮನವನ್ನು ಕೊಡಿ. ಇವತ್ತು ಈಗಾಗಲೇ ಡಿಕ್ಲೇರ್ ಆಗಿರುವುದು, ರಾಜ್ಯದಿಂದ ಕಟ್ಟಬೇಕಾಗಿರುವ ಹಣವನ್ನು ಕಟ್ಟಿಲ್ಲ, ಆ ಕಾರಣಕ್ಕೋಸ್ಕರ Insurance Company ಅವರು ಹಣ ಬಿಡುಗಡೆ ಮಾಡುತ್ತಿಲ್ಲ. ನಾನು ಬೇರೆ ಸಂದರ್ಭದಲ್ಲಿ ಹೇಳಿದ್ದೆ, ಇವತ್ತು ಕೂಡ ನಾನು ಆ ಮಾತನ್ನು ಹೇಳುತ್ತೇನೆ, 2011–12 ನೇ ಸಾಲಿಗೆ ದಯಮಾಡಿ ಏನು State share insurancedue ಇತ್ತು ಅದನ್ನು ಮೊದಲು ಕೊಟ್ಟು ರೈತರಿಗೆ ವಿತರಿಸುವ ಕೆಲಸವನ್ನು ಮಾಡಿ, ಇದು ಪ್ರಾಥಮಿಕವಾಗಿ ಮಾಡಬೇಕಾಗಿರುವುದು. ಇದನ್ನು ಎಂದೋ ಮಾಡಬೇಕಾಗಿದ್ದ ಕೆಲಸ, ಇವತ್ತು ಮಾಡಬೇಕು.

**ಶ್ರೀ ಎಂ.ಸಿ.ಉದಾಸಿ(ಲೋಕೋಪಯೋಗಿ ಸಚಿವರು):** ಇಡೀ ರಾಜ್ಯದಲ್ಲಿ ಒಟ್ಟು ಮುಂಗಾರು ಬೆಳೆಗೆ insurance premium ಹಣ ಕೊಡಬೇಕಾಗಿರುವುದು 43 ಕೋಟಿ ರೂಪಾಯಿಗಳು. ರಾಜ್ಯ ಸರ್ಕಾರದಿಂದ 12 ಕೋಟಿ ರೂಪಾಯಿಗಳನ್ನು ಭರಿಸಬೇಕಾಗಿತ್ತು, ಭರಿಸಿದ ಮೇಲೆ ಈಗಾಗಲೇ ಕೊಟ್ಟಾಗಿದೆ. 21ನೇ ತಾರೀಖಿನೊಳಗೆ ಎಲ್ಲಾ ಬ್ಯಾಂಕುಗಳಿಗೆ disburse ಆಗಿದೆ ಎನ್ನುವ ಮಾಹಿತಿ ಇದೆ. ಆ ಕಾರಣದಿಂದ ರಾಜ್ಯ ಸರ್ಕಾರದಿಂದ ಪ್ರಮಾದವಾಗಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆತರುತ್ತಿದ್ದೇನೆ.

**ಶ್ರೀ ಟಿ.ಬಿ.ಜಯಚಂದ್ರ:** ಪ್ರಮಾದವಾಗಿಲ್ಲ, ಅಂತೂ ತಡವಾಗಿದೆ. ಅದೇನಾದರೂ ಆಗಲಿ 30ಕ್ಕೆ ಬಂದರೆ ನಮ್ಮ ಪುಣ್ಯ. 30ರವರೆಗೆ ಅಸೆಂಬ್ಲಿ ನಡೆಯುತ್ತದೆ, ಈಶ್ವರಪ್ಪನವರು ಬಂದಿದ್ದಾರೆ ಕೊಡಿಸೇ ಕೊಡಿಸುತ್ತೇವೆ ಎಂದು ಹೇಳಿ ಬಂದಿದ್ದೇವೆ, 30ರೊಳಗೆ ಬಂದರೆ ನಾವೇ ಧನ್ಯ, ನಿಮ್ಮ ಮಾತೂ ಕೂಡ ಉಳಿದುಕೊಳ್ಳುತ್ತದೆ. ದಯಮಾಡಿ, ಅದರ ಕಡೆಗೆ ಸ್ವಲ್ಪ ನೀವು ಗಮನವನ್ನು ಕೊಡಿ.

ಇನ್ನು electricity problem ಬಗ್ಗೆ ಪದೇ ಪದೇ ಹೇಳುವ ಅವಶ್ಯಕತೆ ಇಲ್ಲ. ಇವತ್ತು ಮಳೆ ಇಲ್ಲದಿರುವಾಗ ಏನು ತೊಂದರೆಯಾಗುತ್ತದೆ ಎನ್ನುವುದು ಗೊತ್ತಿದೆ. ಅದಕ್ಕೆ ನಾನೊಂದು ಸಲಹೆ ಕೊಡುವುದೇನೆಂದರೆ, ಯಾವ ಕುಡಿಯುವ ಯೋಜನೆಗೂ ಕೂಡ ಇವತ್ತು ಕೆ.ಇ.ಬಿ.ನಲ್ಲಿ ಡಿಪಾಸಿಟ್ insist ಮಾಡುವ ರೀತಿಯಲ್ಲಿ ಏನು KPTCL ನವರು ಈಗಾಗಲೇ ತೀರ್ಮಾನ

ಘೋಷಿಸಿದ್ದಾರೆ, ಅದನ್ನು ಎಸ್ಕಾಂಗಳಿಗೆ ಡೈರಕ್ಷನ್ ಕೊಟ್ಟರೆ ತತ್ವಶಃ ಅನುಷ್ಠಾನ ಮಾಡತಕ್ಕಂತಹ ಕೆಲಸವನ್ನು ಮಾಡಿ compulsory ಕುಡಿಯುವ ನೀರಿಗೆ 25 ಕೆ.ವಿ.ಟಿ.ಸಿ.ಹಾಕಿ ಕೊಡಬೇಕು. ಅದಕ್ಕೆ ಬೇಕಾಗಿರುವ ಮೆಟೀರಿಯಲ್ ಇರಬಹುದು, ಉಪಕರಣಗಳಿರಬಹುದು, ಅವನ್ನು ಆದ್ಯತೆ ಮೇರೆಗೆ ಕೊಡಬೇಕು. ಇದರ ಜೊತೆಗೆ ನೀವು ವಿಶೇಷವಾಗಿ ಹಮ್ಮಿಕೊಂಡಂಥ ನಿರಂತರ ವಿದ್ಯುಚ್ಛಕ್ತಿ ಸರಬರಾಜು ಯೋಜನೆ ಇತ್ತಲ್ಲ, ಈಗಾಗಲೇ 90% ಕೆಲಸ ಮುಗಿದುಹೋಗಿದೆ. ಈವರೆವಿಗೂ ಚಾರ್ಜ್ ಆಗುತ್ತಿಲ್ಲವೆಂದರೆ, ಯಾವ ಕಾರಣಕ್ಕೋಸ್ಕರ ಆಗುತ್ತಿಲ್ಲ? ಬಹುಶಃ ಇನ್ನೂ ಕಂಟ್ರಾಕ್ಟರ್ಸ್ ಬಿಲ್ಲುಗಳು ಸೆಟ್ಲ್ ಆಗಿಲ್ಲವೆಂದು ಕಾಣುತ್ತದೆ. ಆ ಕಾರಣಕ್ಕೋಸ್ಕರ ಇವತ್ತು ನೀವು ನಿರಂತರಜ್ಯೋತಿ ಯೋಜನೆಯನ್ನು 100% ಎಲ್ಲಿ ಜಾರಿಯಲ್ಲಿದೆಯೋ ಅಲ್ಲಿ ಚಾರ್ಜ್ ಮಾಡುವ ಕೆಲಸವನ್ನು ಮಾಡಿದರೆ, ಕೊನೆಯ ಪಕ್ಷ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ವಿದ್ಯುತ್‌ನಿಂದಾ-ಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಯಥೇಚ್ಛವಾಗಿ ವಿದ್ಯುತ್ ಸಂಪರ್ಕಗಳನ್ನು ಏನು ಕೊಡುತ್ತೇವೆ ಅದಕ್ಕೆ ಹೆಚ್ಚಿನ ಸಹಾಯವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯಮಾಡಿ, ಆ ಟ್ರಾನ್ಸ್‌ಫಾರ್ಮರ್ ಗಳನ್ನು ಕೊಟ್ಟು ಕುಡಿಯುವ ನೀರಿನ ಸಮಸ್ಯೆಯನ್ನು ಇವತ್ತು ನೀಗಿಸುವ ಕೆಲಸವನ್ನು ಮಾಡಬೇಕು. ಕೊನೆಯದಾಗಿ, ನಿನ್ನೆ ಚರ್ಚೆ ಮಾಡಿರುವುದರಿಂದ ಸಭೆಯಲ್ಲಿ ಅನೇಕ ವಿಚಾರಗಳನ್ನು ಉಪ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಮನವರಿಕೆ ಮಾಡಿದ್ದೇನೆ. ಆ ಹಿನ್ನೆಲೆಯಲ್ಲಿ ನಾನು ಹೆಚ್ಚಿಗೆ ಮತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆ National Rural Drinking water project, Government of India ದಲ್ಲಿ ಎಷ್ಟು ಹಣವಿದೆ ಎನ್ನುವುದನ್ನು ದಯಮಾಡಿ ತರಿಸಿ. ಇವತ್ತು ಇಲ್ಲೇ ಮುಖ್ಯ ಕಾರ್ಯದರ್ಶಿ-ಯವರಿದ್ದಾರೆ, ನಾನು ಹೇಳುತ್ತೇನೆ, ಈ ವರ್ಷಕ್ಕೆ study team ಬಂದಾಗ, 850 ಕೋಟಿ ರೂಪಾಯಿಗಳಿವೆ, ಎಂದು ಹೇಳಿದರು. ಅದನ್ನು ಖರ್ಚು ಮಾಡುವುದಕ್ಕೆ ನೀವು ಯೋಚನೆ ಮಾಡಿ ಎನ್ನುವ ಮಾತನ್ನು ಹೇಳಿದರು. ಆದರೆ ಇದುವರೆವಿಗೂ ಅದಾಗಲಿಲ್ಲ, ಅದರ ಕಡೆಗೆ ಗಮನಹರಿಸಿ. ಆ ಯೋಜನೆಗೆ ಈಗಾಗಲೇ ಕ್ರಿಯಾ ಯೋಜನೆ ಮಂಜೂರಾಗಿದೆ, ಅದನ್ನು ಎಲ್ಲಾ ಕಡೆ ತತಕ್ಷಣ ಪ್ರಾರಂಭ ಮಾಡುವ ಕೆಲಸವನ್ನು ಮಾಡಿದರೆ, ಇವತ್ತು ಕುಡಿಯುವ ನೀರಿಗೆ NDRF, STRF ನಿಂದಾಗುವ ಹೊಡೆತ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ, on the contrary you can utilize Government of India funds. That is one thing that you should keep it in

mind.ಈಗ ಬಿತ್ತನೆ ಕೆಲಸ ಮುಗಿದು ಹೋಯಿತು. ಇನ್ನೂ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ನೀವು ಏನು ಮಾಡಬೇಕೆಂದರೆ, ನೀವು ಇವತ್ತಿನ ಸಂದರ್ಭದಲ್ಲಿ ಮಳೆ ಬಂದರೇನು ಬಾರದಿದ್ದರೇನು ಎಂದು contingency plan ಮಾಡಿಕೊಳ್ಳಬೇಕಾಗುತ್ತದೆ. ಆ ಪ್ಲಾನ್ ಮಾಡುವಾಗ ನಾನೊಂದು ಸಲಹೆಯನ್ನು ಕೊಡುತ್ತೇನೆ. ದಯಮಾಡಿ, ಯಥೇಚ್ಚವಾಗಿ ಮೆಕ್ಕೆಜೋಳವನ್ನು ಕೊಂಡು, ಇವತ್ತು ಎಲ್ಲಾ ಬರಗಾಲಪೀಡಿತ ಪ್ರದೇಶಗಳ ರೈತರಿಗೆ ಅತ್ಯಂತ ಕಡಿಮೆ ದರದಲ್ಲಿ ಕೊಡುವ ಕೆಲಸವನ್ನು ಮಾಡಿದರೆ ಅವರೇನು ಮಾಡುತ್ತಾರೆಂದರೆ, ಕೊನೆಯಪಕ್ಷ ಮೇವು ಸಿಗದಿದ್ದರೂ ಮೇವಿಗಾದರೂ ಕೂಡ ಉಪಯೋಗಿಸಲು ಸಾಧ್ಯವಾಗುತ್ತದೆ. ಹಾಗಾಗಿ ಯಥೇಚ್ಚವಾಗಿ ಮೆಕ್ಕೆಜೋಳ, ಬೀಜ ಎಲ್ಲಾ ರೈತರಿಗೂ ಸುಲಭ ದರದಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ದೊರೆಯುವಂಥ ರೀತಿಯಲ್ಲಿ ಮಾಡಬೇಕು. ಈಗ ಬರಗಾಲದ ಒಂದು ಕೊಡುಗೆ ಎನ್ನುವ ರೀತಿಯಲ್ಲಿ ಈಗ ನೀವು ನೂರಕ್ಕೆ ನೂರರಷ್ಟು ರೈತರಿಗೆ ಕೊಡುವಂಥ ಕೆಲಸವನ್ನು ಮಾಡಿದರೆ ಅದರಿಂದ ಇನ್ನೂ ಒಳ್ಳೆಯದಾಗುತ್ತದೆ. ಇದಕ್ಕೆಲ್ಲಾ ಬಹುಶಃ 100–150 ಕೋಟಿ ರೂಪಾಯಿಗಳು ಖರ್ಚಾಗಬಹುದಷ್ಟೇ ಬಹುಶಃ ಆ ಗೋ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಜನರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಾರೆ. ಆ ಕೆಲಸವನ್ನು ಮಾಡಬೇಕು ಎನ್ನುವ ಮಾತನ್ನು ಕೂಡ ನಾನು ಹೇಳುತ್ತೇನೆ. ನಿಮಗೆ ಫಾಡರ್ ಬದಲಾಗಿ ನಿನ್ನೆ ನಾನು ಸಲಹೆ ಕೊಟ್ಟ ರೀತಿಯಲ್ಲಿ ಓಪನ್ ಟೆಂಡರ್ಸ್ ಕರೆದು ಖಾಸಗಿಯವರಿಂದ ಅನಿಮಲ್ ಫೀಡ್ಸ್ ಅನ್ನು ಕೊಂಡು ಹಾಲು ಉತ್ಪಾದನೆ ಮಾಡುವ ಆ ಸೀಮೆ ಹಸುಗಳನ್ನು ಸಾಕುವವರಿಗೆ ಸುಲಭ ದರದಲ್ಲಿ ಸಿಗುವ ರೀತಿಯಲ್ಲಿ ಕೆಲಸವನ್ನು ಮಾಡಿದರೆ ಕೆಎಂಎಫ್ ಜೊತೆಯಲ್ಲಿ ಅಥವಾ ಕೆಎಂಎಫ್ ಗೆ ಪರ್ಯಾಯವಾಗಿ ಬರೆಗಾಲಕ್ಕೆ ತುತ್ತಾಗಿರತಕ್ಕ ಪ್ರದೇಶಗಳಿಂದ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಮತ್ತೆ ಇನ್ನೊಂದು ಅನುಮಾನ ನನಗೆ ಕಾಡುತ್ತಿದೆ. ನಿನ್ನೆ ಇವರು ಮಾತನಾಡುವಾಗ, 123 ತಾಲ್ಲೂಕುಗಳು ಇವತ್ತು ಬರಗಾಲಕ್ಕೆ ತುತ್ತಾಗಿವೆ ಎಂದು ಹೇಳುತ್ತಾರೆ. 123 ತಾಲ್ಲೂಕು ಘೋಷಣೆಯಾಗಿದೆ ಎನ್ನುವುದು ಹೋದ ವರ್ಷಕ್ಕಾಯಿತು, ಈ ವರ್ಷದ ಪರಿಸ್ಥಿತಿ ಏನು? ಈ ವರ್ಷ ಏಕೆ ವಿಶೇಷವಾಗಿ ನೀವು ಘೋಷಣೆ ಮಾಡಲಿಲ್ಲ? ನೀವು ಕಳೆದ ವರ್ಷ ಘೋಷಣೆ ಮಾಡಿದ್ದನ್ನೇ ಈ ವರ್ಷವೂ ಮುಂದುವರೆದಿದೆ ಎಂದು ಹೇಳುವುದು ಸರಿಯಲ್ಲ. 2012–13ನೇ ಸಾಲಿಗೆ ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕುಗಳ್ಯಾವುವು ಎಂದು ನೀವು ಹೇಳಿ, 123 ತಾಲ್ಲೂಕಿಗಿಂತ ಇನ್ನೂ 40 ಜಾಸ್ತಿಯಾಗುತ್ತದೆಂದು ಮುಖ್ಯಮಂತ್ರಿಗಳು ನಿನ್ನೆ

ಶಿವಗಂಗೆಯಲ್ಲಿ ಬಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅಂದರೆ ನೀವು ಹೇಳುವ ಪ್ರಕಾರ entire Karnataka ಬರಗಾಲಕ್ಕೆ ತುತ್ತಾಗಿದೆ ಎಂದಾಯಿತು. ಎಲ್ಲಿಯವರೆಗೂ ಆ ತೀರ್ಮಾನದ ಒಂದು administrative order ಮಾಡುವುದಿಲ್ಲವೋ ಅಲ್ಲಿಯವರೆವಿಗೂ ಕೂಡ ಯಾವ ಬ್ಯಾಂಕಿನವರೂ ನಿಮ್ಮ ನೆರವಿಗೆ ಬರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ನಿಮ್ಮ ಸಹಾಯಕ್ಕೆ ಬರುವುದಿಲ್ಲ ಎನ್ನತಕ್ಕದ್ದು ಕೇಂದ್ರ ಸರ್ಕಾರವೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ ಎನ್ನುವುದು ನೀವು ಅರ್ಥ ಮಾಡಿಕೊಳ್ಳಬೇಕು. ದಯಮಾಡಿ ನೀವು ಅದನ್ನು ಈ ವರ್ಷಕ್ಕೆ 2012–13ನೇ ಸಾಲಿಗೆ ವಿಶೇಷವಾಗಿ ಬರಗಾಲಕ್ಕೆ ಸತತವಾಗಿ ತುತ್ತಾಗಿರತಕ್ಕಂತಹ ಪ್ರದೇಶಗಳ ಹಿನ್ನೆಲೆಯಲ್ಲಿ ಅದನ್ನು ಪ್ರತ್ಯೇಕವಾಗಿ ಘೋಷಣೆ ಮಾಡತಕ್ಕಂತಹ ಅವಶ್ಯಕತೆ ಇದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಯಾವುದೇರೀತಿಯಲ್ಲಿಯೂ ನಮಗೆ ಪ್ರಕೃತಿ ಒಲಿಯದೇ ಇರುವ ಹಿನ್ನೆಲೆಯಲ್ಲಿ ಏನೇನೂ ಹುಚ್ಚಾ ಪಟ್ಟೆ ಆರ್ಡರ್‌ಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ನಾವು ಇವತ್ತು ಸರ್ಕಾರ ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂತಹವರು. ಸರ್ಕಾರದಿಂದ ಮಳೆ ಬರಲಿಲ್ಲವೆಂದು ಕಪ್ಪೆ ಮದುವೆ ಮಾಡಿಸುತ್ತಾರೆ, ಕತ್ತೆ ಮದುವೆ ಮಾಡಿಸುತ್ತಾರೆ, ಕತ್ತೆ ಮೆರವಣಿಗೆ ಮಾಡಿಸುತ್ತಾರೆ, ಜನ ಅವರವರ ನಂಬಿಕೆ ಮೇಲೆ ಏನಾದರೂ ಮಾಡಿಕೊಳ್ಳಲಿ. ಆದರೆ ನೀವು ಏಕೆ ಸರ್ಕಾರದ ಕಡೆಯಿಂದ ಆದೇಶ ಮಾಡುತ್ತೀರಿ? ಇದು ಅಪಹಾಸ್ಯಕ್ಕೆ ಈಡಾಗುತ್ತದೆ. ದಯಮಾಡಿ ಅಪಹಾಸ್ಯಕ್ಕೆ ಗುರಿ ಆಗ–ಬೇಡಿ. ದಯಮಾಡಿ ಈ ರೀತಿಯ ಆದೇಶಗಳನ್ನು ವಾಪಸ್ ತೆಗೆದುಕೊಳ್ಳಿ. ಇವತ್ತು ದೇವರ ಪೂಜೆ ಮಾಡುವುದರಿಂದ ಮಳೆ ಬರುತ್ತದೆ ಎನ್ನುವುದು ಸುಳ್ಳು. ಇವತ್ತು ಏಕೆ ಹಾಳಾಗಿದೆ ಎಂದರೆ, ನಮ್ಮ ಪರಿಸರದ ರಕ್ಷಣೆ ಮಾಡದೆ ಇರುವುದರಿಂದ. ಈ ರೀತಿ ಯಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರಾದ ಶಿವಣ್ಣರವರಿಗೆ ಟಚ್ ಮಾಡಬೇಕೆಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಬಹಳ ಸಂತೋಷ. ಪರಿಸರದ ಖಾತೆ ಇವತ್ತು ತುಮಕೂರು ಜಿಲ್ಲೆಗೆ ಕೊಟ್ಟಿದ್ದೀರಿ. ಪರಿಸರದ ಬಗ್ಗೆ ಮಾತನಾಡತಕ್ಕಂಥ ಅಧಿಕೃತ ಹಕ್ಕು ಇವತ್ತು ತುಮಕೂರು ಜಿಲ್ಲೆಯವರಿಗೆ ಇದೆ. ಏಕೆಂದರೆ ನಮ್ಮವರೇ ಮಂತ್ರಿಗಳಾಗಿದ್ದಾರೆ. ಇವತ್ತು ಪರಿಸರವನ್ನು ರಕ್ಷಣೆ ಮಾಡಬೇಕಾದ ಅನಿವಾರ್ಯತೆ ನಿಮ್ಮ ಕೈಯಲ್ಲಿ ಇದೆ. ಈ ರೀತಿಯಾಗಿ ಕರ್ನಾಟಕ ರಾಜ್ಯ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ

ಸಂದರ್ಭದಲ್ಲಿ ಮುಂದೆ ಕರ್ನಾಟಕ ಒಂದು ಮರುಭೂಮಿ ಆಗುತ್ತದೆ.. ಆ ಪರಿಸರವನ್ನು ರಕ್ಷಣೇ ಮಾಡಬೇಕಾದಾಗ ದಯಮಾಡಿ ಪಶ್ಚಿಮ ಘಟ್ಟಗಳನ್ನು ನೀವು ರಕ್ಷಣೆ ಮಾಡುತ್ತಿರೋ? ಕಾಡು ಹಾಳಾಗುತ್ತಿರುವುದನ್ನು ಕಡಿಮೆ ಮಾಡುತ್ತೀರೋ ಅಥವಾ ಮರಗಿಡಗಳನ್ನು ಬೆಳೆಸುವುದಕ್ಕೆ ಉತ್ತೇಜನ ಮಾಡುತ್ತೀರೊ? ಏನು ಎನ್ನುವ ಬಗ್ಗೆ ಯೋಚನೆ ಮಾಡಬೇಕು. ನಾವು ಈ ಫಲ್ಯೂಷನ್‌ನಲ್ಲಿ ಯಾವ ಮಟ್ಟಕ್ಕೆ ಇದ್ದೇವೆ ಎಂದರೆ, 22ನೇ ರಾಜ್ಯ ಆಗಿದ್ದೇವೆ. ನಮ್ಮ ಪೊಲ್ಯೂಷನ್ ಯಾವುದರಿಂದ ಆಗುತ್ತಿದೆ. ಮೋಟಾರುವಾಹನಗಳಿಂದ ಎಷ್ಟು ಆಗುತ್ತಿದೆ, ಇವತ್ತು ನಮ್ಮ environment ಕಾಪಾಡದೇ ಇರುವುದರಿಂದ ಎಷ್ಟು ಹಾಳಾಗುತ್ತಿದೆ, ರಸ್ತೆಗಳಿಂದ ಎಷ್ಟು ಆಗುತ್ತಿದೆ, ಏನಾಗುತ್ತಿದೆ ಎಂದು ಎಲ್ಲಾ ಅಂಕಿ ಅಂಶ ಇದೆ. ದಯಮಾಡಿ ಪರಿಸರ ಖಾತೆಯನ್ನು ನೀವು ಹೊತ್ತಿದ್ದೀರಿ ಹೇಳಿ.

**ಶ್ರೀ ಬಿ.ಎನ್.ಬಚ್ಚೇಗೌಡ:** ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ತಾವು ಪತ್ರಿಕೆಗಳಲ್ಲಿ ನೋಡಿದ್ದೀರಿ.South west monsoon ಸುಮಾರು 5–6 ರಾಜ್ಯಗಳಲ್ಲಿ ತೊಂದರೆಯಾಗಿದೆ. including Rajasthan, Gujarat, Haryana, Punjab, Karnataka ಮತ್ತು Maharashtra ಇವೆಲ್ಲ total monsoon about 40% failure in the country. ಇವತ್ತು ಆಗಿರತಕ್ಕದ್ದು when I read it in news paper only, ಮುಂಗಾರು ಹಂಗಾಮಿನಲ್ಲಿ ಆಗಿರತಕ್ಕಂತಹ ಖರೀಪ್ ಕೇವಲ 15 ಲಕ್ಷ ಹೆಕ್ಟೇರ್ ಪ್ರದೇಶ ಎಂದು ಹೇಳುತ್ತಿದ್ದೀರಿ, ಪರಿಸರಕ್ಕೆ ಒತ್ತು ಕೊಡುವುದರ ಬಗ್ಗೆ ಇರಲಿ, I appreciate your stand. But totally ಇದು ಏಕೆ ಈ ರೀತಿ ಆಗುತ್ತಿದೆ ಎಂದು ನೋಡಬೇಕು. ಇದು ಒಂದು ಸೈಕಲ್. South west monsoon ಇದರ effect ಏನು ಎಂದು ಗಂಭೀರವಾಗಿ ಚರ್ಚೆ ಆಗಬೇಕಾಗಿದೆ. why this failure? ಎನ್ನುವುದು it is also an issue. Nearly 7 states are affected in this.

**ಶ್ರೀ ಟಿ.ಬಿ.ಜಯಚಂದ್ರ:** ನಾವು ವಿಚಾರವನ್ನು ವಿನಿಯಮ ಮಾಡಿಕೊಳ್ಳದೆ ವಿನಹ ಇದೆಲ್ಲದಕ್ಕೂ ಉತ್ತರ ಎಲ್ಲಿ ಎಂದರೆ ಪರಿಸರದ ಕಡೆಗೆ ಹೋಗುತ್ತದೆ. ಉತ್ತರ ಎಂದರೆ ನಮ್ಮ ultimate decision ಪ್ರಕೃತಿ ಕಡೆಗೆ ನಾವು ಹೋಗಬೇಕಾಗುತ್ತದೆ. ಪ್ರಕೃತಿಯನ್ನೇ ನಾವು ದೂಷಣೆ ಮಾಡಬೇಕಾಗುತ್ತದೆ. ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥ ಮಾತು ನಾನು ಹೇಳುತ್ತೇನೆ. ಹೊಸಕೋಟೆಯಲ್ಲಿ ಜನ ಈಗಾಗಲೇ ವ್ಯವಸಾಯ ಮಾಡುವುದನ್ನೇ ಬಿಟ್ಟು

ಬಿಟ್ಟಿದ್ದಾರೆ. ನಿಮ್ಮಲ್ಲಿ ನಗರೀಕರಣ ಜಾಸ್ತಿಯಾಗಿದೆ. ಇವತ್ತು ಏನಾಗುತ್ತಿದೆ ಎಂದರೆ, ನಮ್ಮ ಮಾನ್‌ಸೂನ್‌ಗಳು ಶಿಫ್ಟ್ ಆಗುತ್ತಿದೆ. ಹವಾಮಾನದ ವೈಪರೀತ್ಯದಿಂದಾಗಿ ನಮ್ಮ ಓಜೋನ್ ರಿಡಕ್ಷನ್ ಆಗಿರತಕ್ಕಂತಹ ಹಿನ್ನೆಲೆಯಲ್ಲಿ ನಮ್ಮ ಮಾನ್‌ಸೂನ್ ಶಿಫ್ಟ್ ಆಗುತ್ತಿದೆ. ಇವತ್ತು ಯಾರೂ ಕೂಡ ಬೆಳೆ ಬೆಳೆಯುವುದಕ್ಕಾಗುತ್ತಿಲ್ಲ. ನೀವು ಹಳ್ಳಿಯಿಂದ ಬಂದಿರುವವರು ನಿಮಗೆ ಗೊತ್ತಿರಬೇಕು. ಭರಣಿ ಮಳೆ ಬಂದರೆ ಧರಣಿ ಎಲ್ಲಾ ಬೆಳೆ ಎಂದು ಹೇಳುವ ಕಾಲ ಇತ್ತು, ಕೇವಲ 40 ವರ್ಷಗಳ ಕೆಳಗೆ. ಇವತ್ತು ಭರಣಿ ಮಳೆ ಬಂದರೂ ಬೆಳೆ ಆಗುತ್ತಿಲ್ಲ. ಕಾರಣವೇನೆಂದರೆ, ಮಾನ್‌ಸೂನ್ ಶಿಫ್ಟ್ ಆಗಿದೆ. ಇವತ್ತು ನಾವು ಭರಣಿ ಮಳೆಯನ್ನೇ ನೆಚ್ಚಿ ತಯಾರು ಮಾಡುತ್ತಿದ್ದ ಬೀಜಗಳು ಅವು ಮೊಳಕೆಯೇ ಒಡೆಯದ ಮಟ್ಟಕ್ಕೆ ಹೋಗಿವೆ. ಇದೆಲ್ಲವನ್ನೂ ನಾವು ಈ angle ನಲ್ಲಿ ನೋಡಬೇಕಾಗುತ್ತದೆ.ಕೃಷಿ ಪ್ರಧಾನವಾದ ರಾಜ್ಯದವರಾದ ನಾವು ಈ angleನಲ್ಲಿ ನೋಡಬೇಕಾಗುತ್ತದೆ. ಮಾನ್‌ಸೂನ್ ಶಿಫ್ಟ್ ಆಗುತ್ತಿದೆ. ಮಾನ್‌ಸೂನ್ ರಿಸೀಡ್ ಆಗುತ್ತಿದೆ. ಇದಕ್ಕೆ ಪರ್ಯಾಯವಾಗಿ ನಾವು ಎಷ್ಟರಮಟ್ಟಿಗೆ ಫೇಸ್ ಮಾಡುವುದಕ್ಕೆ ಸಾಧ್ಯ? ನೀವು ಹೇಳಿದ್ದೂ ಯೋಚನೆ ಮಾಡುವುದರ ಜೊತೆಗೆ ಇದನ್ನೂ ಕೂಡ ಬಹಳ ಯೋಚನೆ ಮಾಡಬೇಕಾಗುತ್ತದೆ. ಎಲ್ಲೋ ಒಂದು ಕಡೆಗೆ ಪರಿಸರದ ರಕ್ಷಣೆ ಕಡೆಗೆ ನಾವು ಹೋಗಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಇನ್ನೊಂದು ಬಹಳ ಮುಖ್ಯವಾಗಿ, ಡಿಸೆಂಬರ್ 21 ರಂದು ಪ್ರಳಯ ಎಂದು ಬೇರೆ ಹೇಳುತ್ತಿದ್ದಾರೆ. ಪ್ರಳಯ ಆಗುವುದಕ್ಕಿಂತ ಮುಂಚೆ ಏನಾದರೂ ಯೋಚನೆಯನ್ನು ಮಾಡಬೇಕು ಮಾನ್ಯ ಶಿವಣ್ಣರವರೇ. ಈಗ ಎಲ್ಲಾ ಟಿ.ವಿ.ಗಳಲ್ಲಿ ಬರುತ್ತಿದೆ.2012ಕ್ಕೆ ಪ್ರಳಯ ಏನೆಲ್ಲಾ ಆಗಿ ಹೋಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ನಾಸಾದ ಒಬ್ಬ ಸೈಂಟಿಸ್ಟ್ ರವರಿಗೆ ಏನಾಗುತ್ತದೆ ಎಂದು ಕೇಳಿದೆ. ಏನೂ ಆಗುವುದಿಲ್ಲ ಗಾಬರಿ ಪಟ್ಟುಕೊಳ್ಳಬೇಡಿ ಎಂದು ಹೇಳಿದರು. ಏನಾಗುತ್ತದೋ ಡಿಸೆಂಬರ್ 21ರವರೆಗೆ ಕಾಯೋಣ. ರಾಜಕೀಯವಾಗಿ ಪ್ರಳಯ ಆಗದೇ ಇದ್ದರೂ ಸಂತೋಷ. ರಾಜಕೀಯ ಪ್ರಳಯವೂ ಆಗಬಾರದು, ಭೂಮಿ ಮೇಲೆ ಕೂಡ ಪ್ರಳಯ ಆಗದೇ ಇರುವ ರೀತಿಯಲ್ಲಿ ನೀವು ಎಚ್ಚರಿಕೆಯನ್ನು ವಹಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ದಯಮಾಡಿ ಪರಿಸರ ಖಾತೆ ಸರಿ ಇಲ್ಲವೆಂದು ಹೇಳಬೇಡಿ. ಬೀಗದ ಕೈ ನಿಮ್ಮ ಕೈಯಲ್ಲಿದೆ. ನೀವು ಮಾನ್ಯ ಬಚ್ಚೇಗೌಡರಿಗೆ ಐದು ನಿಮಿಷದಲ್ಲಿ ಬಾಯಿ ಮುಚ್ಚಿಸಿಬಿಡಬಹುದು. ಇರತಕ್ಕಂತಹ ಕೈಗಾರಿಕೆಗಳನ್ನು close ಮಾಡಿಸಿಡಬಹುದು. ಮಾನ್ಯ ಈಶರ್ವರಪ್ಪನವರನ್ನೂ

ಮನೆಗೆ ಕಳುಹಿಸಿ ಬಿಡಬಹುದು. ನಿಮಗೆ ಒಳ್ಳೆಯ ಖಾತೆ ಸಿಕ್ಕಿದೆ. ನಾನು ನಿಮಗೆ ಹೊಗಳುತ್ತಿದ್ದೇನೆ. I am admiring you.

**ಶ್ರೀ ಎಸ್.ಶಿವಣ್ಣ(ಮಾನ್ಯ ಪರಿಸರ ಜೀವಶಾಸ್ತ್ರ ಖಾತೆ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ನಾನು ಈ ಮನೆಗೆ ಕೇಳಿಕೊಳ್ಳುತ್ತೇನೆ. ಪರಿಸರದ ಬಗ್ಗೆ ಮಾನ್ಯ ಜಯಚಂದ್ರರವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಅದನ್ನುನಾನು ಅಹ್ವಾನ ಮಾಡುತ್ತೇನೆ. ದುರಾದೃಷ್ಟದಿಂದ ಏನಾಗಿದೆ, ಇಲ್ಲಿಯವರೆಗೆ ಮಾನ್ಯ ಬಸವಲಿಂಗಪ್ಪನವರು ಹೋದ ಮೇಲೆ ಅದು ಹಾಗೆಯೇ ಇದೆ ಎಂದು ನನ್ನ ಭಾವನೆ. ನಾನು ಮಂತ್ರಿಯಾಗಿ ನಾಲ್ಕೈದು ದಿವಸ ಕಳೆದ ಮೇಲೆ ಗೊತ್ತಾಗಿದೆ. ಅದೃಷ್ಟವಶಾತ್ ತಾವೆಲ್ಲಾ ಸಹಾಯ ಮಾಡುತ್ತೀರಿ ಎಂದರೆ ಮಳೆ ಇಲ್ಲ ಬೀಜ ಕೇಳುತ್ತಿದ್ದೀರಿ. ನಮ್ಮ ಬೀಜವನ್ನು ಎಂದು ಇಡೀ ದೇಶಕ್ಕಾಗುತ್ತದೆ. ನಾವು ಪ್ಲಾಸ್ಟಿಕ್ ಬೀಜ ಎಲ್ಲಾ ಹುಟ್ಟು ಹಾಕಿದ್ದೇವೆ. ನಮ್ಮ ಮನೆಯಲ್ಲಿ ಮೊದಲು ಬರತಕ್ಕಂಥದ್ದು ತರುವುದು ನಿಲ್ಲಿಸಿಬಿಡಿ. ಆ ಮೇಲೆ ಪರಿಸರದ ಬಗ್ಗೆ ಸಲಹೆ ಕೊಟ್ಟರೆ ಅದರ ಬಗ್ಗೆ ಚಿಂತನೆ ಮಾಡುತ್ತೇನೆ. ದಯಮಾಡಿ ಅದನ್ನು ಮೊದಲು,ಮಾಡಬೇಕೆಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:** ಸರ್ಕಾರ ನೀವು. ದಯಮಾಡಿ ನೀವು ಎಲ್ಲಿಯೂ ಕೂಡ ಅಪ್ಪಿ ತಪ್ಪಿ ಮಾನ್ಯ ಯಡಿಯೂರಪ್ಪನವರು ನನಗೆ portfolio ಕೊಡುವುದರಲ್ಲಿ ಹೆಚ್ಚು ಕಡಿಮೆ ಮಾಡಿದ್ದಾರೆ ಎನ್ನತಕ್ಕಂತಹ ಅನುಮಾನ ಇಟ್ಟುಕೊಳ್ಳಬೇಡಿ. ನಿಮ್ಮನ್ನು strengthen ಮಾಡುವುದಕ್ಕೋಸ್ಕರ ಆ portfolio ಕೊಟ್ಟಿದ್ದಾರೆ. ದಯಮಾಡಿ ಮಂತ್ರಿಗಳಾಗಿರುವುದು ಒಂದು ಸಂತೋಷ. ಎರಡನೆಯದು ಆ portfolio ಸಿಕ್ಕಿರುವುದು ಒಳ್ಳೆಯದು.

**ಉಪಾಧ್ಯಕ್ಷರು:** ಮಾನ್ಯ ಜಯಚಂದ್ರರವರೇ, ಎರಡು ಗಂಟೆ ಆಯಿತು ಇನ್ನೂ ಬೇರೆಯವರು ಮಾತನಾಡುವವರು ಇದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:** ಬರ ಬಂದಾಗ ನಾವು ಪರಿಸರದ ಕಡೆ ನೋಡಬೇಕು. ಭೂಮಿ ಕಡೆ ನೋಡಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ ಎಂದು ಹೇಳಿ, ಮಾನ್ಯ ಉಪಾಧ್ಯಕ್ಷರೆ, ನಾವು ಏನು ಚರ್ಚೆ ಮಾಡುತ್ತೇವೆ ಎನ್ನುವುದಕ್ಕಿಂತ ಹೆಚ್ಚಾಗಿ, ನೀವು ಏನು ತೀರ್ಮಾನ ಹೇಳುತ್ತೀರಿ ಎನ್ನುವುದು ಬಹಳ ಮುಖ್ಯ ಎನ್ನತಕ್ಕಂತಹ ಮಾತನ್ನು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:** ತಾವು ಪ್ರಾಕೃತಿಕ ಪೊಲ್ಯೂಷನ್ ಬಗ್ಗೆ ಮಾತ್ರ ಮಾತನಾಡಿದಿರಿ. ಮಾನಸಿಕ ಪೊಲ್ಯೂಷನ್ ಪ್ರಕೃತಿ ಮೇಲೆ ಎಷ್ಟು ಎಫೆಕ್ಟ್

ಆಗುತ್ತದೆ ಎಂಬ ಬಗ್ಗೆ ತಾವು ಬೆಳಕು ಚೆಲ್ಲಲಿಲ್ಲ. ಪರವಾಗಿಲ್ಲ ಮುಂದೆ ಯೋಚನೆ ಮಾಡೋಣ.

**ಶ್ರೀ ಟಿ.ಬಿ ಜಯಚಂದ್ರ:** ನಾನು ಸೂಕ್ಷ್ಮವಾಗಿ ಹೇಳಿದೆ. ರಾಜಕೀಯ ಪ್ರಳಯ ಎಂದು ಹೇಳಿದೆ. ಅದು ಮಾನಸಿಕವಾಗಿ ಆಗುವ ಪೊಲ್ಯೂಷನ್. ಅದರ ಬಗ್ಗೆ ಮಾತನಾಡುವುದಕ್ಕೆ ಟೈಮ್ ಕೊಡುವುದಾದರೆ ಬೇಕಾದರೆ ಮಾತನಾಡುತ್ತೇನೆ.

**ಉಪಾಧ್ಯಕ್ಷರು:** ಮುಂದೆ ಯೋಚನೆ ಮಾಡೋಣ.

**ಶ್ರೀ ಬಿ.ಎಸ್.ಯಡಿಯೂರಪ್ಪ(ಶಿಕಾರಿಪುರ):** ಮಾನ್ಯ ಉಪಾಧ್ಯಕ್ಷರೆ, ನನ್ನದೇ ಆದಂತಹ ಒಂದು ವಿಶೇಷವಾದ ಕಾರಣಕ್ಕಾಗಿ ನಾನು ಈ ಮನೆಯಲ್ಲಿ ಆ ಕುರ್ಚಿ ಬಿಟ್ಟು ಈ ಕುರ್ಚಿಗೆ ಬಂದಾಗಿನಿಂದ ಮಾತನಾಡಿಲ್ಲ. ಕಳೆದ 70 ವರ್ಷಗಳಲ್ಲಿ ಕಂಡರಿಯದ ಭೀಕರ ಬರಗಾಲ ಇರುವ ಕಾಲದಲ್ಲಿ ನನಗೆ ಅಧಿಕಾರ ಕೊಡಿ ಎಂದು ನಾನು ಅಂಗಲಾಚಿ ಬೇಡುವುದಕ್ಕೆ ಹೋದಾಗ ಜನ ಆಶೀರ್ವಾದ ಮಾಡಿ ನನಗೆ ಬಹುಮತ ಕೊಟ್ಟು ನಾಲ್ಕು ವರ್ಷ ಆಡಳಿತ ನಡೆಸುವುದಕ್ಕೆ ಅವಕಾಶ ಕೊಟ್ಟ ಈ ಸಂದರ್ಭದಲ್ಲಿ ಈ ನಾಡಿನ ರೈತ ಸಂಕಷ್ಟದಲ್ಲಿ ಸಿಕ್ಕಿ ನರಳುತ್ತಿರಬೇಕಾದರೆ, ಅವನ ಸಂಕಷ್ಟಕ್ಕೆ ನಿರೀಕ್ಷೆಯಂತೆ ಸರ್ಕಾರ ಸ್ಪಂದಿಸುತ್ತಿಲ್ಲ ಎನ್ನುವ ಭಾವನೆ ಜನರಲ್ಲಿ ಮೂಡಿರಬೇಕಾದರೆ, ನಾನು ಇಲ್ಲಿ ಕೈ ಕಟ್ಟಿ ಕುಳಿತು ಮಾತನಾಡದೆ ಇದ್ದರೆ, ನನ್ನ ಕರ್ತವ್ಯವನ್ನು ನಿರ್ವಹಿಸಲಿಲ್ಲ, ನಾಳೆ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ ಎಂದು ಅನಿವಾರ್ಯವಾಗಿ ವಾಸ್ತವಿಕ ಕೆಲವು ಸತ್ಯ ಸಂಗತಿಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಬೇಕೆಂದು ಹೇಳಿ ನಾನು ಇಲ್ಲಿ ನಿಂತಿದ್ದೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇವತ್ತಿನ ದೇಶದ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಗಳನ್ನು ನೋಡಿದರೆ ಇನ್ನೊಂದು ಬಜೆಟ್ ಮಂಡನೆ ಮಾಡುವಂತಹ ಅವಕಾಶ ಬರುವುದಕ್ಕಿಂತ ಮೊದಲೇ ಚುನಾವಣೆ ಎದುರಿಸುವಂತಹ ಸಂದರ್ಭಗಳು ಬರಬಹುದು ಎನ್ನುವಂತಹ ವಾತಾವರಣ ಮೂಡಿದೆ ಅಥವಾ ಚುನಾವಣೆ ನಡೆಯುವ ಮೂರು ತಿಂಗಳು ಮೊದಲು ಚುನಾವಣೆ ನೀತಿಸಂಹಿತೆ ಮತ್ತೊಂದು ಮಗದೊಂದು ಎಂದು ಹೇಳಿ ಬೇರೆ ಯಾವುದೇ ರೀತಿಯಲ್ಲಿ ರಾಜ್ಯದ ಜನತೆಗೆ ಆಶ್ವಾಸನೆಗಳನ್ನಾಗಲಿ, ಹಣಕಾಸಿನ ನೆರವನ್ನಾಗಲಿ ಕೊಡುವುದಕ್ಕೆ ಆಗದಿರುವಂತಹ ಸಂದಿಗ್ಧ ಸ್ಥಿತಿಗೆ ಸರ್ಕಾರ ಸಿಲುಕುವಂತಹ ಸಂದರ್ಭ ಇದೆ. ಹೀಗಾಗಿ ಈ ಒಂದು Financial Bill pass ಆಗುವಂತಹ ಸಂದರ್ಭದಲ್ಲಿ, ಸ್ಪಷ್ಟವಾಗಿ ಹಿಂದೆಂದೂ ಕಂಡರಿಯದಂತಹ ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ, ಒಂದು ಲಕ್ಷ ಕೋಟಿ ರೂಪಾಯಿಯ ಬಜೆಟ್

ಮಂಡನೆ ಮಾಡಿರುವಂತಹ ಸಂದರ್ಭದಲ್ಲಿ ಈ ದೇಶಕ್ಕೆ ಅನ್ನ ಕೊಡುವಂತಹ ಅನ್ನದಾತ ಸಂಕಷ್ಟದಲ್ಲಿದ್ದಾನೆ, ಅವನು ನಾವು ಏನು ಮಾಡುತ್ತೇವೆಂದು ಕಾತುರದಿಂದ ನೋಡುತ್ತಿದ್ದಾನೆ. ನಾನು ಯಾವುದೇ ಶಾಸಕರಿಗೆ ಬೆಟ್ಟು ಮಾಡಿತೋರಿಸುವುದಿಲ್ಲ. ಕೆಲವು ಶಾಸಕರು ಈಗಲೂ ಸಹ ಗ್ರಾಮೀಣ ಪ್ರದೇಶದಲ್ಲಿ ಅವರವರ ಕ್ಷೇತ್ರದಲ್ಲಿ ನಿರಂತರವಾದ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ನಾವೇನಾದರೂ ಗ್ರಾಮೀಣ ಪ್ರದೇಶಕ್ಕೆ ಹೋಗಿ ರೈತನಸ್ಥಿತಿಗಳನ್ನು ನೊಡಿದರೆ ಬಹುಶಃ ನಾವೂ ಅವನ ಕಣ್ಣೀರು ಹಾಕುವಂತಹ ಒಂದು ದಾರುಣ ಪರಿಸ್ಥಿತಿ ಇದೆ. ಶುದ್ಧವಾದ ಕುಡಿಯುವ ನೀರಿಲ್ಲ,. ಕೆರೆ-ಕಟ್ಟೆಗಳು ಬತ್ತಿಹೋಗಿದ್ದಾವೆ. ಜಲಾಶಯಗಳಲ್ಲಿ ನೀರಿಲ್ಲ. ಈಗಾಗಲೇ ಸಹಕಾರಿ ಸಂಘಗಳಿಂದ, ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದಿರುವಂತಹ ಅಲ್ಪಸ್ವಲ್ಪ ಸಾಲದ ಮೊತ್ತ, ಕೃಷಿ ಚಟುವಟಿಕೆ ಸಿದ್ಧತೆಗೆ, ಬಿತ್ತನೆ ಬೀಜಕ್ಕೆ ಮತ್ತು ರಸಗೊಬ್ಬರಕ್ಕೆ-ಮುಂತಾದವುಗಳಿಗೆ ಖರ್ಚು ಮಾಡಿಕೊಂಡು ಬರಿಗೈಯಲ್ಲಿ ನಿಂತಿದ್ದಾನೆ. ಮಳೆಯಿಲ್ಲದೆ ಬಿತ್ತನೆ ಮಾಡಿರುವುದು ಬತ್ತಿಹೋಗಿದೆ, ಮತ್ತೊಮ್ಮೆ ಬಿತ್ತನೆ ಮಾಡುವಂತಹ ಸ್ಥಿತಿಯಲ್ಲಿ ಅವನಿಲ್ಲದಿರುವಂತಹ ವಿಚಿತ್ರವಾದಂತಹ ಒಂದು ಸಂದರ್ಭದಲ್ಲಿ ನಾವಿದ್ದೇವೆ. ನಾನು ಪಕ್ಷಭೇದ ಮರೆತು ಈ ಮನೆಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ ಇನ್ನೊಂದು ಐದಾರು ತಿಂಗಳು ಈ ರಾಜ್ಯದ ರೈತನ ಸಂಕಷ್ಟಕ್ಕೆ ಸರ್ಕಾರದ ಜೊತೆ ಕೈಜೋಡಿಸಿ ನಾವೆಲ್ಲಾ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ, ನಮಗೆ ಓಟು ಕೊಟ್ಟು ಶಾಸಕರನ್ನು ಮಾಡಿ ಸರ್ಕಾರವನ್ನು ತಂದಂತಹ ರೈತನ ಋಣವನ್ನು ತೀರಿಸುವುದಕ್ಕೆ ಒಂದು ಅವಕಾಶ ಇದೆ. ನಾವು ಏನಾದರೂ ಮೈ ಮರೆತರೆ, ನಾನು ಕೈಜೋಡಿಸಿ ವಿನಂತಿ ಮಾಡುತ್ತೇನೆ. ನಮ್ಮ ಬಂಧು-ಬಳಗದವರು, ತಂದೆ-ತಾಯಿ, ಅಣ್ಣ-ತಮ್ಮ ಮನೆಯಲ್ಲಿ ಒಂದು ದೊಡ್ಡ ಕಾಯಿಲೆಗೆ ಸಿಕ್ಕಿ ನರಳುತ್ತಿರಬೇಕಾದರೆ ನಾವು ಮನೆ ಬಿಟ್ಟು ಹೋಗುವುದಿಲ್ಲ, ನಗರಕ್ಕೆ ಬರುವುದಿಲ್ಲ. ನಾವು ಕುಟುಂಬದ ಸದಸ್ಯರು ಅವನ ಚೇತರಿಕೆಯಲ್ಲಿ ತಲ್ಲೀನರಾಗಿರುತ್ತೇವೆ. ಈ ರಾಜ್ಯದ ರೈತ ಇಂತಹ ಸಂಕಷ್ಟದಲ್ಲಿ ಸಿಲುಕಿರುವಂತಹ ಸಂದರ್ಭದಲ್ಲಿ, ಅಲ್ಲಲ್ಲಿ ನಮ್ಮ ಶಾಸಕರು ಹೊರದೇಶಕ್ಕೆ ಪ್ರವಾಸ ಮಾಡುವಂತಹ ಸುದ್ದಿ ಕೇಳಿ ಬರುತ್ತಿದೆ. ದಯಮಾಡಿ ಈ ದುಸ್ಸಾಹಸಕ್ಕೆ ನೀವು ಕೈ ಹಾಕಬೇಡಿ.ಯಾರಾದರೂ ಮೈಮರೆತು ನಾವು ಎಲ್ಲಿ ಹೋಗುತ್ತೇವೆ, ಎಲ್ಲಿ ಬರುತ್ತೇವೆ ಎನ್ನುವುದನ್ನು ರೈತ ಮರೆಯುತ್ತಾನೆ, ಗಮನಿಸುವುದಿಲ್ಲ ಗ್ರಾಮೀಣ ಜನ ಮರೆಯುತ್ತಾರೆ ಎಂದು ತಿಳಿದುಕೊಂಡಿದ್ದರೆ ಚುನಾವಣೆ ಸಮಯದಲ್ಲಿ ಅದಕ್ಕೆ ತಕ್ಕ ಪಾಠವನ್ನು ನಾವು ಯಾವುದೇ ಪಕ್ಷದಲ್ಲಿರಲಿ, ಅವನು ಕಲಿಸುತ್ತಾನೆ. ಅದಕ್ಕೋಸ್ಕರ ಆ ಸಾಹಸವನ್ನು ನಾವ್ಯಾರೂ

ಶಾಸಕರು ಈ ಕಷ್ಟ ಕಾಲದಲ್ಲಿ ಮಾಡದೇ ಜನರ ಕಷ್ಟಕ್ಕೆ ಸ್ಪಂದಿಸಬೇಕು. ಇತ್ತೀಚೆಗೆ ನನ್ನ ಅನುಭವದಲ್ಲಿ ಹೇಳುವುದಾದರೆ ನಮ್ಮ ಶಾಸಕರು ಚುಮನಾವಣೆ ಬಂದಾಗ ಮಾತ್ರ ಕ್ಷೇತ್ರದ ಕಡೆ ಗಮನ ಕೊಡುತ್ತಾರೆ.,

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಚುನಾವಣೆಗೆ ಇನ್ನೊಂದು 9–10 ತಿಂಗಳು ಇದೆ. ಜನರ ಕಷ್ಟ ಸುಖ ವಿಚಾರಿಸುವುದಕ್ಕೆ ಹೋಗುತ್ತೇವೆ. ಸಮಸ್ಯೆ ಬಗೆಹರಿಸುವುದಕ್ಕೆ ಓಡಾಟ ಮಾಡುತ್ತೇವೆ, ಮತ್ತೆ ಮರೆಯುತ್ತೇವೆ. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವಂತಹದು. ಆದರೆ ಈ ಬಾರಿ ನಿರಂತರವಾಗಿ ಕಷ್ಟಕ್ಕೆ ಸ್ಪಂದಿಸುವುದಕ್ಕೆ ನಾವು ಯಾವುದೇ ಪಕ್ಷದ ಶಾಸಕರಿರಲಿ, ಎಷ್ಟೇ ನಮಗೆ ಶಕ್ತಿಯಿರಲಿ, ಏನೇ ಬಲವಿರಲಿ, ಜನರ ಕಷ್ಟಕ್ಕೆ ಸ್ಪಂದಿಸದಿದ್ದರೆ, ನಾವು ವಾಪಸ್ಸು ಈ ಮನೆಗೆ ಬರುತ್ತೇವೆನ್ನುವಂತಹ ವಿಶ್ವಾಸವನ್ನು ನನ್ನನ್ನೂ ಸೇರಿಸಿ ಇಟ್ಟುಕೊಳ್ಳುವುದು ಬೇಡ. ಹೀಗಾಗಿ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುವಂಥದ್ದು ಇದುವರೆಗೆ ನಾವು ಬರಗಾಲವನ್ನು ಎದುರಿಸುವುದಕ್ಕೆ ಸಮರೋಪಾದಿಯಲ್ಲಿ 3–4 ತಿಂಗಳಿನಿಂದ ಏನು ಕಾರ್ಯವನ್ನು ನಿರ್ವಹಿಸ ಬೇಕಾಗಿತ್ತು, ಅದರದೇ ಆದಂತಹ ವಿಶೇಷ ಕಾರಣಕ್ಕಾಗಿ ನಿರ್ವಹಿಸುವುದಕ್ಕೆ ಆಗಲಿಲ್ಲವೆನ್ನುವಂತಹ ತಪ್ಪನ್ನು ಒಪ್ಪಿಕೊಳ್ಳಬೇಕು. ನಾವು ಶಾಸಕರು, ಸರ್ಕಾರ ಈ ಕಡೆ ಗಮನ ಕೊಡಲಿಲ್ಲವೆಂದು ಹೇಳಿದಾಗ ಸರ್ಕಾರಿ ಕಛೇರಿಯಲ್ಲಿ ಕುಳಿತಿರುವಂತಹ ಸರ್ಕಾರಿ ನೌಕರರಿಗೆ ಈ ಜನರ ಕಷ್ಟಕ್ಕೆ ಸ್ಪಂದಿಸಬೇಕು ಎಂದು ಅನಿಸುವುದೇ ಇಲ್ಲ. ಬಹುಶಃ ಬಹಳ ವಿರಳ. ಯಾವುದೇ ತಹಸೀಲ್ದಾರ್, ಯಾವುದೇ ಡೆಪ್ಯುಟಿ ಕಮಿಷನರ್ ಅವರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಪ್ರವಾಸ ಮಾಡಿ, ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ, ಅಲ್ಲಿರುವಂತಹ ಜನರ ಕಷ್ಟ–ಸುಖಕ್ಕೆ ಸ್ಪಂದಿಸುತ್ತಿದ್ದಾರೆ ಎನ್ನುವ ಬೆರಳೆಣಿಕೆಯಷ್ಟು ಅಧಿಕಾರಿಗಳು ಇವತ್ತು ಸಿಗುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಕೃಷಿ ಇಲಾಖೆ ಅಧಿಕಾರಿಗಳಾದಿಯಾಗಿ ಅವರದೇ ಆದಂತಹ ಸ್ವಂತ ಕೆಲಸದಲ್ಲಿ ಅವರು ತಲ್ಲೀನ ರಾಗಿದ್ದಾರೆಯೇ ಹೊರತು ನಾನು ಸರ್ಕಾರಿ ನೌಕರ, ಈ ಸಂದರ್ಭದಲ್ಲಿ ಜಾಗೃತನಾಗಿರಬೇಕೆಂದು ಜಾಗೃತನಾಗಿಲ್ಲ. ನೀನು ಎಲ್ಲಿ ಹೋಗಿದ್ದೆ? ಎಂದು ಕೇಳುವುದಕ್ಕೆ ತಹಸೀಲ್ದಾರ್ ಇಲ್ಲ, ವಿಚಾರಿಸುವುದಕ್ಕೆ ಡಿ.ಸಿ.ಕೂಡ ಇಲ್ಲ. ಈ ರೀತಿ ಆಡಳಿತದಲ್ಲಿ ಹಿಂದೆಂದೂ ಕಾಣದಿರುವಂತಹ ಆಲಸ್ಯ ಇವತ್ತು ಎದ್ದು ಕಾಣುತ್ತಿದೆ ಎನ್ನುವುದನ್ನು ನಾವು ಆತ್ಮಪೂರ್ವಕವಾಗಿ ಮತ್ತು ಮನಃಸಾಕ್ಷಿಯಾಗಿ ಒಪ್ಪಿಕೊಳ್ಳಬೇಕು. ಬಹುಶಃ ಅಧಿಕಾರಿಗಳಿಗೆ, ಹೇಗೋ ಚುನಾವಣೆ ವರ್ಷ, ಹೇಗೋ ಕಾಲಹರಣ ಮಾಡಬಹುದು, ಮುಂದೆ ಯಾರು

ಅಧಿಕಾರಕ್ಕೆ ಬರುತ್ತಾರೋ ನೋಡೋಣ ಅವರ ಜೊತೆ ಚೆನ್ನಾಗಿದ್ದರೆ ಆಯಿತು ಎಂದು ಹೇಳಿ ಅವರು ಮೊದಲು ಯಾವ ರೀತಿ ಕೆಲಸ ಮಾಡುತ್ತಿದ್ದರೋ, ಮಾಡಬೇಕೆನ್ನುವ ಕಳಕಳಿ ಇತ್ತು, ಆ ಕಳಕಳಿ ಇವತ್ತು from top to bottom ಯಾರಲ್ಲೂ ಕಾಣುತ್ತಿಲ್ಲ ಎಂದುನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ವಿನಂತಿ ಮಾಡುತ್ತೇನೆ. ತಿಂಗಳಿಗೆ ನಾವು ಸರಿಯಾಗಿ ಸಂಬಳವನ್ನು ಪಡೆಯುತ್ತೇವೆ, ದೊಡ್ಡ ಪ್ರಮಾಣದಲ್ಲಿ ಸಂಬಳ ತೆಗೆದುಕೊಳ್ಳುತ್ತೇವೆ. ಸಾಮಾನ್ಯ ರೈತ ಈಗ ಕಷ್ಟದಲ್ಲಿದ್ದಾನೆ. ಈ ಸಮಯದಲ್ಲಿ ತಕ್ಷಣಕ್ಕೆ ಸರ್ಕಾರಿ ಕಾರ್ಯಕ್ರಮಗಳು ಏನಿವೆ ಅವುಗಳನ್ನಾದರೂ ತಲುಪಿಸಬೇಕು, ಇದು ನನ್ನ ಕರ್ತವ್ಯ ಎನ್ನುವ ಕರ್ತವ್ಯ ಪ್ರಜ್ಞೆ ಇವತ್ತು ಅಧಿಕಾರಿಗಳಲ್ಲಿ ಕಾಣುತ್ತಿಲ್ಲ. ಅವರನ್ನು ಕಿವಿ ಹಿಂಡಿ ಕೆಲಸ ಮಾಡಿಸುವಂತಹ ಪ್ರವೃತ್ತಿ ಸಹ ಇವತ್ತು ನಮಗೆ ಕಾಣುತ್ತಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರುಗಳಂತೂ ಪಾಪ busy ಇರುವುದರಿಂದ ಅವರ ಜಿಲ್ಲೆಯಲ್ಲಿ ಕುಳಿತು, ತಾಲ್ಲೂಕುಗಳಿಗೆ ಪ್ರವಾಸ ಮಾಡಿ, ಶಾಸಕರುಗಳ ಜೊತೆ ಸಮಾಲೋಚನೆ ಮಾಡಿ ಅಲ್ಲಿ ವಾಸ್ತವದ ಸ್ಥಿತಿ ಏನು ಎಂದು ತಿಳಿದುಕೊಂಡು ಸ್ಥಳದಲ್ಲೇ ಸಮಸ್ಯೆಗೆ ಪರಿಹಾರ ಹುಡುಕುವಂತಹ ಪ್ರಾಮಾಣಿಕ ಪ್ರಯತ್ನ ಮಾಡುವಂತಹ ಒಂದು ಅಭ್ಯಾಸ ಮರೆತು ಹೋಗಿದೆ. ಹೀಗಾಗಿ ಅಪರೂಪಕ್ಕೆ ಭಾರತೀಯ ಜನತಾ ಪಾರ್ಟಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ ಪಕ್ಷ ಬಹಳ ದೊಡ್ಡ ಪಕ್ಷ, ಗಟ್ಟಿಯಾಗಿ ಬೇರೂರಿದ್ದು, ಅದರದೇ ಆದಂತಹ ವಿಶೇಷವಾದ ಕಾರಣಕ್ಕಾಗಿ ನಮಗೆ ಒಂದು ಸಾರಿ ಅಧಿಕಾರ ಕೊಟ್ಟಾಗ, ಆ ಹಿಂದೆ ಇದ್ದಂತಹ ಕಳಕಳಿ, ಆಸಕ್ತಿ ಮತ್ತೆ ನಾವು ಅಧಿಕಾರಕ್ಕೆ ಬರಬೇಕು, ಅದಕ್ಕೆ ತಕ್ಕಂತೆ ಕಾರ್ಯಕ್ರಮ ರೂಪಿಸಬೇಕೆನ್ನುವ ಚಿಂತನೆ ಏನಿತ್ತು, ಅದಕ್ಕೆ ಎಲ್ಲೋ ಒಂದು ಕಡೆ ಕೊರತೆಯಾಗುತ್ತಿದೆ. ಇದನ್ನು ನೋಡಿ ಸಹಜವಾಗಿ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ನಮ್ಮನ್ನು ಏಕೆ ಬಡಿದೆಬ್ಬಿಸುತ್ತಾರೆ? ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ರೇವಣ್ಣನವರು ಮಾತನಾಡಿದರು. ನೀವು ಅನೇಕ ವಿಷಯಗಳ ಬಗ್ಗೆ ಮಾತನಾಡಬಹುದಾಗಿತ್ತು. ನಾವು ಮಲಗಿರುವವರನ್ನು ಎಬ್ಬಿಸಿದರೆ, ಇವರು ಎದ್ದು ಕುಳಿತುಕೊಂಡರೆ, ನಮ್ಮದು ಏನೋ ಕಾರಣಕ್ಕೂ ಅಥವಾ ಬೇರೆ ಬೇರೆ ಕಾರಣಕ್ಕೋ ಬಹಳ ಸೂಕ್ಷ್ಮವಾಗಿ ಎಷ್ಟು ಕಿವಿ ಹಿಂಡಬೇಕೋ ಅಷ್ಟು ಕಿವಿ ಹಿಂಡಿ ವಾಸ್ತವಿಕ ಪರಿಸ್ಥಿತಿಯನ್ನು ತಿಳಿಸುವಂತಹ ಮನವರಿಕೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ವಿರೋಧ ಪಕ್ಷದ ನಾಯಕರು, ಉಪ ನಾಯಕರು ಮತ್ತು ಮಾನ್ಯ ರೇವಣ್ಣನವರು ಮಾಡಿದ್ದೀರಿ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದು ಇಷ್ಟೇ, ನೀವು

ಏನು ಕಾರ್ಯಕ್ರಮ ಮಾಡಬೇಕೆಂದು ಇದ್ದೀರಿ, ಅದಕ್ಕೆ ನಾಳೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಅಧಿವೇಶನದಲ್ಲಿ ಜನರಿಗೆ ಸ್ಪಷ್ಟವಾಗಿ ಭರವಸೆ ಕೊಡದಿದ್ದರೆ ಮತ್ತೆ ಅವಕಾಶ ತಪ್ಪಿ ಹೋಗುತ್ತದೆ ಎಂದು ನನಗೆ ಅನಿಸುತ್ತದೆ. ನಾವು ಈ ಸರ್ಕಾರದ ಶಾಸಕರು, ಪ್ರತಿನಿಧಿಗಳು ಎಂದು ಹೇಳಿ ಓಡಾಟ ಮಾಡುವುದಕ್ಕೆ ಕಷ್ಟ ಆಗುವಂತಹ ಪರಿಸ್ಥಿತಿ ಒದಗಿ ಬರಬಹುದು. ಅದಕ್ಕೆ ಅವಕಾಶ ಆದ ರೀತಿಯಲ್ಲಿ ನಾವು ಜಾಗೃತರಾಗಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜಾನುವಾರುಗಳು ಕಸಾಯಿ ಖಾನೆಗೆ ಹೋಗುತ್ತಿವೆ. ನಮಗೆ ಏನಾಗಿದೆ ಎಂದು ಗೊತ್ತಿಲ್ಲ. ಬರಗಾಲದ ಛಾಯೆ ಕಳೆದ 2–3 ತಿಂಗಳಿನಲ್ಲಿದ್ದರೂ ಸಹ ಅಗತ್ಯವಿರುವಂತಹ ಮೇವು ಸಂಗ್ರಹಣೆ ಮಾಡುವುದಕ್ಕೆ ಬೇಕಾದಂತಹ plan Agriculture University ಗಳಾಗಲಿ, ಕೃಷಿ ಇಲಾಖೆ ಅಧಿಕಾರಿಗಳಾಗಿರಲಿ ಯಾರೊಬ್ಬರೂ ಸಹ ಪೂರ್ವಭಾವಿ ಸಿದ್ಧತೆಯನ್ನು ಮಾಡಲಿಲ್ಲ. ನಾವು ಎಷ್ಟು ಗೋಶಾಲೆಗಳನ್ನು ತೆಗೆದಿದ್ದೇವೆ, ಎಷ್ಟು ಗೋವುಗಳಿಗೆ ಮೇವನ್ನು ಕೊಟ್ಟಿದ್ದೇವೆ? ಈಗ ನಮ್ಮ ಹತ್ತಿರ ಎಷ್ಟು ಮೇವು ದಾಸ್ತಾನು ಇದೆಯೆಂಬ ಕಲ್ಪನೆ ನಮಗಿಲ್ಲ. ಎರಡನೆಯದಾಗಿ ಫ್ಲೋರೈಡ್ ನೀರನ್ನು ಕುಡಿದಿರುವಂಥದ್ದು. ಮಾನ್ಯ ಈಶ್ವರಪ್ಪನವರು ಹೋಗಿದ್ದಾಗ ಕುಡಿಸಿದ್ದಾರೆ ಅನೇಕ ಸಾಂಕ್ರಮಿಕ ರೋಗಗಳಿಗೆ ಜನಗಳು ತುತ್ತಾಗುತ್ತಿದ್ದಾರೆ. ರೋಗಿಗಳನ್ನು ಆಸ್ಪತ್ರೆಗಳಲ್ಲಿ ಹೇಳುವವರು, ಕೇಳುವವರಿಲ್ಲ. ಆ ರೀತಿಯ ಆಲಸ್ಯ ಡಾಕ್ಟರ್‌ಗಳಲ್ಲಿ ಕಾಡುತ್ತಿದೆ. ಯಾವ ರೀತಿಯಲ್ಲಿ ಜಾನುವಾರು ಆಸ್ಪತ್ರೆಗಳು ಇದೆಯೆಂಬುದನ್ನು ನಿಮಗೆ ನಾನು ಹೇಳುವ ಅಗತ್ಯವಿಲ್ಲ. ನನ್ನ ಮೊದಲನೆಯ ವಿನಂತಿ ಏನೆಂದರೆ, ಮಾನ್ಯ ಜಯಚಂದ್ರರವರೆ ನಿಮಗೇ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಅಂದಾಜಿನ ಪ್ರಕಾರ ಸುಮಾರು ಎಪ್ಪತ್ತೈದು ಲಕ್ಷ ರೈತ ಕುಟುಂಬಗಳು ಇವೆ. ಅದರಲ್ಲಿ ಐವತ್ತು ಲಕ್ಷಕ್ಕೂ ಹೆಚ್ಚು ಜನ ಸಣ್ಣ ಅತಿ ಸಣ್ಣ ರೈತ ಕುಟುಂಬಗಳಿವೆ. ಅದರಲ್ಲಿ ಶೇಕಡ 70ಕ್ಕೂ ಹೆಚ್ಚು ರೈತರು ಒಣ ಬೇಸಾ–ಯ ಮಾಡುತ್ತಿದ್ದಾರೆ. ಇವರು ಮಳೆ, ಕೆರೆಗಳು ಇವುಗಳ ಆಶ್ರಯದಿಂದ ಬದುಕುವಂಥ ವಿಚಿತ್ರವಾದಂಥ ಸನ್ನಿವೇಶವಿದೆ. ಕೇವಲ ಶೇ.30ರಷ್ಟು ಮಾತ್ರ ನೀರಾವರಿ ಇರುವಂಥದ್ದು. ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ, ಸಹಕಾರಿ ಬ್ಯಾಂಕ್‌ಗಳಿಂದ ನೂರಕ್ಕೆ ಶೇ.30ರಷ್ಟು ಜನರು ಮಾತ್ರ ಸಾಲವನ್ನು ಪಡೆಯುತ್ತಿರುವಂಥದ್ದು, ಅಷ್ಟೂ ಇಲ್ಲ ಇನ್ನು ಶೇ.70ರಷ್ಟು ಭಾಗ ಕೃಷಿ ಅವಲಂಬಿತ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಕಾಲಿಡುವ ಹಾಗೆ ಇಲ್ಲ. ಅವರು ಸಹಕಾರಿ ಬ್ಯಾಂಕ್‌ಗಳಲ್ಲೂ ಸಾಲವನ್ನು ಪಡೆಯುವಂಥ ಪರಿಸ್ಥಿತಿಯಲ್ಲಿ ಇಲ್ಲ. ಈ ರೀತಿ ದಯನೀಯ

ಪರಿಸ್ಥಿತಿಯಲ್ಲಿರುವಂಥ ರೈತರ ಪರಿಸ್ಥಿತಿ ದಾರುಣವಾಗಿದೆ. ಕಳೆದ ಸಾರಿ ಸೆಪ್ಟೆಂಬರ್ ತಿಂಗಳಿಂದ ಈ ವರ್ಷದ ಜೂನ್ ತಿಂಗಳ ಕೊನೆಯವರೆಗೆ 1971 ರಲ್ಲಿ ಯಾವ ಪರಿಸ್ಥಿತಿ ಇತ್ತೆಂದು ಹೇಳುತ್ತಾರೋ, ಆ ರೀತಿ ಕನಿಷ್ಠ ಮಳೆಯಾಗಿರುವಂಥದ್ದು. ಇದರ ಬಗ್ಗೆ ಅಂಕಿ-ಅಂಶಗಳು, ವಿವರಗಳು ಎಲ್ಲರಿಗೂ ಗೊತ್ತಿದೆ, ಅದನ್ನು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. 2012ರ ಮೇ ತಿಂಗಳಲ್ಲಿ ಸರ್ಕಾರಿ ಅಧಿಕಾರಿಗಳು ಕೊಟ್ಟಿರುವಂಥ ಅಂಕಿ-ಅಂಶಗಳ ಪ್ರಕಾರ ಶೇ.75ರಷ್ಟು ಮಳೆಯ ಕೊರತೆ, ಜೂನ್ 2012ರಲ್ಲಿ ಶೇ.37ರಷ್ಟು ಮಳೆಯ ಕೊರತೆ, ಜುಲೈ 15-20ರವರೆಗೆ ಶೇ.34ರಷ್ಟು ಮಳೆಯ ಕೊರತೆ, ದಕ್ಷಿಣ ಒಳನಾಡಿನಲ್ಲಿ ಶೇ.63ರಷ್ಟು ಕೊರತೆ, ಉತ್ತರ ಒಳನಾಡಿನಲ್ಲಿ ಶೇ.38ರಷ್ಟು ಕೊರತೆ, ಮಲೆನಾಡಿನಲ್ಲಿ ಶೇ.40ರಷ್ಟು ಕೊರತೆ, ಕರಾವಳಿಯಲ್ಲೂ ಅದೇ ಒಂದು ವಿಚಿತ್ರವಾದಂಥ ಪರಿಸ್ಥಿತಿ ಇದೆ. ಮಾನ್ಯ ಸಿದ್ಧರಾಮಯ್ಯನವರು ನಿನ್ನೆ ದಿವಸ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಬಿತ್ತನೆ ಏನು ಆಗಿದೆ, ಸ್ಥಿತಿ-ಗತಿಗಳು ಏನಾಗಿದೆಯೆಂಬ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ಮುಂಗಾರು ಬಿತ್ತನೆ ಗುರಿ ಸುಮಾರು 75-76 ಲಕ್ಷ ಹೆಕ್ಟೇರ್ ಇದ್ದರೆ, ಜೂನ್ ತಿಂಗಳ ಕೊನೆಯ ವೇಳೆಗೆ ಸುಮಾರು ಇಪ್ಪತ್ತನಾಲ್ಕೂವರೆ ಪರ್ಸೆಂಟ್‌ನಿಂದ ಇಪ್ಪತ್ತೈದು ಪರ್ಸೆಂಟ್ ಭೂಮಿಯಲ್ಲಿ ಬಿತ್ತನೆ ಕಾರ್ಯವಾಗಬೇಕಾಗಿತ್ತು. ಆದರೆ ಇವತ್ತು ಜೂನ್ ತಿಂಗಳ ಕೊನೆಯವರೆಗೂ 14 ಲಕ್ಷ ಹೆಕ್ಟೇರ್ ಮಾತ್ರ ಬಿತ್ತನೆ ಯಾಗಿರುವಂಥದ್ದು. ಕಳೆದ ವರ್ಷ ಹದಿನೆಂಟೂವರೆ ಲಕ್ಷ ಹೆಕ್ಟೇರ್ ಭೂಮಿಯಲ್ಲೂ ಬಿತ್ತನೆ ಯಾಗಿತ್ತು. ಈಗ ಈ 14 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ರೈತರು ಸಾಲ ಪಡೆದು ಬಿತ್ತನೆ ಕಾರ್ಯ ಮಾಡಿದ್ದಾರೆ. ಇದರಲ್ಲಿ ಶೇ. 85-90ರಷ್ಟು ಒಣಗಿ ಹೋಗಿದೆ, ಮುಂಗಾರು ಸಂಪೂರ್ಣ ವಿಫಲವಾಗಿದೆ. ಇವರು ಮತ್ತೆ ಭೂಮಿಯನ್ನು ಸರಿ ಮಾಡಿ, ಬೀಜ ಬಿತ್ತನೆ ಮಾಡಿ, ರಸಗೊಬ್ಬರ ಹಾಕಿ ಮಾಡುವುದಕ್ಕೆ ಸಹಕಾರಿ ಸಂಘಗಳಿಂದ ತೆಗೆದುಕೊಂಡಿರುವಂಥ 2,300-2,400 ಕೋಟಿ ರೂ.ಗಳ ಸಾಲ ಏನು ಇದೆ, ಈ ಹಣವೆಲ್ಲಾ ಖಾಲಿಯಾಗಿ ಬರಿಗೈಲಿದ್ದಾರೆ. ಕೃಷಿ ಹಣವನ್ನು ಉಪಯೋಗ ಮಾಡಿ ಆಗಿದೆ, ಮುಂದೆ ಏನು ಮಾಡಬೇಕೆಂಬುದಕ್ಕೆ ದಿಕ್ಕು ಕಾಣುತ್ತಿಲ್ಲ. ರಾಜ್ಯದ ಯಾವುದೇ ಜಲಾಶಯಗಳಲ್ಲೂ ನೀರಿಲ್ಲ, ಅಕ್ಕ-ಪಕ್ಕದ ರಾಜ್ಯಗಳಲ್ಲಿ ಮಳೆಯಾಗಿಲ್ಲ, ಮೇವು ಬೇಕೆಂದರೆ ದೂರದ ರಾಜ್ಯಗಳಿಗೆ ಹೋಗಬೇಕು. ಇದರ transportation ಎಷ್ಟು ಆಗುತ್ತದೆ? ಇದರ ಕಳಕಳಿ ಯಾರಿಗೆ ಇದೆ? ಇದನ್ನು stock ಎಲ್ಲಿ ಮಾಡುವುದು? ಪಂಪ್‌ಸೆಟ್ ಇರುವ ರೈತರಿಗೆ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರಿಗೆ, ಕೃಷಿ ಅಧಿಕಾರಿಗಳಿಗೆ ಹೇಳಿ, ಈ ಅಧಿಕಾರಿಗಳಿಗೆ ಸರ್ಕಾರ ನಡೆಸುವ ಜವಾಬ್ದಾರಿ ಇರಬೇಕು. ಸರ್ಕಾರ ಬರುತ್ತದೆ, ಹೋಗುತ್ತದೆ, ನಾವು

ಇಲ್ಲಿ ಇರುತ್ತೇವೆ. ನಾವು ಸಂಬಳ ತೆಗೆದುಕೊಂಡು ಇದು ನಮ್ಮ ಕರ್ತವ್ಯವೆಂದು ಇದ್ದರೆ, ಬೋರ್‌ವೆಲ್‌ಗಳು ಇರುವಂಥ ರೈತರಿಗೆ ಒಂದು ಎಕರೆಯಲ್ಲಿ ಮೇವನ್ನು ಬೆಳೆಯಬೇಕೆಂದು ಹೇಳಿ, ಇದಕ್ಕೆ ಬೇಕಾದ ಬಿತ್ತನೆ ಬೀಜ, ಗೊಬ್ಬರವನ್ನು ಕೊಡುತ್ತೇವೆಂದು ಹೇಳಿ, ಒಂದು ಟನ್‌ಗೆ ನಾಲ್ಕೈದು ಸಾವಿರ ರೂ. ಗಳಂತೆ ಖರೀದಿ ಮಾಡಿ transportation ಮಾಡಿಕೊಂಡು ಬರುವ ಹಣವನ್ನು ನಿಮಗೆ ಕೊಡುತ್ತೇವೆಂದು ಹೇಳಿ, ಇನ್ನು ಮೇವು ಉಳಿದರೆ ಅವರನ್ನೇ ಇಟ್ಟುಕೊಳ್ಳಿ ಎಂದು ಹೇಳುವ ಬಗ್ಗೆ ಚಿಂತನೆ ಮಾಡಿ, ಈ ರೀತಿಯ ಜವಾಬ್ದಾರಿಗಳನ್ನು ಕೊಟ್ಟು ಆ ಕೆಲಸವನ್ನು ಮಾಡಿ, ಮೇವನ್ನು ಸಂಗ್ರಹ ಮಾಡಬಹುದಾಗಿತ್ತು. ಇದು ಅವರ ಕರ್ತವ್ಯತಾನೆ? ಈಗ ನಿಮ್ಮ ಹತ್ತಿರ ಹಣವಿದೆ, ಮೇವನ್ನು ಎಲ್ಲಿಂದ ತರಿಸುತ್ತೀರಿ? ಶೇ.90ರಷ್ಟು ಕೆರೆಗಳಲ್ಲಿ ಒಂದು ಹನಿ ನೀರು ಇಲ್ಲ, ಅಂತರ್ಜಲ ಕುಸಿದು ಹೋಗಿದೆ, ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಪ್ರತಿ ಹೋಬಳಿಗಳಲ್ಲಿ ಎರಡೆರಡು ಟ್ಯಾಂಕರ್ ಇಟ್ಟು, ಫ್ಲೋರೈಡ್ ನೀರನ್ನು ಕುಡಿಯುತ್ತಿರುವಂಥ ಜನರಿಗೆ ದಿವಸಕ್ಕೆ 6–7 ಟ್ರಿಪ್ ಕುಡಿಯುವ ನೀರನ್ನು ಕೊಟ್ಟಿದ್ದಾರೆ ಮನುಷ್ಯ ಬದುಕುತ್ತಿದ್ದನು. ಜಾನುವಾರುಗಳು ಎಲ್ಲೋ ಮೇವನ್ನು ತಿಂದು ನೀರನ್ನು ಕುಡಿಯುತ್ತಿದ್ದವು, ಕೆರೆ–ಕಟ್ಟೆಗಳಲ್ಲಿ ನೀರಿಲ್ಲ. ಇಲ್ಲಿ ಕುಳಿತಿರುವ ಮಾನ್ಯ ಸದಸ್ಯರು, ಅಧಿಕಾರಿಗಳು ಕಳೆದ ಮೂರ್‍ನಾಲ್ಕು ದಿವಸಗಳಿಂದ ಒಂದಷ್ಟು ಮಳೆ ಯಾಗುತ್ತಿದೆಯೆಂಬ ಭಾವನೆಯಿಂದ ಮೈ ಮರೆತರೆ, ಚುನಾವಣೆ ಬರುತ್ತದೆ, ಹೋಗುತ್ತದೆ. ಇಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆ, ಹೋಗುತ್ತಾರೆಂಬುದು ಮುಖ್ಯವಲ್ಲ. ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಲಿಲ್ಲವೆನ್ನುವ ಪಾಪ ಪ್ರಜ್ಞೆ ನಮಗೆ ಇರಬೇಕಾಗುತ್ತದೆ.ನಮ್ಮನ್ನು ಜನರು ಕ್ಷಮಿಸುವುದಿಲ್ಲ, ಈಗಲಾದರೂ ನಾವು ಜಾಗೃತರಾಗೋಣ. ಈ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಎನ್.ಜಿ.ಓ.ಗಳಿದ್ದಾರೆ, ಪ್ರಾಮಾಣಿಕರಿದ್ದಾರೆ, ಅವರನ್ನು ಉಪಯೋಗ ಮಾಡಿಕೊಳ್ಳಿ. ಮನುಷ್ಯರ ಆಸ್ಪತ್ರೆಗಳಿಗೆ ಹೋಗಿ, ಅಲ್ಲಿ ಡಾಕ್ಟರ್‌ಗಳು ಔಷಧಿಗಳನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಆಸ್ಪತ್ರೆಗಳನ್ನು ಯಾವಾಗ ತೆಗೆಯುತ್ತಾರೆ? ಯಾವಾಗ ಬಾಗಿಲು ಹಾಕುತ್ತಾರೆಂಬುದು ಗೊತ್ತಿಲ್ಲ. ಜಾನುವಾರುಗಳ ಆಸ್ಪತ್ರೆಗಳು ಏನಾಗಿವೆ? ಜಾನುವಾರುಗಳ ಸ್ಥಿತಿ ಏನಾಗಿದೆ? ಇದು ನಮಗೆ ಗೊತ್ತಿದೆ. ತಾವು ನಾಳೆ ಗೋಶಾಲೆಗಳನ್ನು ತೆಗೆದು ಆಸ್ಪತ್ರೆಗಳಲ್ಲಿ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವಂಥ ಮನುಷ್ಯರು, ಜಾನುವಾರುಗಳು ಬಂದಾಗ ಸರಿಯಾದಂತಹ ಒಂದು treatment ಸಿಗಬೇಕೆಂದು ಇದ್ದರೆ, ಅಲ್ಲಿ ಬೇಕಾಗಿರುವಂಥ ಕಳಕಳಿ ಇರುವ ಅಧಿಕಾರಿಗಳು, ಡಾಕ್ಟರ್‌ಗಳು ಇಲ್ಲದಿದ್ದರೆ ಇವರ ಗತಿ ಏನಾಗಬೇಕು? ಅದಕ್ಕಾಗಿ ನೀವು ಎನ್.ಜಿ.ಓ.ಗಳ ಮೀಟಿಂಗ್

ಕರೆಯಿರಿ, ಚುನಾಯಿತ ಪ್ರತಿನಿಧಿಗಳ ವಿಶ್ವಾಸವನ್ನು ತೆಗೆದುಕೊಳ್ಳಿ. ಇದು ಅಪರೂಪಕ್ಕೆ 70 ವರ್ಷಗಳ ನಂತರ ಕಾಣುತ್ತಿರುವ ಭೀಕರವಾದಂಥ ಬರಗಾಲದ ಈ ಸಂದರ್ಭದಲ್ಲಿ ಎಲ್ಲರ ಸಹಕಾರವನ್ನು ಪಡೆಯೋಣ. ನಮಗೆ ಕೇಂದ್ರ ಸರ್ಕಾರ ಏನು ಕೊಡುತ್ತದೆ ಎನ್ನುವುದಕ್ಕಿಂತ ಮುಂಚೆ ನಾವು ಮೊದಲು ನಮ್ಮ ಒಂದು ತಿಂಗಳ ಸಂಬಳವನ್ನು ಕೊಡುತ್ತೇವೆ, ಮಾನ್ಯ ಅಧ್ಯಕ್ಷರಿಗೆ ಗೊತ್ತು, ಒಪ್ಪಿಗೆ ಕೊಡಿ. ಈ ಆಗಸ್ಟ್ ಮೊದಲ ವಾರದಲ್ಲಿ ಬರಗಾಲದ ವ್ಯವಸ್ಥೆಗೋಸ್ಕರ ನನ್ನ ಒಂದು ಸಣ್ಣ ಟೋಕನ್ ಎಂದು ಕೊಡುವಂಥದ್ದು ನನ್ನ ಕರ್ತವ್ಯ. ನಾವು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಹತ್ತಿರವೂ ಮಾತನಾಡೋಣ. ನೌಕರರ ಸಂಘದವರು ಕಷ್ಟದಲ್ಲಿದ್ದಾಗ ಕೊಟ್ಟಿದ್ದಾರೆ. ಒಂದು ವಾರದ ಸಂಬಳವನ್ನು ಬರಗಾಲಕ್ಕೋಸ್ಕರ ಕೊಡಬಹುದು, ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಇವೆ, ಅವರಲ್ಲೂ ವಿನಂತಿ ಮಾಡೋಣ. ಈ ರಾಜ್ಯದಲ್ಲಿ ಎಲ್ಲಿಂದಲೋ ಬಂದು ಸಾವಿರಾರುಕೋಟಿ ರೂಪಾಯಿಗಳನ್ನು ಮಾಡಿಕೊಂಡಿರುವಂತಹ ಕೈಗಾರಿ–ಕೋದ್ಯಮಿಗಳು ಇದ್ದಾರೆ. ಇವರ 100–200 ಜನರ ಪಟ್ಟಿಯನ್ನು ಮಾಡೋಣ. ಇವರ ಪಟ್ಟಿಯನ್ನು ಮಾಡಿ ಹಣ ಸಂಗ್ರಹಣೆ ಮಾಡುವಂಥ ಪ್ರಯತ್ನವನ್ನು ಮಾಡೋಣ. ಆಮೇಲೆ ಕೇಂದ್ರ ಸರ್ಕಾರದ ಸಹಾಯವನ್ನು ನೋಡೋಣ. ರಾಜ್ಯಸರ್ಕಾರಕ್ಕೆ ಏನು ಧಾಡಿ ಆಗಿದೆ? ನಾವು ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಅನ್ನು ಮಂಡನೆ ಮಾಡಿರಬೇಕಾದರೆ, ಈ ಭೀಕರ ಬರಗಾಲದ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿ ಹೌಸ್‌ನಲ್ಲಿ ಎದ್ದು ನಿಂತು ಹತ್ತು ಸಾವಿರ ಕೋಟಿ ರೂ.ಗಳನ್ನು ಇದಕ್ಕಾಗಿ ತೆಗೆದಿಡುತ್ತೇನೆಂದು ಹೇಳಬೇಕಾಗುತ್ತದೆ. ಇದನ್ನು ಮೂರು ತಿಂಗಳುಗಳಲ್ಲಿ ಖರ್ಚು ಮಾಡುತ್ತೇನೆಂದು ಹೇಳಬೇಕು. ನಾವು ಕೇಂದ್ರ ಸರ್ಕಾರಕ್ಕೂ ಹೋಗಿ ಬರೋಣ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಯಡಿಯೂರಪ್ಪನವರೆ, ತಾವು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ಮಾನ್ಯ ಜಗದೀಶ್ ಶೆಟ್ಟರ್‌ರವರು ನಿಂತು ಈ ಸಂದರ್ಭದಲ್ಲಿ ಅದು ಎಷ್ಟು ಕೋಟಿ ರೂ.ಗಳಾಗಲಿ ದನಕರುಗಳನ್ನು ರಕ್ಷಣೆ ಮಾಡುತ್ತೇವೆ, ಜನರಿಗೆ ನೀರು ಕೊಡುತ್ತೇವೆ, ಮೇವು ಕೊಡುತ್ತೇವೆ, ಉದ್ಯೋಗ ಕೊಡುತ್ತೇವೆಂದು ಹೇಳುವುದಕ್ಕೆ, ಅವರನ್ನು ನೀವೇ ಮುಖ್ಯಮಂತ್ರಿಯನ್ನಾಗಿ ಮಾಡಿರುವಂಥದ್ದು. ನೀವು ಇದನ್ನು ಅವರ ಕಡೆಯಿಂದ ಹೇಳಿಸುವುದಕ್ಕೆ ಆಗುವುದಿಲ್ಲವೇ? ನೀವು ಏಕೆ ಇಷ್ಟೊಂದು ಕಸರತ್ತನ್ನು ತೆಗೆದುಕೊಳ್ಳಬೇಕು? ನೀವು ಈ ರೀತಿ ಹೇಳಿಸಿಬಿಟ್ಟರೆ ನಿಮ್ಮನ್ನು welcome ಮಾಡುತ್ತೇವೆ, ಅವರನ್ನೂ welcome ಮಾಡುತ್ತೇವೆ. ತಾವು ದಯಮಾಡಿ ಅವರಿಂದ ಹೇಳಿಸಿ ಬಿಡಿ.

**ಶ್ರೀ ಬಿ.ಎಸ್.ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ನಾನು ಅವರ ಕೈಯಲ್ಲಿ ಹೇಳಿಸದೇ ಇದ್ದರೆ, ಈ ಸಂಕಷ್ಟ ಕಾಲದಲ್ಲಿ ಇದಕ್ಕೆ ಬೇಕಾಗಿರುವಂಥ ಹಣವನ್ನು ಅವರು ಮುಡುಪಾಗಿಡದಿದ್ದರೆ ನಾನು ನಿಮ್ಮ ಜೊತೆಗೆ ಪ್ರವಾಸಕ್ಕೆ ಬರುತ್ತೇನೆ.

**ಶ್ರೀ ಸಿದ್ಧರಾಮಯ್ಯ** :Very good. ತಾವು ನಮ್ಮ ಜೊತೆಗೆ ಬರುತ್ತೀರಾ?

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಮುಖ್ಯಮಂತ್ರಿಯವರು, ನಾನು ನೀವು ಕಂದಾಯ ಸಚಿವರು ಎಲ್ಲರೂ ಹೋಗೋಣ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ** : ನಾನು ಯಾವುದೋ ರಾಜಕೀಯ ಹಿನ್ನೆಲೆಯಲ್ಲಿ ಮಾತನಾಡುತ್ತಿಲ್ಲ. ನಾನಂತೂ ಈ ಅಧಿವೇಶನ ಮುಗಿದ ಮೇಲೆ ಇನ್ನು ಒಂದು ತಿಂಗಳು ನಿಮ್ಮ ಜೊತೆಗೆ ರಾಜ್ಯದಲ್ಲಿ ಓಡಾಡುತ್ತೇನೆ.

**ಶ್ರೀ ಸಿದ್ಧರಾಮಯ್ಯ** : Very good, welcome ...

**ಶ್ರೀ ಬಿ.ಎಸ್. ಯಡಿಯೂರಪ್ಪ** : ಹಳ್ಳಿಯಲ್ಲೇ ಉಳಿಯುತ್ತೇನೆ. ಜನರ ಕಷ್ಟ ಸುಖ ಏನೆಂದು ತಿಳಿದುಕೊಳ್ಳುತ್ತೇನೆ.

ನಮ್ಮ ಜೊತೆಗೆ ಡಿ.ಸಿ. ತಹಶೀಲ್ದಾರ್ ಬರಲಿ. ವಿಧಾನ ಸೌಧದಲ್ಲಿ ಕೈಕಟ್ಟಿಕೊಂಡು ಕುಳಿತಿರುವ ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಸಂಭಂಧಪಟ್ಟ ಇಲಾಖೆಯ ಅಧಿಕಾರಿಗಳೆಲ್ಲ ರಾಜ್ಯದಲ್ಲಿ ಪ್ರವಾಸ ಮಾಡಲಿ. ಬೇರೆಬೇರೆ ಸ್ಕೀಮ್‌ಗಳಿಗೆ ಕೊಟ್ಟಿರುವಂಥ ಹಣವನ್ನು ಸದ್ವಿನಿಯೋಗ ಮಾಡಿಕೊಳ್ಳಲಿ. ನೀವು ಆಮೇಲೆ ಮಾತನಾಡಿ ಸಿದ್ದರಾಮಯ್ಯನವರೇ.

**ಶ್ರೀ ಸಿದ್ದರಾಮಯ್ಯ** : ನಿಮಗೆ ಇನ್ನೂ ಸ್ವಲ್ಪ ಮಾಡಿಕೊಡುತ್ತಿದ್ದೇನೆ. ಬೇಡವೇ?

**ಶ್ರೀ ಬಿ.ಎಸ್.ಯಡಿಯೂರಪ್ಪ:** ಬೇಡ, ನನ್ನ ಮೇಲೆ ಏನೂ ಪರಿಣಾಮ ಬೀರುವುದಿಲ್ಲ. ನಾನು ಮಾತನಾಡಬೇಕೆಂದು ನಿಂತಿದ್ದೇನೆ.

**ಶ್ರೀ ವಿ.ಮುನಿಯಪ್ಪ:** ದಯಮಾಡಿ ತಕ್ಷಣ ಪರಿಹಾರ ಕೊಡಿಸುವುದಕ್ಕೆ ಸೂಚನೆ ಕೊಡಿ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:** ಅವರು ಬೆಂಕಿ ಹಚ್ಚುತ್ತಿಲ್ಲ. ಬೆಂಕಿ ಹಚ್ಚುವ ಸಮಯಕ್ಕೆ ನೀವು ಕಾಯುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ:**ಈಶ್ವರಪ್ಪನವರೇ,ರಾಷ್ಟ್ರಪತಿ ಚುನಾವಣೆಯಲ್ಲಿ ನಿಮ್ಮ 12 ಜನರು ಓಟನ್ನು ಕ್ರಾಸ್ ಮಾಡಿದ್ದಾರೆ. ನಾವು ಬೆಂಕಿ ಹಚ್ಚುವುದಕ್ಕೆ ಹೋಗುತ್ತಿದ್ದೇವಂತೆ, ಏನು ನೀವು ಮಾತನಾಡುವುದು?

**ಶ್ರೀ ಕೆ.ಎಸ್.ಈಶ್ವರಪ್ಪ:**ನಾವು ಮುಸಲ್ಮಾನವರಿಗೆ ಅನ್ಯಾಯ ಮಾಡಿದ್ದೇವೆ, ಕ್ಷಮಿಸಿ ಎಂದು ನಿಮ್ಮ ಸಮಿತಿಯ ನಾಯಕರೇ ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಅದನ್ನು ನಾವೇ ಹೇಳಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ಈಗ ಮತ್ತೇನು ಹೇಳುತ್ತಿದ್ದೀರಿ?

**ಅಧ್ಯಕ್ಷರು:** ವಿಷಯಾಂತರ ಬೇಡ.

**ಶ್ರೀ ಸಿದ್ದರಾಮಯ್ಯ:**ನಮ್ಮ ಪಕ್ಷ ಆ ರೀತಿಯಲ್ಲ. ತಪ್ಪು ಮಾಡಿಬಿಟ್ಟಿದ್ದಾರೆ ಎಂದು ನಮ್ಮ ಪಕ್ಷದವರೇ ಒಪ್ಪಿಕೊಂಡಿದ್ದಾರೆ, admitted. ಅದೇ ರೀತಿ ನೀವೂ ಒಪ್ಪಿಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:** ನಾನು ಒಪ್ಪಿಕೊಳ್ಳಲೇಬೇಕು. ಯಾರು ತಪ್ಪು ಮಾಡಿದ್ದಾರೆ, ಅದರ ಬಗ್ಗೆ ತನಿಖೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನಮ್ಮ ರಾಷ್ಟ್ರೀಯ ನಾಯಕರೇ ಹೇಳಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನಮ್ಮಲ್ಲಿ ಓಟುಗಳು ಕ್ರಾಸ್ ಆಗಿವೆ, ಅದರಿಂದ ಅವರಿಗೆ ನೋವಾಗಿದೆ, ನಾವು ಅವರ ಕ್ಷಮೆ ಕೇಳುತ್ತೇವೆ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ನೀವು ಹೇಳಿದ್ದೀರಿ. ನಾವೂ ಕೂಡ ಅದನ್ನೇ ಹೇಳಿದ್ದೇವಲ್ಲ?

**ಶ್ರೀ ಸಿದ್ದರಾಮಯ್ಯ:** ಈಗ ನೀವು ಹೇಳಿದಿರಲ್ಲ? ಬೆಂಕಿ ಹಚ್ಚಿದರು ಎಂದು ಹೇಳಿದಿರಲ್ಲ? ಯಡಿಯೂರಪ್ಪನವರಿಗೆ ಸಹಾಯ ಮಾಡಲು ನಾವು ಹೇಳಿದ್ದು.

**ಶ್ರೀ ಕೆ.ಎಸ್.ಈಶ್ವರಪ್ಪ:** ಯಡಿಯೂರಪ್ಪನವರ ಕಳಕಳಿಯನ್ನು ನೀವು ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೀರಿ. ಇದನ್ನು ನಾನು ಒಪ್ಪುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:**No,no. ಭಾಷಣ ಮಾಡುವುದಕ್ಕೆ ಇಬ್ಬರೂ ಒಟ್ಟಿಗೆ ಜೊತೆಗೆ ಹೋಗೋಣ ಎಂದು ನಾನು ಹೇಳುದ್ದೇನೇ?

**ಶ್ರೀ ಕೆ.ಎಸ್.ಈಶ್ವರಪ್ಪ:** ಅದೇ ಅವರ ಕಳಕಳಿ.

**ಶ್ರೀ ಸಿದ್ದರಾಮಯ್ಯ:** ನನ್ನ ಕಳಕಳಿಯೂ ಅದೇ. ಅವರು ಬಯ್ಯುತ್ತಿರುವುದು ನಿಮಗೇ, ನಮಗೇನೂ ಬಯ್ಯುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:** ಯಡಿಯೂರಪ್ಪನವರ ಮಾತನ್ನು ಬಯ್ಗುಳ ಎಂದು ಅಂದುಕೊಳ್ಳಬೇಡಿ. ನೀವು ಆಡಳಿತ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಒಮ್ಮೆಯಾದರೂ ಕೂಡ ಈ ರೀತಿ ಕಳಕಳಿಯ ಮಾತನ್ನಾಡಿರುವಿರಾ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಆ ರೀತಿಯ ರಾಜಕಾರಣ ನಮಗೆ ಗೊತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:** ಅದು ರಾಜಕಾರಣವಲ್ಲ, ಕಳಕಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಯಡಿಯೂರಪ್ಪನವರು ಮೊದಲನೇ ಬಾರಿಗೆ ನಿಮ್ಮನ್ನೆಲ್ಲ expose ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ಅವರ ಕಳಕಳಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ:** ನಾವು ಹೇಳಿದರೆ ನೀವು ನಂಬುತ್ತಿರಲಿಲ್ಲ. ಈಗ ಅವರೇ ಹೇಳುತ್ತಿರುವುದರಿಂದ ನಂಬಿಕೊಳ್ಳಲೇಬೇಕು, ಈ ರಾಜ್ಯದ ಜನ ನಂಬಿಕೊಳ್ಳಲೇಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:** ಅವರ ಕಳಕಳಿಯನ್ನು ಈ ರೀತಿ ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ:** ನಾನು ಹೇಳಿದಾಗ ನೀವು ಒಪ್ಪಿಕೊಂಡಿರಾ?

**ಶ್ರೀ ಕೆ.ಎಸ್.ಈಶ್ವರಪ್ಪ:** ಯಾವುದು?

**ಶ್ರೀ ಸಿದ್ದರಾಮಯ್ಯ:** ಅವರು ಹೇಳುತ್ತಿರುವುದನ್ನೇ ನಾನೂ ಹೇಳಿದ್ದೆ. ಅವರು ಏನೇನು ಹೇಳಿದರೋ, ಬರಗಾಲದ ಬಗ್ಗೆ ಮಾತನಾಡುವಾಗ ನಾನು ಅದೆಲ್ಲವನ್ನೂ ಹೇಳಿದ್ದೆ. ಯಡಿಯೂರಪ್ಪನವರು ಏನೇನು ಹೇಳಿದ್ದಾರೆ, ಅದೆಲ್ಲವನ್ನೂ ನಾನು ಹೇಳಿದ್ದೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ಉತ್ತರ ಕೊಡುವಾಗ ನಿಮಗೆ ನಾನು ಉತ್ತರ ಕೊಡುತ್ತೇನೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಅವರು ಈಗ ಏನೇನು ಹೇಳುತ್ತಿದ್ದಾರೆ, ಅದೆಲ್ಲವನ್ನೂ ನಾನು ಹೇಳಿದ್ದೆ. ಈಗ ಅವರು ಅದನ್ನೇ repeat ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ನಾನು ಇಲ್ಲ ಎಂದು ಹೇಳುವುದಿಲ್ಲ. ನಿಮಗೆ ನಾನು ಏನು ಉತ್ತರ ಕೊಡಬೇಕೋ ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಅವರಿಗೆ ಏನು ಉತ್ತರ ಕೊಡಬೇಕೋ, ಅದನ್ನೂ ಕೊಡುತ್ತೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:** ಯಡಿಯೂರಪ್ಪನವರು ತಾವೊಬ್ಬರೇ ಎಂ.ಎಲ್.ಎ. ಆಗಿದ್ದಂಥ ಸಂದರ್ಭದಲ್ಲೂ ಕೂಡ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದರು.

**ಶ್ರೀ ಸಿದ್ದರಾಮಯ್ಯ:** ನಾವೂ ಅದೇ ಕೆಲಸವನ್ನು ಮಾಡಿಕೊಂಡು ಬಂದಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:** ಹೌದು, ಅದಕ್ಕೋಸ್ಕರವೇ ಈ ಸ್ಥಿತಿ ಬಂದಿರುವುದು.

**ಶ್ರೀ ಸಿದ್ದರಾಮಯ್ಯ:** ನಾನೂ ಸಹ ಮೂರು ವರ್ಷಗಳ ಕಾಲ ರೈತ ಸಂಘದ ಜನರಲ್ ಸೆಕ್ರೆಟರಿಯಾಗಿ ಮೈಸೂರು ಜಿಲ್ಲೆಯಲ್ಲಿ ರೈತ ಚಳುವಳಿಯಲ್ಲಿದ್ದವನು.

**ಶ್ರೀ ಕೆ.ಎಸ್.ಈಶ್ವರಪ್ಪ:** ಬಹಳ ಸಂತೋಷ.

**ಶ್ರೀ ಸಿದ್ದರಾಮಯ್ಯ:** ಮತ್ತೆ ಸುಮ್ಮನಿರಿ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಟಿ.ಬಿ.ಜಯಚಂದ್ರರವರು ಮಾತನಾಡಲು ಎದ್ದು ನಿಂತರು)

**ಅಧ್ಯಕ್ಷರು:**ದಯವಿಟ್ಟು ಬೇಡ, ಅವರು ಮಾತನಾಡಲಿ. ವಿರೋಧ ಪಕ್ಷದ ನಾಯಕರು ಮಾತನಾಡಿದ ತಕ್ಷಣ ನೀವು ಮತನಾಡಬೇಕಿತ್ತು. ಈಗ ಬೇಡ.

**ಶ್ರೀ ಟಿ.ಬಿ.ಜಯಚಂದ್ರ:** ಯಡಿಯೂರಪ್ಪನವರು ಈಗ ಇಷ್ಟು ಚೆನ್ನಾಗಿ ರಾಜ್ಯದ ಚಿತ್ರಣವನ್ನು ರಾಜ್ಯದ ಜನರು ಸಮಸ್ಯೆಯನ್ನು ಮುಂದಿಡುತ್ತಿರುವಾಗ, ಬೆಂಕಿ ಹಚ್ಚುತ್ತಿದ್ದಾರೆ ಎನ್ನುತ್ತಿದ್ದೀರಲ್ಲ? ಯಡಿಯೂರಪ್ಪನವರು ನಿಮಗೆ ಸಪೋರ್ಟ್ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ಜಯಚಂದ್ರರವರೇ, ನಿನ್ನೆಯ ಸಭೆಯ ಬಗ್ಗೆ ಅಭಿನಂದನೆ ಸಲ್ಲಿಸುತ್ತೀರಿ, ನಂತರ ಮರೆತು ಬಿಡುತ್ತೀರಿ. ನಾನು ನಿಮ್ಮನ್ನು ಕೇಳುತ್ತೇನೆ, ನೀವು ಆಡಳಿತ ಪಕ್ಷದಲ್ಲಿದಾಗ, ಒಮ್ಮೆಯಾದರೂ ಈ ರೀತಿ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಾ?

(ಗೊಂದಲ)

**ಅಧ್ಯಕ್ಷರು:** ಜಯಚಂದ್ರರವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:** ಜನಗಳ ವಿಚಾರ ಬಂದಾಗ ನಾವು ಯಾವ ಪ್ರತಿಷ್ಠೆಯ ಮೇಲೂ ನಿಲ್ಲುವುದಿಲ್ಲ. ಅದು ನಮ್ಮ ಪಕ್ಷದ ಸಿದ್ಧಾಂತ.

**ಶ್ರೀ ಬಿ.ಎಸ್.ಯಡಿಯೂರಪ್ಪ:** ನಾನು ಪ್ರಾಮಾಣಿಕವಾಗಿ, ಒಬ್ಬ ರೈತನ ಮಗನಾಗಿ, ಹಳ್ಳಿಹಳ್ಳಿಗಳನ್ನು ಸುತ್ತಿ, ಅವರ ಆಶೀರ್ವಾದವನ್ನು ಪಡೆದು, ಇವತ್ತು ಈ ಟ್ರೆಷರಿ ಬೆಂಚಿನಲ್ಲಿ ಇವರೆಲ್ಲ ಕುಳಿತುಕೊಳ್ಳಲು ಕಾರಣನಾದವನು ನಾನು. ಈ ಸಂದರ್ಭದಲ್ಲಿ ವಾಸ್ತವಿಕ ಸತ್ಯಸಂಗತಿಯನ್ನು ಮನವರಿಕೆ ಮಾಡದಿದ್ದರೆ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಲಿಲ್ಲವೆನ್ನುವ ಜನರ ಶಾಪಕ್ಕೆ ಗುರಿಯಾಗುತ್ತೇವೆ ಎನ್ನುವ ದೃಷ್ಟಿಯಿಂದ ಜಾಗೃತರಾಗುವ ಪ್ರಯತ್ನವನ್ನು ನಾನು ಈ ಮನೆಯಲ್ಲಿ ಮಾಡುತ್ತಿದ್ದೇನೆ. ಇಲ್ಲಿ ನಾನು ಮಾತನಾಡುವ ಒಂದೊಂದು ಮಾತನ್ನೂ ಸಹ ಈ ರಾಜ್ಯದ ನೊಂದ ರೈತ ಸಮುದಾಯ ಕೇಳುತ್ತಿರುತ್ತದೆ ಎಂದು ತಿಳಿದುಕೊಂಡು ನಾನು ಇಲ್ಲಿ ಮಾತನಾಡುತ್ತಿದ್ದೇನೆ. ಇದರಲ್ಲಿ ರಾಜಕೀಯ ಇಲ್ಲ. ನಾನು ಕಾಂಗ್ರೆಸ್ಸಿನ ಹೆಸರು ಹೇಳಲಿಲ್ಲ, ಬಿ.ಜೆ.ಪಿ.ಯ ಹೆಸರು ಹೇಳಲಿಲ್ಲ, ಜೆ.ಡಿ.(ಎಸ್)ನ ಹೆಸರು ಹೇಳಲಿಲ್ಲ, ಒಬ್ಬ ಸಾಮಾನ್ಯ ರೈತನ ಪ್ರತಿನಿಧಿಯಾಗಿ ಇಲ್ಲಿ ನಿಂತು ಮಾತನಾಡುತ್ತಿದ್ದೇನೆ. ನನ್ನ ವಿಚಾರ ಎಷ್ಟೇ ಮೊನ್ನೆ ತಾನೇ ಮುಖ್ಯಮಂತ್ರಿಗಳು ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ 2,605 ಕೋಟಿ ರೂಪಾಯಿಗಳ ಮೊದಲನೇ ಕಂತಿನ ಪರಿಹಾರವನ್ನು ಕೇಳಿದರು. ಅದರಲ್ಲಿ 186 ಕೋಟಿ ಮಂಜೂರಾಗಿ, 70 ಕೋಟಿ 23 ಲಕ್ಷ ಬಿಡುಗಡೆಯಾಗಿ ಮೊದಲನೇ ಕಂತು ಬಂತು. 2012ರ ಮೇ 2 ಮತ್ತು 3ರಂದು ಮತ್ತೊಮ್ಮೆ ಮುಖ್ಯಮಂತ್ರಿಗಳು ನಿಯೋಗವನ್ನು ತೆಗೆದುಕೊಂಡು ಹೋಗಿ, 5,864 ಕೋಟಿ ರೂಪಾಯಿಗಳ ಬೇಡಿಕೆಯನ್ನು ಮುಂದಿಟ್ಟರು. ಅದರಲ್ಲಿ 282 ಕೋಟಿ 53 ಲಕ್ಷ ಬಿಡುಗಡೆಯಾಯಿತು. ಇವತ್ತು ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಹೋಗಿ ನಾವು ಕೇಳಿರುವಂಥ ಐದು ಸಾವಿರ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳುವುದು ಯಾವಾಗ ಎಂದರೆ, ನಾವು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿ, ಅವರಿಂದ ಹಣವನ್ನು ಕೇಳಿದರೆ ಅವರು ನಿಶ್ಚಿತವಾಗಿ ನೆರವನ್ನು ಕೊಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಮೊದಲು ನಮ್ಮ ಕರ್ತವ್ಯವನ್ನು ಮಾಡೋಣ. ರಾಜ್ಯ ಸರ್ಕಾರ ಮತ್ತು ರೈತರ ಪ್ರತಿನಿಧಿಗಳಾಗಿ ಇಲ್ಲಿ ಕುಳಿತಿರುವಂಥ ನಾವು ಇಂಥ ಸಂಕಷ್ಟದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಕಡೆಗೆ ಬೆರಳು ಮಾಡಿ ತೋರಿಸದೇ, ನಾವೇ ಈ ಸಮಸ್ಯೆಯನ್ನು ಎದಿರಿಸಿ, ಇಡೀ ದೇಶದಲ್ಲೇ ಇದನ್ನು ಒಂದು ಮಾದರಿಯಾಗಿ, ಒಂದು ಸವಾಲಾಗಿ ಸ್ವೀಕಾರ ಮಾಡೋಣ ನಮಗೆ ಹಣಕಾಸಿನ ಕೊರತೆಯಿಲ್ಲ. ನಾನು ಅಂಕಿ ಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಪ್ರೀಲ್, ಮೇ, ಜೂನ್, ಮತ್ತು ಜುಲೈ ತಿಂಗಳುಗಳಲ್ಲಿ ಎಷ್ಟು plan and Non-planexpenditureಮಾಡಬೇಕಾಗಿತ್ತೋ? ಬೇರೆ ಬೇರೆ ಕಾರಣಗಳಿಂದಾಗಿ ಅಷ್ಟು

ಖರ್ಚಾಗಿಲ್ಲ. ಉಳಿದ ಆ ಎಲ್ಲ ಹಣವನ್ನು ಈ ವರ್ಷ ಇದಕ್ಕೆ ಖರ್ಚು ಮಾಡೋಣ. ಸಿದ್ದರಾಮಯ್ಯನವರೇ, ನೀವೇ suggest ಮಾಡಿದಿರಿ, ಸರ್ಕಾರ ಈ ಬರಗಾಲ ಪೀಡಿತ ಪ್ರದೇಶಗಳಿಗೆ ಹೆಚ್ಚಿನ ನೆರವನ್ನು ಕೊಡಲು ಮುಂದಾದರೆ, ಈಗ ಮಂಜೂರಾತಿ ಮಾಡಿಕೊಂಡಿರುವಂಥ ಕಾರ್ಯಕ್ರಮಗಳಲ್ಲಿ ಬದಲಾವಣೆ ತನ್ನಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ ಎನ್ನುವಂಥ ಮಾತನ್ನು ಪ್ರತಿಪಕ್ಷದ ನಾಯಕರಾಗಿ ನೀವು ಹೇಳುತ್ತಿದ್ದೀರಿ. ನಾನೂ ಅದನ್ನೇ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ಯಾವುದಕ್ಕೆ ನಿಮ್ಮ ಆದ್ಯತೆ ಎನ್ನುವುದನ್ನು ಉತ್ತರ ಕೊಡುವಾಗ ಹೇಳಬೇಕು. ಈ ರಾಜ್ಯದ ಜನತೆ ಭೀಕರ ಬರಗಾಲವನ್ನು ಎದುರಿಸಿ, ನಾವು ಗೌರವದಿಂದ ತಲೆಯೆತ್ತಿ ನಮ್ಮ ಕ್ಷೇತ್ರದಲ್ಲಿ ಓಡಾಡಬೇಕೆಂದಿದ್ದರೆ ಈ ಸಂದರ್ಭದಲ್ಲಿ ಬಹಳ ದೊಡ್ಡ ಪ್ರಮಾಣದ ನೆರವನ್ನು ಕೊಡಬೇಕಾಗುತ್ತದೆ. ನಾನು ನಮ್ಮ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ನಮ್ಮ ಬಜೆಟ್ 1 ಲಕ್ಷ ಕೋಟಿ ರೂಪಾಯಿ-ಗಳದಲ್ಲ, 90 ಸಾವಿರ ರೂಪಾಯಿಗಳದ್ದು ಎಂದು ತಿಳಿದುಕೊಳ್ಳಿ. ಇನ್ನು 10 ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷ ಈ ಬರಗಾಲಕ್ಕಾಗಿ ಬರುವ ಮೂರು ತಿಂಗಳಲ್ಲಿ ವಿನಿಯೋಗ ಮಾಡುತ್ತೇವೆ ಎಂದು ಹೇಳಿ. ಇದನ್ನು ಅಧಿಕಾರಿಗಳನ್ನು ಕೇಳಿ ಮಾಡಬೇಕಾಗಿಲ್ಲ.

**ಶ್ರೀ ಸಿದ್ದರಾಮಯ್ಯ:** ನಾನು 5 ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:** ನಾವು 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಮನಸ್ಸಿದ್ದರೆ ಇದರಲ್ಲಿ ಏನೂ ಕಷ್ಟವಿಲ್ಲ ಸಿದ್ದರಾಮಣ್ಣ? ಇಂಥ ಸಂಕಷ್ಟದಲ್ಲಿ ಸ್ಪಂದಿಸಬೇಕು ಎನ್ನುವ ಧಾರಾಳತನವಿರಬೇಕಾಗುತ್ತದೆ. ಇಲ್ಲದಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಲು ಹಣವನ್ನು ಇನ್ನೆಲ್ಲಿಂದ ತರುವುದಕ್ಕಾಗುತ್ತದೆ? ಬಹಳ ದೊಡ್ಡ ಪ್ರಮಾಣದಲ್ಲಿ ಮುಂದೆ ಬರಬೇಕು. 30-6-2012 ರವರೆಗೆ ರಾಜ್ಯದಲ್ಲಿ 77 ಗೋಶಾಲೆಗಳಿದ್ದವು. ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಗೋಶಾಲೆಗಳನ್ನುಏನೂ ತೆಗೆದಿಲ್ಲ. ಈಗ ಹೋಬಳಿಗೊಂದು ಗೋಶಾಲೆಯನ್ನು ತೆಗೆಯಿರಿ. ಆ ಜಾನುವಾರುಗಳನ್ನು ಉಳಿಸೋಣ, ದುಡ್ಡು ಖರ್ಚಾಗಲಿ. 8-10 ಟ್ಯಾಂಕರುಗಳನ್ನು ಖರೀದಿ ಮಾಡಿ ಇಟ್ಟುಕೊಳ್ಳಿ ಅಥವಾ ಬಾಡಿಗೆಗೆ ತೆಗೆದುಕೊಳ್ಳಿ ಎಂದು ತಹಶೀಲ್ದಾರರಿಗೆ ಹೇಳೋಣ. ಒಂದು ಹಳ್ಳಿಗೆ ಒಂದು ಸಲ ಟ್ಯಾಂಕರ್‌ನಲ್ಲಿ ನೀರು ಕೊಟ್ಟರೆ ಆಗುತ್ತದೆಯೇ? ಜಾನುವಾರುಗಳೂ ಟ್ಯಾಂಕರುಗಳ ನೀರು ಕುಡಿಯುವಂಥ ದುಸ್ಥಿತಿ ಬಂದಿರಬೇಕಾದರೆ, ದೊಡ್ಡ ಪ್ರಮಾಣದಲ್ಲಿ ಜಾನುವಾರುಗಳಿಗೆ, ಮನುಷ್ಯರಿಗೆ ಕುಡಿಯುವ ನೀರನ್ನು ಕೊಡೋಣ. ಮಳೆರಾಯನನ್ನು ಪ್ರಾರ್ಥನೆ

ಮಾಡೋಣ. ಆದರೆ ಅಲ್ಲಿ ಇಲ್ಲಿ ಮಳೆ ಬರುತ್ತದೆ ಎಂದು ಸರ್ಕಾರ ತಮ್ಮ ಚಿಂತನೆಯಿಂದ ಹಿಂದೆ ಸರಿಯುವಂಥ ಅಗತ್ಯವಿಲ್ಲ. ನಮ್ಮದು ಏನೇನು ಚಿಂತನೆ ಇದೆ, ಅದು ಗೋಶಾಲೆಗಳನ್ನು ತೆಗೆಯುವುದು ಇರಬಹುದು, ಟ್ಯಾಂಕರುಗಳ ಮೂಲಕ ಕುಡಿಯುವ ನೀರನ್ನುಕೊಡುವುದು ಇರಬಹುದು, ಹೆಚ್ಚು ಗೋಶಾಲೆಗಳನ್ನು ತೆರೆದು, ಹೆಚ್ಚು ಮೇವನ್ನು ಸಂಗ್ರಹ ಮಾಡಿ ಜಾನುವಾರುಗಳನ್ನು ರಕ್ಷಣೆ ಮಾಡುವುದು ಇರಬಹುದು, ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದು ಇರಬಹುದು, ಅದೆಲ್ಲವನ್ನೂ ಮಾಡಬೇಕಾಗುತ್ತದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ನಮ್ಮ ಪ್ಲಾನ್ ಎಷ್ಟು ಸ್ವಾಮಿ? ನಮ್ಮ ಅಧಿಕಾರಿಗಳನ್ನು ಕೇಳುತ್ತೇನೆ, ಎಷ್ಟರಮಟ್ಟಿಗೆ ಸರಿ ಇದೆ? ನರೇಗಾ ಪ್ರೋಗ್ರಾಂನಲ್ಲಿ ನಾವು 2009–10ರಲ್ಲಿ 2,213 ಕೋಟಿ ಖರ್ಚು ಮಾಡಿದೆವು, 2012–11ರಲ್ಲಿ 1,860 ಕೋಟಿ ಖರ್ಚು ಮಾಡಿದೆವು, 2011–12ರಲ್ಲಿ 2,197 ಕೋಟಿ ಖರ್ಚು ಮಾಡಿದೆವು. ಆದರೆ 2012–13ರಲ್ಲಿ ನಿಮ್ಮ ಪ್ಲಾನ್ ಇರುವುದೇ 2,442.97 ಕೋಟಿ ರೂಪಾಯಿಗಳು. ಅದರಲ್ಲಿ ಇದುವರೆಗೆ ಖರ್ಚು ಮಾಡಿರುವುದು ರೂ.346 ಕೋಟಿ. ನಿಮ್ಮ ಕಣ್ಣ ಮುಂದೆ ಐದು ಸಾವಿರ ಕೋಟಿ ರೂಪಾಯಿಗಳ ಪ್ಲಾನ್ ಇಟ್ಟುಕೊಳ್ಳಿ. ಕೇಂದ್ರ ಸರ್ಕಾರ ಆದ್ಯತೆ ಮೇಲೆ ಇದಕ್ಕೆ ಎಷ್ಟು ಬೇಕಾದರೂ ಹಣ ಕೊಡಲು ಸಿದ್ಧವಿದೆ. ಆದರೆ ನಮ್ಮ ಅಧಿಕಾರಿಗಳಿಗೆ ಇದರಲ್ಲಿ ಆಸಕ್ತಿಯಿಲ್ಲ. ಶಾಸಕರಾದ ನಾವು ಆಸಕ್ತಿ ತೆಗೆದುಕೊಳ್ಳೋಣ.NREGA Programme ಇದೆ.ಇಂಥ ಬರಗಾಲದ ಸಂದರ್ಭದಲ್ಲಿ ಕೃಷಿ ಕಾರ್ಮಿಕ ಒಬ್ಬ ತನಗೆ ಉದ್ಯೋಗವಿಲ್ಲವೆಂದು ಎಂದು ಹೇಳುವಂಥ ಒಂದು ಉದಾಹರಣೆ ಒಂದು ಕ್ಷೇತ್ರದಲ್ಲಿ ಸಿಕ್ಕಿದರೆ, ಆ ಅಧಿಕಾರಿಯನ್ನು hang ಮಾಡಿ, ಅವರಿಗೆ ಜವಾಬ್ದಾರಿ ಕೊಡಿ. ಆದರೆ ಅವರು ಪ್ರಾಮಾಣಿಕವಾಗಿರಬೇಕಾಗುತ್ತದೆ. ಅವನಿಗೆ ಭಯವಿರಬೇಕಲ್ಲವೇ? ಬಿಲ್ ಕೇಳುತ್ತಾರೆ, ಲೆಕ್ಕ ಕೇಳುತ್ತಾರೆನ್ನುತ್ತಾರೆ. ಕೇಂದ್ರ ಸರ್ಕಾರ ಅವರಿಗೆ ಹಣವನ್ನು ಪುಕ್ಕಟೆ ಕೊಡಬೇಕಾಗುತ್ತೇನು? ಸರಿಯಾಗಿ account ಇಟ್ಟು ಮಾಡಬೇಕು. ಈ ಬಾರಿ ಕನಿಷ್ಠ 5 ಸಾವಿರ ಕೋಟಿ ರೂಪಾಯಿಗಳನ್ನು ಬರುವ 8–9 ತಿಂಗಳಲ್ಲಿ ನಾವು ಖರ್ಚು ಮಾಡುತ್ತೇವೆ. ಮುಂದಿನ ಮಳೆಗಾಲದವರೆಗೆ ಕೊರತೆ ಇದೆ, ಬಿಡುವುದಿಲ್ಲ. ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ. NREGA ಹಣವನ್ನು ಸರಿಯಾಗಿ spend ಮಾಡಿ, Utilization Certificate ಅನ್ನು ಕಳುಹಿಸಿಕೊಡಿ, ಉಪಯೋಗ ಆಗುವಂತೆ ಮಾಡಿಕೊಳ್ಳೋಣ. ಈ ರೀತಿ ಒಂದು ಸ್ಪಷ್ಟವಾದ, ನಿರ್ದಿಷ್ಟವಾದಂತಹ ಚಿಂತನೆಯೊಂದಿಗೆ ಸರ್ಕಾರ ಕೆಲಸ ಮಾಡಬೇಕಾಗಿದೆ. ಆಗ ಮಾತ್ರ

ನಾವೇನಾದರೂ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಗ ರೈತ ನಮ್ಮನ್ನು ನಂಬುತ್ತಾನೆ. ಪಕ್ಕದ ಮಹಾರಾಷ್ಟ್ರದಿಂದಾಗಲಿ, ತಮಿಳುನಾಡಿನಿಂದಾಗಲಿ, ಆಂಧ್ರದಿಂದಾಗಲಿ ಮೇವು ತರುವ ಪರಿಸ್ಥಿತಿಯಲ್ಲಿ ನಾವಿಲ್ಲ, ಮೇವಿಗೋಸ್ಕರ ಪಂಜಾಬ್ ಹರಿಯಾಣಕ್ಕೆ ಹೋಗಬೇಕು. ನೀವು Vice chancellor ಅನ್ನು ಕರೆದು ಅವನು ಬದುಕಿದ್ದಾನೋ, ಸತ್ತಿದ್ದಾನೋ ಎಂದು ಕೇಳಿ. ಬೇಕಾದಷ್ಟು ಭೂಮಿ ಇದೆ. Fodder ಅನ್ನು ಬೇಕಾದಷ್ಟು ಬೆಳೆಯಬಹುದಿತ್ತು. ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಗೋಮಾಳ, ಸರ್ಕಾರಕ್ಕೆ ಸೇರಿದಂತಹ ಭೂಮಿಗಳಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟಂಥ, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂಥ ಕಡೆ ಖಾಲಿ ಇರುವ ಸಾವಿರಾರು ಎಕರೆ ಭೂಮಿ ಇದೆ, ಅಲ್ಲಿ ಮೇವು ಬೆಳೆಯುವುದಕ್ಕೆ ಬೇಕಾದಂತಹ ಪ್ಲಾನ್‌ಗಳನ್ನು ಮಾಡಬೇಕಾಗಿತ್ತು. ಏನೂ ಮಾಡದೇ ಕೈಕಟ್ಟಿ ಕುಳಿತರೆ ಮುಂದಿನ ಮಳೆಗಾಲದವರೆಗೆ ನಮ್ಮ ಪರಿಸ್ಥಿತಿ ಏನಾಗಬಹುದು? ರೈತ ಯಾರನ್ನು ನಂಬಿ ಬದುಕಬೇಕು? ಇಂಥ ಕಷ್ಟಕಾಲದಲ್ಲಿ ನಾವು ಸ್ಪಂದಿಸದೇ ಇದ್ದರೆ ಸರ್ಕಾರ ಇದ್ದರೆಷ್ಟು ಇಲ್ಲದಿದ್ದರೆಷ್ಟು ಎಂದು ಯಾರಾದರೂ ಕೇಳುತ್ತಾರೆ. ಈ ದೃಷ್ಟಿಯಿಂದ ದಯಮಾಡಿ ಯೋಚನೆ ಮಾಡಿ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತೇನೆ. ನೀವು ಜಿಲ್ಲಾಧಿಕಾರಿ, ತಹಶೀಲ್ದಾರವರಿಗೆ direction ಕೊಡಿ. ಪಂಪ್‌ಸೆಟ್ ಇರುವಂಥ ರೈತನನ್ನು ಆಯಾ ತಾಲ್ಲೂಕಿನಲ್ಲಿ ಗುರುತು ಮಾಡಿ. ಅದರ ಪಟ್ಟಿ ಇದೆ. ಅವನಿಗೆ ವಿನಂತಿ ಮಾಡಿ, ನೋಡಪ್ಪ, ನಿನ್ನ ಆದ್ಯತೆ ಈ ರೀತಿ ಇರಬೇಕು, ಒಂದು ಎಕರೆಯಲ್ಲಿ ನೀನು ಮೇವು ಬೆಳೆಯಬೇಕು, ಬೀಜ, ಗೊಬ್ಬರ ಕೊಡುತ್ತೇವೆ, ಒಂದು ಟನ್‌ಗೆ ನಾವು ಪಂಜಾಬಿನಿಂದ ತರುವುದಕ್ಕೆ ಎಷ್ಟು ಹಣ ಕೊಡುತ್ತೇವೆಯೋ, ಆ transportation ವೆಚ್ಚ ಕಳೆದು ಅಷ್ಟು ಹಣವನ್ನು ನಾವು ನಿನಗೆ ಕೊಡುತ್ತೇವೆಂದು ಹೇಳಿ. ಅವನು ಬೆಳೆಯಲಿ,stock ಮಾಡಲಿ.Nearest place ಗೆ ಅದನ್ನು ನಾವು transport ಮಾಡುವುದಕ್ಕೆ ಬರುತ್ತದೆ. ನಿಮ್ಮ ಹತ್ತಿರ ದಾಸ್ತಾನು ಮೇವು ಎಲ್ಲಿದೆ? ಎರಡು ವಾರಗಳಿಗೆ ಸಾಕಾಗುವಷ್ಟು ಇದೆಯೇ? ಮೂರು ವಾರಗಳಿಗೆ ಸಾಕಾಗುಷ್ಟು ಇದೆಯೇ? ಈಗಿರುವಂಥ ಒಂದು ಸಾವಿರ tankers ನಲ್ಲಿ ಇತ್ತೀಚೆಗೆ ಕುಡಿಯುವ ನೀರು ಕೊಡುತ್ತಿದ್ದೇವೆಂದು ತೃಪ್ತಿ ಪಟ್ಟುಕೊಳ್ಳಬೇಡಿ. Tanker ಹೋಗುತ್ತಿದೆಯೇ? ಶುದ್ಧವಾದ ಕುಡಿಯುವ ನೀರನ್ನು ತಲುಪಿಸುತ್ತಿದ್ದಾನೆಯೇ? ವಾಸ್ತವಿಕ ಸ್ಥಿತಿಯನ್ನು everyday Revence Department ನವರುD.C. ಗೆ report ಮಾಡಬೇಕು. D.C ಇಲ್ಲಿಂದ Revenue Minister, Chief Minister ಗೆ everyday report

ಮಾಡಬೇಕು. ವಾರಕ್ಕೊಂದು ಸಾರಿ review ಮಾಡಬೇಕು. ನೀವು ಬೆಂಗಳೂರು ಕಡೆಗೆ ತಿರುಗಿ ನೋಡಕೂಡದು, ನಿನ್ನ ತಾಲ್ಲೂಕು ನಿನ್ನ ಜಿಲ್ಲಾ ಕೇಂದ್ರಕ್ಕೆ ನಾವು ಅಲ್ಲಿಗೆ ಬರುತ್ತೇವೆಂದು, ಅಲ್ಲಿ ಕುಳಿತು ಚರ್ಚೆ ಮಾಡುತ್ತೇವೆಂದು ಶಾಸಕರು ಅಧಿಕಾರಿಗಳಿಗೆ ಹೇಳಬೇಕು. ಅವತ್ತು ಭಾನುವಾರ ಇರಬಹುದು, ಹಬ್ಬ ಹರಿದಿನ ಆಚರಣೆ ಮಾಡುವ ಕಾಲ ಇದಲ್ಲ ಎಂದು ಅಧಿಕಾರಿಗಳಿಗೆ ಹೇಳಬೇಕು. ನಾವು ಶಾಸಕರು ಅವನ ತಲೆ ಮೇಲೆ ಕುಳಿತುಕೊಂಡರೆ ಅವನು active ಆಗಿ ಇದ್ದೇ ಇರುತ್ತಾನೆ. ಎಲ್ಲಿ ಹೋಗುತ್ತೀಯಾ ಎಂದು ಕೇಳುವುದಕ್ಕೆ ಬರುತ್ತದೆ. ನಾವು ಸ್ವಲ್ಪ ಬಿಡುವು ಮಾಡಿಕೊಂಡು ಈ ಕಡೆ ಕೆಲಸ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ. ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ನಾನು 2–3 ಸಲಹೆಗಳನ್ನು ಕೊಡುತ್ತೇನೆ. ನಾನು ಈಗಾಗಲೇ ಹೇಳಿದೆ.ರಾಜ್ಯದಲ್ಲಿ ಶೇ.20 ಭಾಗದ ರೈತರು ಮಾತ್ರ ಸಹಕಾರ ಸಂಘಗಳಲ್ಲಿ ಸಾಲ ಪಡೆಯುತ್ತಿದ್ದಾರೆ.ಸುಮಾರು 10% ರೈತರು ಗ್ರಾಮೀಣ ಬ್ಯಾಂಕು, ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆಯುತ್ತಿರಬಹುದು.ಇನ್ನೂ ಶೇ.70 ಭಾಗದ ರೈತರು, ಸಾಲಕ್ಕಾಗಿ ಬ್ಯಾಂಕನ್ನು ನೋಡಿಯೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ, ನಮ್ಮ ರೆವಿನ್ಯೂ ಮಂತ್ರಿಯವರಿಗೆ ಸಲಹೆ ಕೊಡುತ್ತೇನೆ. ಈ 10 ಸಾವಿರ ಕೋಟಿ ರೂಪಾಯಿಗಳಲ್ಲಿ ನಿಮಗೆ ಗೊತ್ತಿರಬಹುದು, ನಾವು ಸುವರ್ಣ ಭೂಮಿ ಎನ್ನುವ ಯೋಜನೆಯನ್ನು ಜಾರಿಗೆ ತಂದೆವು. 10 ಲಕ್ಷ ಸಣ್ಣ, ಅತಿ ಸಣ್ಣ ರೈತರಿಗೆ ಅದರಲ್ಲಿ 3–4 ಲಕ್ಷ SC/ST ಜನಾಂಗದವರಿಗೆ 5 ಸಾವಿರ ರೂಪಾಯಿಗಳಂತೆ ಎರಡು ಕಂತುಗಳಲ್ಲಿ ಹಣ ಕೊಡಿ ಎಂದು ಹೇಳಿದೆವು. 10 ಲಕ್ಷ identify ಆಯಿತು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ account ತೆರೆದೆವು. ಅವನು ರೆಡಿ ಇದ್ದ. 5 ಸಾವಿರ ರೂಪಾಯಿಗಳಂತೆ 7 ಲಕ್ಷ ಜನರಿಗೆ ಕೊಟ್ಟೆವು. ಇನ್ನು 3 ಲಕ್ಷ ಜನರಿಗೆ ಕೊಡಲೇ ಇಲ್ಲ. ಎರಡನೇ ಕಂತು ಕೊಡುವುದನ್ನು ಮರೆತೇಬಿಟ್ಟೆವು. ನಾನು ಇವತ್ತು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ದಯಮಾಡಿ ಇಂಥ ಸಂಕಷ್ಟದ ಸಂದರ್ಭದಲ್ಲಿ ನಾನು ಹೇಳಿದಂತೆ ಸುಮಾರು 30 ಲಕ್ಷ ರೈತರ್ಯಾರೂ ಎಲ್ಲಿಯೂ ಸಾಲ ತೆಗೆದುಕೊಳ್ಳುವುದಲ್ಲಿ. ಅಂಥವರು ಶೇ.70 ಭಾಗ ಇದ್ದಾರೆ. ಅಂಥ 30 ಲಕ್ಷ ರೈತ ಕುಟುಂಬವನ್ನು ನೀವು identify ಮಾಡಿ. ಸುವರ್ಣಭೂಮಿ ಯೋಜನೆಯಲ್ಲಿ ಈಗಾಗಲೇ 15 ಲಕ್ಷ ಅರ್ಜಿಗಳು ಬಂದಿದ್ದವು. ನಾವು 10 ಲಕ್ಷ ಜನರಿಂದ bank account ತೆರೆಸಿದ್ದೇವೆ. ಈ ರಾಷ್ಟ್ರೀಕೃತ ಬ್ಯಾಂಕಿನಿಂದ, ಸಹಕಾರ ಬ್ಯಾಂಕುಗಳಿಂದ ಸಾಲ ಪಡೆಯದೇ ಇರುವಂತಹ ಯಾವ

ರೈತನಿದ್ದಾನೆ ಅವನನ್ನುVery easily we can identify. ಅಂಥ 30 ಲಕ್ಷ ಕುಟುಂಬಗಳನ್ನು identify ಮಾಡಿ. ಪ್ರತಿ ರೈತನಿಗೆ, ಅವನ ಕುಟುಂಬಕ್ಕೆ, ಅವನ bank account ಗೆ 5 ಸಾವಿರ ರೂಪಾಯಿ ಕೊಡಿ. ಅವನ bank account ಗೆ transfer ಮಾಡಿ. ಇನ್ನು 4–5 ತಿಂಗಳು ಅವನಿಗೆ ಬಿತ್ತನೆ ಬೀಜಕ್ಕೆ fodder ತರುವಂಥದ್ದು, ಮಕ್ಕಳ ಆರೋಗ್ಯ ಸರಿಪಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಇಂಥ ಸಣ್ಣಪುಟ್ಟ ಖರ್ಚುವೆಚ್ಚಗಳನ್ನು ಮಾಡುತ್ತಾನೆ. ನೀವು ಖರ್ಚು ಮಾಡುವುದು 30 ಲಕ್ಷ ಜನರಿಗೆ. 30 ಲಕ್ಷ ಕುಟುಂಬದವರಿಗೆ ಖರ್ಚು ಮಾಡುವುದು ಕೇವಲ 1,500 ಕೋಟಿ ರೂಪಾಯಿಗಳು. ನಾನು 10 ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಿದ್ದೆ. ಆದರೆ, ಸರ್ಕಾರಕ್ಕೆ ತನ್ನದೇ ಆದಂತಹ ಜವಾಬ್ದಾರಿ ಇರುತ್ತದೆ. ಹೇಳಬೇಕಾದರೆ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಅದಕ್ಕೋಸ್ಕರ 5 ಸಾವಿರ ರೂಪಾಯಿಗಳನ್ನು ಕೊಟ್ಟು ಅವನು 6 ತಿಂಗಳು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. 30 ಲಕ್ಷ ಕುಟುಂಬಕ್ಕೆ 5–5 ಸಾವಿರ ರೂಪಾಯಿಗಳನ್ನು ಕೊಡಲು ಸೂಚನೆ ಕೊಟ್ಟು ಇನ್ನೊಂದು ವಾರದಲ್ಲಿ ಆ ರೈತರನ್ನು identifyಮಾಡಿ. ಈ ಸದನ ಮುಗಿಯುವುದರೊಳಗೆ ನಾವು ಹಣವನ್ನು transfer ಮಾಡಲು ಶುರು ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೊಡಬೇಕು. ಎರಡನೆಯದಾಗಿ, ಸಿದ್ದರಾಮಯ್ಯನವರೆ, ಸಹಕಾರ ಸಂಘಗಳಿಂದ 2300 ಕೋಟಿ ರೂಪಾಯಿಗಳನ್ನು so far ಸಾಲ ಪಡೆದಿದ್ದಾನೆ. ಆ 2,300 ಕೋಟಿ ರೂಪಾಯಿಗಳ ಬೆಳೆ ಸಾಲವನ್ನು ಅದು ಸಣ್ಣ, ಅತಿ ಸಣ್ಣ ರೈತ ಯಾರೇ ಇರಲಿ, ಅವನು ತೆಗೆದುಕೊಂಡಿದ್ದಾನೆ. ಅದನ್ನು ಅವನು ಕೃಷಿಗೆ ಉಪಯೋಗ ಮಾಡಿದ್ದಾನೆ. ದಯಮಾಡಿ, ರೂ.2300 ಕೋಟಿ ಪೂರ್ತಿ ಹಣವನ್ನು ಮನ್ನಾ ಮಾಡಬೇಕು. ಅದು ವಿರೋಧ ಪಕ್ಷಕ್ಕಲ್ಲ, ಈಕಡೆ ಇರುವ ನಮಗೂ ಅನುಕೂಲವಾಗಬೇಕು. 2300 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿ. ಜಯಚಂದ್ರರವರೆ ಏಕೆ ಮನ್ನಾ ಮಾಡಬೇಕೆಂದರೆ, ಈಗಾಗಲೇ ಈ ರೈತ ಬೆಳೆ ಸಾಲ ಪಡೆದು ಅದರ ಉಪಯೋಗ ಮಾಡಿಕೊಂಡಿದ್ದಾನೆ. ಮತ್ತೆ ಆ ಹಣವನ್ನು ವಾಪಸ್ ಕೊಡುವ ಸ್ಥಿತಿಯಲ್ಲಿಲ್ಲ. ಕಷ್ಟ ಏನೆಂದು ರೈತನಾದವನಿಗೆ ಗೊತ್ತಿದೆ. ಬೆಳೆ ಹಾಳಾಗಿದೆ. ಅದನ್ನು ಮಾಡಿ ಮತ್ತೇನೋ ಉದ್ಧಾರವಾಗುತ್ತಾನೆ ಎನ್ನುವಪರಿಸ್ಥಿತಿಯಲ್ಲಿಲ್ಲ. ಅದಕ್ಕೆ ಈ ಹಣವನ್ನು ಸಂಪೂರ್ಣವಾಗಿ ಮನ್ನಾ ಮಾಡಿ. ಹಾಗಾದರೆ ಮುಂದೇನು? ಏಕೆಂದರೆ, ನಾವು ಕಳೆದ ವರ್ಷ 5,500 ರಿಂದ 6,000 ಕೋಟಿ ರೂಪಾಯಿಗಳವರೆಗೂ ಸಾಲ ಕೊಟ್ಟಿದ್ದೆವು. Last time

ನಾವು 5852 ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೆವು. ನಮ್ಮ ರೈತ ಹೇಗಿದ್ದಾನೆ? 94% recovery ಆಗಿದೆ. ನಾವು 1% ಸಾಲ ಕೊಟ್ಟಿದ್ದೇವು, ಈಗ 0% ಗೆ ಸಾಲ ಕೊಡುವುದಕ್ಕೆ ಹೊರಟಿದ್ದೇವೆ. ಆ 5852 ಕೋಟಿ ರೂಪಾಯಿಗಳಲ್ಲಿ 94% repayment ಆಗಿದೆ. ನಮ್ಮ ರೈತ ಯಾವತ್ತೂ ಕೈಚಾಚಿ ಬೇಡುವವನ್ನಲ್ಲ. ಬೇಡುವಂಥ ಪರಿಸ್ಥಿತಿ ಬಂದಾಗ ಕೈಚಾಚಿ ಕೊಡಿ. ಈ ಸಾರಿ ನಾವು ಧಾರಾಳತನ ತೋರಿಸೋಣ. ನಾನು ಅಲ್ಲಿ ಕುಳಿತಿದ್ದರೆ ಈ ಕೆಲಸ ಮಾಡುತ್ತಿದ್ದೆ. ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತೇನೆ. ಆದ್ದರಿಂದ, 2300 ರೂಪಾಯಿಗಳನ್ನು one time settlement ಮಾಡಿ. ಮತ್ತೆ ನಾವು ಹಿಂದೆ ಒಂದು ಸಾವಿರ ಕೋಟಿಗೂ ಹೆಚ್ಚು ಹಣವನ್ನು ಕೆರೆ ಹೂಳು ತೆಗೆಯುವುದಕ್ಕೆ ಕೊಟ್ಟಿದ್ದೆವು. ನಮ್ಮ ಶಾಸಕರು ಅವರು ಯಾವುದೇ ಪಕ್ಷದಲ್ಲಿರಲಿ, ಅವರ ಕ್ಷೇತ್ರಗಳಕೆರೆ ಹೂಳು ತೆಗೆಯಲಿ, ಜಲ ನಿಲ್ಲಲಿ, ಅಂತರ್ಜಲ ಬರಲಿ. ನೀವು ನೋಡಿದ್ದೀರಿ, ಅಲ್ಲಿ ಮಳೆ ಇಲ್ಲ, ಬೆಳೆ ಇಲ್ಲ. ಕೆರೆ ಬತ್ತಿ ಹೋಗಿದೆ. ಕಳೆದ ಸಾರಿ ಯಾವ ಕೆರೆಯ ಕಾಮಗಾರಿಯನ್ನೂ ತೆಗೆದುಕೊಂಡಿರಲಿಲ್ಲ, ಬೇರೆ ಕೆರೆಗಳಿಗೆ 2 ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಿ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಆ ಕೆರೆಗಳನ್ನು identify ಮಾಡಿ. ಅದಕ್ಕೊಬ್ಬ ಅಧಿಕಾರಿಯವರನ್ನು ನೇಮಿಸಿ. Machineಗಳ ಮೂಲಕ ಹೂಳು ತೆಗೆಸಿ, ಇದು labour ನಿಂದಾಗುವುದಿಲ್ಲ. ನಮ್ಮ ಉದ್ಯೋಗ ಖಾತರಿ ಯೋಜನೆ ಏನಿದೆ ಅದರ ಹಣ ಖರ್ಚು ಮಾಡಿಸಿ. ಈಗ ಕೆರೆಯಲ್ಲಿ ಮಧ್ಯದಲ್ಲಿ ಸ್ವಲ್ಪ ನೀರಿದೆ. ಸುತ್ತ ಆ boundary ಏನಿದೆ ಅಲ್ಲಿ ನಾವು ಮಣ್ಣು ತೆಗೆಯದೇ 25–50 ವರ್ಷಗಳಾಯಿತು. ಹೂಳು ತೆಗೆದರೆ ನೀರು ನಿಲ್ಲುವಂಥ ಮಟ್ಟ ಜಾಸ್ತಿಯಾಗುತ್ತದೆ, ಅಂತರ್ಜಲ ಕುಸಿಯುವುದು ತಪ್ಪಿ ಹೋಗುತ್ತದೆ. ಅದಕ್ಕೋಸ್ಕರ 2 ಸಾವಿರ ಕೋಟಿ ರೂಪಾಯಿಗಳನ್ನು ದಯಮಾಡಿ ಈ ಹೂಳು ತೆಗೆಯುವುದಕ್ಕೋಸ್ಕರ ತೆಗೆದಿಡಿ. ಮಾನ್ಯ ಮುಖ್ಯಮಂತ್ರಿಗಳು ಆಗ ಬಂದಿರಲಿಲ್ಲ. ಈಗ ಅವರು ಬಂದಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೇ, ನಾನು ಆಗಲೇ ಹೇಳುತ್ತಿದ್ದೆ. ನಮ್ಮ ರಾಜ್ಯದಲ್ಲಿ ರೈತರು ಸಂಕಟದಲ್ಲಿ ಸಿಕ್ಕಿದ್ದಾರೆ, 100 ಕ್ಕೆ 30 ಭಾಗ ರೈತರು ಮಾತ್ರ ರಾಷ್ಟ್ರೀಕೃತ ಮತ್ತು ಸಹಕಾರ ಸಂಘಗಳಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಇನ್ನು ಶೇಕಡ 70 ಭಾಗ ರೈತರು ಸಾಲ ಪಡೆದಿಲ್ಲ. ಆ ತರಹದ ಸುಮಾರು 35–45 ಲಕ್ಷಕುಟುಂಬಗಳಿವೆ. ಅದರಲ್ಲಿ ಸುಮಾರು 30 ಲಕ್ಷ ಕುಟುಂಬಕ್ಕೆ ಫ್ರೀಯಾಗಿ ಐದೈದು ಸಾವಿರ ರೂಪಾಯಿ ಕೊಟ್ಟು ಅವನು ಐದಾರು ತಿಂಗಳು ಜೀವನ ನಡೆಸುವುದಕ್ಕೆ ಅವನು ಉಳುಮೆ ಮಾಡಿ ನೆಮ್ಮದಿಯಿಂದ

ಬದುಕುವುದಕ್ಕೆ ಅವಕಾಶ ಮಾಡಿ ಕೊಡೋಣ. ಒಂದು ಲಕ್ಷ ಕೋಟಿಯಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಈ ಖರ್ಚಿಗಳಿಗಾಗಿ ತೆಗೆದು ಇಡೋಣ. ನಮ್ಮ ಬಜೆಟ್ ತೊಂಬತ್ತು ಸಾವಿರ ಕೋಟಿಗಳೆಂದು ತಿಳಿದುಕೊಳ್ಳೋಣ. ಜನ ಕೊಟ್ಟಂತಹ ತೆರಿಗೆ ಹಣ. ನಾವು ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಾಡಿದ್ದೇವೆ. ಮುಖ್ಯ ಮಂತ್ರಿಗಳು ಮನಸ್ಸು ಮಾಡಿದರೆ ಇದೇನು ದೊಡ್ಡ ವಿಷಯವಲ್ಲ. ಹತ್ತು ಸಾವಿರ ಕೋಟಿ ನೀವು ತೆಗೆದಿಡಿ. ಇನ್ನು ಎರಡು ಸಾವಿರ ಮುನ್ನೂರು ಕೋಟಿ ಏನು ಸಹಕಾರ ಸಂಘದಿಂದ ಸಾಲ ಪಡೆದಿದ್ದಾರೆ ಆ ಸಾಲವನ್ನು ಮನ್ನಾ ಮಾಡಿಸಿ. ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡಿಸಿ ಎಂದು ನಾನು ಆಮೇಲೆ ಸಿದ್ದರಾಮಣ್ಣನ ಹತ್ತಿರ ಬರುತ್ತೇನೆ. ದೆಹಲಿಗೆ ಹೋಗೋಣ, ಪ್ರಧಾನಿಯವರನ್ನು ಭೇಟಿ ಮಾಡೋಣ. ನನ್ನ ಸರ್ಕಾರ ಇಂಥ ಸಂಕಷ್ಟದ ಸಂದರ್ಭದಲ್ಲಿ ನಿಮಗೆ ಕಾಯದೇ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ, ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದಿರುವ ಸಾಲವನ್ನು one time ಮನ್ನಾ ಮಾಡಿ. ಇದುವರೆವಿಗೂ ಮಾಡಿಲ್ಲ, ನಮ್ಮ ರೈತ ಬದುಕಿಕೊಳ್ಳುತ್ತಾನೆ. ಹಿಂದೆ ನಾವೇ ಸಾಲ ಮನ್ನಾ ಮಾಡಿದ್ದೆವು, ಆ ಸವಲತ್ತು ಕೇಂದ್ರದಿಂದ ನಾವು ಪಡೆದಿಲ್ಲವೆಂದು ಪ್ರಧಾನಿಯವರ ಮನವೊಲಿಸುವುದಕ್ಕೆ ಎಲ್ಲಾ ಒಟ್ಟಾಗಿ ಸೇರಿ ಪ್ರಯತ್ನ ಮಾಡೋಣ. ಏನಾಗುತ್ತದೆ ನೋಡೋಣ. ನಾನು ರಾಷ್ಟ್ರೀಕೃತ ಬ್ಯಾಂಕ್‌ಗಳ ಬಗ್ಗೆ ಮಾತನಾಡುತ್ತಿಲ್ಲ. ಆ ಬಗ್ಗೆ ಒತ್ತಾಯ ತರೋಣ. ಆದರೆ ನಮ್ಮ ರಾಜ್ಯದ ಸಹಕಾರಿ ಸಂಘದಲ್ಲಿರುವಂಥ ಎರಡು ಸಾವಿರ ಮುನ್ನೂರು ಕೋಟಿ ರೂಪಾಯಿ ಸಾಲ ಮನ್ನಾ ಮಾಡೋಣ. ಕೆರೆ ಹೂಳು ತೆಗೆಯುವುದಕ್ಕೋಸ್ಕರ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಆ ಕೆರೆಗಳನ್ನು ಗುರುತಿಸಿ ಅದಕ್ಕೆ ಒಬ್ಬ ನೋಡಲ್ ಆಫೀಸರ್‌ನ್ನು ನೇಮಿಸಿ ಅದರ ಜವಾಬ್ದಾರಿಯನ್ನು ಎನ್‌ಜಿಓ ಗೆ ಕೊಟ್ಟು ಮಿಷನರಿಗಳ ಮೂಲಕ ಆ ಹೂಳು ತೆಗೆಯುವಂಥ ಕೆಲಸದಲ್ಲಿ ನಾವು ನಿರತರಾಗೋಣ. As one today ಭಾಗ್ಯಲಕ್ಷ್ಮಿ ಯೋಜನೆಯ ಬಾಕಿಯೇ ಎಂಟು ಲಕ್ಷ ರೂಪಾಯಿ ಇದೆ. ದಯಮಾಡಿ ನಾನು ವಿನಂತಿಸುತ್ತೇನೆ, ಬಾಂಡ್‌ನಲ್ಲಿ ಒಂದು ಲಕ್ಷ ರೂಪಾಯಿ ಆ ಹೆಣ್ಣುಮಗುವಿಗೆ ಬರಬೇಕೆನ್ನುವುದಿದ್ದರೆ ಆ ಮಗು ಹುಟ್ಟಿದ ದಿನಾಂಕದಂದೆ ಎಲ್‌ಐಸಿ ಯಲ್ಲಿ ಅಷ್ಟು ಹಣ ಜಮಾ ಮಾಡಿರಬೇಕು. ನೀವು ಈ ವರ್ಷದಲ್ಲಿ 350 ದಿಂದ 400 ಕೋಟಿ ಮಾತ್ರ ಪ್ರಾವಿಜನ್ ಮಾಡಿಕೊಂಡಿದ್ದೀರಿ. ಹಳೆಯ ಬಾಕಿಯೇ ಎಂಟು ನೂರು ಕೋಟಿ ಬೇಕು. ಎರಡನೆಯದು ಈ ವರ್ಷ ಹುಟ್ಟಿದವರೆಗೂ ಆ ಸವಲತ್ತುಗಳು ಕೊಡಬೇಕು. ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ, ಹತ್ತು

ಸಾವಿರ ಕೋಟಿಯಲ್ಲಿ ಒಂದು ಸಾವಿರ ಕೋಟಿಯನ್ನು ಈ ಬಾಕಿ ತೀರಿಸಲಿಕ್ಕಾಗಿ ಉಪಯೋಗ ಮಾಡಿಕೊಳ್ಳಿ. ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಬಾಕಿ ಇಟ್ಟುಕೊಂಡಿದ್ದೀರಿ. ಸರಕಾರಕ್ಕೆ ಒಳ್ಳೆಯ ಹೆಸರು ಬರಬೇಕು. ಎನ್ನುವುದಿದ್ದರೆ ಎರಡು– ಮೂರು ತಿಂಗಳಿಗೊಮ್ಮೆ ಕೊಡುವುದಲ್ಲ. ಅಯಾ ತಿಂಗಳಲ್ಲಿ ಅವರವರ ಮನೆ ಬಾಗಿಲಿಗೆ ತಲುಪಬೇಕು ಆ ಸೂಸೆಯಂದಿರು ಎರಡು ಹೊತ್ತು ಊಟ ಹಾಕಬೇಕು, ನಗುನಗುತಾ ಅಜ್ಜ ಅಜ್ಜಿ ಬದುಕಬೇಕು, ಅಂಗವಿಕಲರು ನೆಮ್ಮದಿಯಿಂದ ಬದುಕಬೇಕು, ವಿಧವೆ ಎರಡು ಹೊತ್ತು ಊಟ ಮಾಡಬೇಕೆಂದಿದ್ದರೆ ನಮಗೆ ಖುಷಿ ಬಂದಾಗ ಕೊಡುವುದಲ್ಲ ದಯಮಾಡಿ ಆ ನಾನೂರು ಕೋಟಿ ರೂಪಾಯಿ ಬಾಕಿ ಏನಿದೆ ಅದೆಲ್ಲಾ ಪೂರ್ತಿ ಕೊಡಿ. ಕುಡಿಯುವ ನೀರು ಮತ್ತು ಮೇವಿಗಾಗಿ ಸಾವಿರ ಕೋಟಿ ಮೀಸಲಿಡಿ. ಇನ್ನು ವಿದ್ಯುತ್ ಅಭಾವದ ಬಗ್ಗೆ ಹೇಳುವುದಾದರೆ, ಹತ್ತು ಸಾವಿರ ಕೋಟಿಯಲ್ಲಿ ಹೆಚ್ಚುವರಿಯಾಗಿ ಏಳುನೂರರಿಂದ ಎಂಟು ನೂರು ಮೆ.ವ್ಯಾ.ವಿದ್ಯುತ್ ಖರೀದಿಸಬೇಕೆಂದಿದ್ದೀರಿ, ಇದಕ್ಕೆ ಹತ್ತು ಸಾವಿರ ಕೋಟಿಯಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ಒಂದು ನೆಪದಲ್ಲಿ ಪ್ರಾವಿಜನ್ ಮಾಡಿಕೊಳ್ಳಿ. ಹತ್ತು ಸಾವಿರ ಕೋಟಿಯಲ್ಲಿ ಇದನ್ನೆಲ್ಲಾ ಪ್ರಾವಿಜನ್ ಮಾಡಿಕೊಂಡು ರೈತರನ್ನು ಉಳಿಸುವಂಥ ಕೆಲಸ ನೀವು ಮಾಡಬೇಕು ಎನ್ನುವುದು ನನ್ನ ಒತ್ತಾಯವಿದೆ. ಸರ್ಕಾರ ಬೇಕಾದಷ್ಟು ಒಳ್ಳೆಯ ಕೆಲಸ ಮಾಡಿದೆ. ಇವತ್ತು ಈ ದೇಶದ ಇತಿಹಾಸದಲ್ಲಿ ಮೊದಲು ಬಾರಿಗೆ ನಾವು ಹಾಲಿಗೆ ರೈತರಿಗೆ ಎರಡು ರೂಪಾಯಿ ಪ್ರೋತ್ಸಾಹಧನ ಕೊಟ್ಟಿದ್ದೇವೆ. ಬಹುಶಃ ನಿಮಗೆ ಆಶ್ಚರ್ಯವಾಗಬಹುದು. ಹೈನುಗಾರಿಕೆಗೆ ಪ್ರೋತ್ಸಾಹ ಮಾಡುವ ಉದ್ದೇಶದಿಂದ ಪ್ರತಿ ಲೀಟರ್ ಹಾಲಿಗೆ ಎರಡು ರೂಪಾಯಿ ಪ್ರೋತ್ಸಾಹಧನ ನೀಡುವಂತಹ ಕಾರ್ಯಕ್ರಮವನ್ನು ಮುಂದುವರಿಸಲಾಗಿದೆ. ಇದುವರೆವಿಗೂ 475.53 ಕೋಟಿ ಲೀಟರ್‌ಗಳ ಹಾಲು ಸರಬರಾಜು ಮಾಡಿದ ಏಳು ಲಕ್ಷ ಸದಸ್ಯರಿಗೆ 951 ಕೋಟಿ 6 ಲಕ್ಷ ರೂಪಾಯಿಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಪ್ರೋತ್ಸಾಹಧನವಾಗಿ ಕೊಟ್ಟಿದ್ದೇವೆ. ಇದೊಂದು history ಈ ದೇಶದ ಇತಿಹಾಸದಲ್ಲಿ. ಇದರಿಂದ ಹಾಲು ಉತ್ಪಾದನೆ ಜಾಸ್ತಿಯಾಯಿತು, ಇದರಿಂದ ದೊಡ್ಡ ಸಾಧನೆಯಾಯಿತು, ರೈತರು ಬದುಕಿಕೊಂಡರು ಆ ಭಾಗದಲ್ಲಿ ಇನ್ನೂ ಇದರ ರುಚಿ ಗೊತ್ತಿಲ್ಲ. ಕೋಲಾರದ ಈ ಭಾಗದಲ್ಲಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆ ಭಾಗದಲ್ಲಿ ಬೀದರ್, ಗುಲ್ಬರ್ಗಾ, ರಾಯಚೂರು ಈ ಕಡೆಗಳಲ್ಲಿಯೂ ಆಕಳು ಸಾಕಿ ಅವರು ಹಾಲು ಕರೆಯುವ ಕಾರ್ಯಕ್ರಮ ಮಾಡಿದರೆ, ಆ ಭಾಗದಲ್ಲಿ ಈ ಸವಲತ್ತು ಸಿಗುತ್ತದೆ. ಬಹಳ ದೊಡ್ಡ ಸಾಧನೆ

ಇದಾಗುತ್ತದೆ. ದಯಮಾಡಿ ಈ ಯೋಜನೆಯ ಪೂರ್ಣ ಉಪಯೋಗ ಮಾಡಿಕೊಳ್ಳುವಂಥ ಕೆಲಸ ಮಾಡಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಸ್ವಾಮಿ, ಒಂದನ್ನು ಸರ್ಕಾರ ಗಮನಿಸಬೇಕು. ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷ, ವಿಧವಾ ವೇತನ, ಅಂಗವಿಕಲರ ವೇತನ, ಈ ನಾಲ್ಕು ಯೋಜನೆಗಳಿಗೆ 2008–09 ರಲ್ಲಿ 42 ಲಕ್ಷ ಫಲಾನುಭವಿಗಳಿದ್ದರು.If I am correct. ಅದರಲ್ಲಿ 9 ಲಕ್ಷ ಬೋಗಸ್ ಕಾರ್ಡ್ ಇದ್ದವು ಎಂದು ತೆಗೆದು ಹಾಕಿದೆವು. ಅದರಲ್ಲಿ ಏನೂ ತಪ್ಪಿಲ್ಲ ಒಳ್ಳೆಯದು. ಈಗಾಗಲೇ 32 ರಿಂದ 33 ಲಕ್ಷದವರೆವಿಗೂ ಕೊಡುತ್ತಿದ್ದೇವೆ. ಎರಡೂವರೆ ಲಕ್ಷ ಫಲಾನುಭವಿಗಳನ್ನು ವೆರಿಫೈ ಮಾಡಿದಾಗ ಅದರಲ್ಲಿ ರೆಸ್ಟೋರ್ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ. ಇನ್ನು ಸುಮಾರು ಒಂದುಕಾಲು ಲಕ್ಷ ಪೆಂಡಿಂಗ್ ಇದೆ. ಇನ್ನೊಂದು ವಾರದಲ್ಲಿ ಸರ್ವೇ ಮಾಡಿಸಿ ಅವರು ಫಿಟ್ ಇದ್ದಾರೆ ಎಂದರೆ ತಕ್ಷಣ ಸ್ಥಳದಲ್ಲಿ ಮಂಜೂರಾತಿ ಮಾಡಿ ಆ ನಾಲ್ಕೈದು ತಿಂಗಳ ಬಾಕಿ ಏನಿದೆ ಅದನ್ನು ಪೂರ್ಣವಾಗಿ ಪಾವತಿ ಮಾಡಿ. ಅಲ್ಲಿಯವರೆಗೆ ಈ ರಾಜ್ಯದಲ್ಲಿ ಯಾವುದೇ ಹೊಸ ಕಟ್ಟಡ ಕಟ್ಟುವುದು ಬೇಡ. ಈಗ ಸಧ್ಯಕ್ಕೆ ಯಾವುದೇ ಹೊಸ ಯೋಜನೆ ಬೇಡ. ಇರುವ on-going works ಅನ್ನು ಮಾಡಿ. ಬರಗಾಲದಲ್ಲಿ ತುತ್ತಾದಂತವನಿಗೆ ತಿಂಗಳಿಗೆ ನಾನೂರು ರೂಪಾಯಿ ಬಾಕಿ ಕೊಡಬೇಕು. ಪ್ರತಿ ತಿಂಗಳು ಮುಂದಿನ ಮಳೆಗಾಲದ ವರೆವಿಗೂ ತಲುಪುವಂಥ ವ್ಯವಸ್ಥೆ ಮಾಡಬೇಕು. ಇದನ್ನು war footing ನಲ್ಲಿ ನೀವು ತೆಗೆದುಕೊಳ್ಳಬೇಕು. ನಾನು ಎಲ್ಲಾ ನಿಮಗೆ ಹೇಳಿದೆ. ಅಧಿಕಾರಿಗಳ ಆಲಸ್ಯದಿಂದ ಸುವರ್ಣ ಭೂಮಿ ಯೋಜನೆಯಲ್ಲಿ ಮೊದಲನೇ ಕಂತು ಐದು ಸಾವಿರ ಕೊಟ್ಟೆವು. ಮೊದಲನೆ ಕಂತು ಹತ್ತು ಲಕ್ಷಕ್ಕೆ ಬದಲು ಏಳು ಲಕ್ಷ ಕೊಟ್ಟೆವು. ಎರಡನೆ ಕಂತು ಕೊಡಲೇ ಇಲ್ಲ. ಆ ದುಡ್ಡು ಇದೆ. ಈಗ ಅದನ್ನು ಇದಕ್ಕೆ ಉಪಯೋಗ ಮಾಡಿಕೊಳ್ಳಿ. ಸನ್ಮಾನ್ಯ ಮುಖ್ಯಮಂತ್ರಿಗಳೇ ಮೂವತ್ತು ಲಕ್ಷ ಕುಟುಂಬಗಳಿಗೆ ಐದು ಸಾವಿರ ರೂಪಾಯಿಗಳಂತೆ ಕೊಡಿ. ಅವನು ನೆಮ್ಮದಿಯಿಂದ ಊಟ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳಿದೆ, ಆ ಹಣವನ್ನು ಇದಕ್ಕೆ ಉಪಯೋಗ ಮಾಡಬಹುದು. ಹೊಸದಾಗಿ ನೀವೇನು ಮಾಡಬೇಕಾಗಿಲ್ಲ.ಹತ್ತು ಸಾವಿರ ಕೋಟಿಯಲ್ಲಿಯೇ ನೀವು ಇದೆಲ್ಲಾ ಮಾಡಬಹುದು. ಪಿಡಿಎಸ್ ಬಗ್ಗೆ ಹೇಳುವುದಾದರೆ, ಇದೂ ಅಷ್ಟೇ. ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯ-ಮಂತ್ರಿಗಳು ವಿಶೇಷ ಗಮನ ಕೊಟ್ಟು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ. ಮೊದಲು ತಮಗೆ ಗೊತ್ತಿದ್ದ ಹಾಗೆ ಒಂದು ಕೋಟಿ ಅರವತ್ತೆಂಟು ಲಕ್ಷ ಕುಟುಂಬಗಳಿತ್ತು. ಮೂವತ್ತು ಲಕ್ಷ ಕುಟುಂಬ ಸರಿಯಿಲ್ಲವೆಂದು ವಜಾ

ಮಾಡಿದೆವು. ಇನ್ನೂ ಕಾರ್ಡು ಸಿಗದಿರುವಂಥ ಹೊಸದಾಗಿ ಅರ್ಜಿ ಕೊಟ್ಟಂಥ ಮೂವತ್ತು ಲಕ್ಷ ಅರ್ಜಿಗಳಿವೆ. ಇದನ್ನು ಬಗೆಹರಿಸಿ. ಹದಿನೈದು ದಿವಸಗಳಲ್ಲಿ ಯಾರು ನಿಜವಾಗಿ ಅರ್ಹರು ಇದ್ದಾರೆ ಅವರು ಯಾರೂ ಈ ಪಿಡಿಎಸ್ ಸಿಗುವಲ್ಲಿ ವಂಚಿತರಾಗಲಿಲ್ಲ, ಈ ಕಷ್ಟಕಾಲದಲ್ಲಿ ನಮ್ಮ ಮನೆ ಬಾಗಿಲಿಗೆ ಬಂದು ಕಾರ್ಡು ಕೊಟ್ಟರು, ನಮಗೆ ಹೆಚ್ಚುವರಿ ಆಹಾರ ಧಾನ್ಯ ಸಿಗುತ್ತದೆ ಎನ್ನಿಸುವ ರೀತಿಯಲ್ಲಿ,ಮಾಡಿ. ಇಲ್ಲದೇ ಇದ್ದರೆ ಈ ರೀತಿ 25 ಮೂವತ್ತು ಲಕ್ಷ ಜನ ಪಿಡಿಎಸ್ ಸಿಗದೇ ಇರುವವರು, ಭಾಗ್ಯಲಕ್ಷ್ಮಿ ಬಾಂಡ್ ಸಿಗದೇ ಇರುವವರು, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಬರದೇ ಇರುವವರು ಅಲ್ಲಿ ಕುಳಿತು ಶಾಪ ಹಾಕುತ್ತಾರೆ. ಇದು ನಿಮ್ಮ ಮೇಲೆ ಪರಿಣಾಮ ಆಗುತ್ತದೆ. ಆ ಭಾಗ ಈ ಭಾಗ ಎಂದಲ್ಲ. ನೋಡಿ ನಮ್ಮ ಪ್ರತಿನಿಧಿಗಳೇನು ಮಾಡುತ್ತಿದ್ದಾರೆ ಎಂದು ಅವನು ಅನ್ನುತ್ತಾನೆ. ಇದು ಆಡಳಿತ ಪಕ್ಷ ವಿರೋಧ ಪಕ್ಷವೆಂದಲ್ಲ. ನಮ್ಮ ಸ್ಕೀಂ ಏನಿದೆ ಅದು ಟೈಂ ಲಿಮಿಟ್‌ನಲ್ಲಿ ಅವನಿಗೆ ತಲುಪಬೇಕು. ನಾವು ಖುಷಿ ಬಂದಾಗ ದುಡ್ಡು ಕೊಡುವುದಲ್ಲ. ಅವನ ಕಷ್ಟ ಕಾಲದಲ್ಲಿ ಪ್ರತಿ ತಿಂಗಳುಅವನ ಮನೆ ಬಾಗಿಲಿಗೆ ತಲುಪಬೇಕು. ಅದಕ್ಕೆ ಆದ್ಯತೆ ಕೊಡಿ, ಆಮೇಲೆ ಮುಂದಿನ ಸ್ಕೀಂಗಳು. ಇದನ್ನು ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಈಗಾಗಲೇ ಹೇಳಿದ ಹಾಗೆ ಭಾಗ್ಯಲಕ್ಷ್ಮಿ ಯೋಜನೆ ಹದಿಮೂರುವರೆ ಲಕ್ಷ ಬಾಂಡ್ ಕೊಟ್ಟಿದ್ದೇವೆ. ಒಂದೂವರೆ ಲಕ್ಷ ಹಳೆಯದು ಬಾಕಿಯಿದೆ. ಈ ವರ್ಷದ್ದೂ ಕೊಡಬೇಕಾಗುತ್ತದೆ. 800 ಕೋಟಿ ಬೇಕು. ದಯಮಾಡಿ ಇದನ್ನು ಪ್ರಾವಿಜನ್ ಮಾಡದೆ ಇದ್ದರೆ ಆ ಹೆಣ್ಣುಮಗಳಿಗೆ ಹದಿನೆಂಟು ವರ್ಷ ಆದಾಗ ಎಲ್ಲಿ ಸಿಗುತ್ತದೆ ಸ್ವಾಮಿ ಆ ದುಡ್ಡು? ಒಂದು ವರ್ಷ ಲೇಟಾಗಿ ಕಟ್ಟಿದರೆ ಅಷ್ಟು ಬಡ್ಡಿ ಆ ಹೆಣ್ಣು ಮಗಳಿಗೆ ಕಡಿಮೆಯಾಗುತ್ತದೆ. ಎಲ್‌ಐಸಿ ಯವರು ಸ್ವಂತ ಅವರ ಜೇಬಿನಿಂದ ಕೊಡುತ್ತಾರಾ? ನಮ್ಮ ಹತ್ತಿರ ಎಷ್ಟು ಇದೆಯೋ ಅಷ್ಟರಲ್ಲಿ ಚಾಪೆ ಇದ್ದಷ್ಟು ಕಾಲು ಚಾಚೋಣ. ನಮ್ಮ ಪ್ರೋಗ್ರಾಂ ಏನಿದೆ ನಮ್ಮ ಪ್ಲಾನ್ ಏನಿದೆ ಅದಕ್ಕೆ ತಿಂಗಳಿಗೊಂದು ಸಾರಿ ಹಣವನ್ನು ಕೊಡುವಂಥ ಕೆಲಸವಾಗಬೇಕು. ಇನ್ನು ಆಶ್ರಯ ಯೋಜನೆಯ ಬಗ್ಗೆ ಹೇಳುವುದಾದರೆ, ಕೆಲವರು ತಮಾಷೆ ಮಾಡಬಹುದು, ತೊಂದರೆಯಿಲ್ಲ. ಇದೊಂದು ಅಪರೂಪದ ಯೋಜನೆ ಫ್ಲಡ್ ಬಂದಾಗ ಮಾಡಿದೆವು. ಐವತ್ತೆರಡು ಸಾವಿರ ಮನೆಗಳನ್ನು ಕಟ್ಟಬೇಕೆಂದು ಇದ್ದೆವು. ನಲವತ್ತೇಳು ಸಾವಿರ ಮನೆಗಳನ್ನು ಕಟ್ಟಿದೆವು. ಮೂವತ್ತು ಸಾವಿರ ಮನೆಗಳಿಗೆ ಫಲಾನುಭವಿಗಳು ಬಂದಿದ್ದಾರೆ. ಇನ್ನು ಹದಿನೇಳು ಸಾವಿರ ಮನೆಗಳಿಗೆ ಬಂದಿಲ್ಲ. ಏಕೆ ಬಂದಿಲ್ಲ? ಕಳೆದ ಎರಡು ಮೂರು ವರ್ಷಗಳಿಂದ ಫ್ಲಡ್ ಇಲ್ಲ. ಮೊದಲು ಹಳ್ಳಿಗಳಲ್ಲಿ ಇದ್ದರು ಪಕ್ಕದಲ್ಲಿ

ನವ ನಗರ ಎಂದು ಮಾಡಿ ಡ್ರೈನೇಜ್ ಮಾಡಿ ಶೌಚಾಲಯ ವ್ಯವಸ್ಥೆ ಮಾಡಿ ಕುಡಿಯುವುದಕ್ಕೆ ನೀರು ಕೊಟ್ಟು ಎಲ್ಲಾ ಮಾಡಿದ ಮೇಲೂ ಸಹ ಅವರು ಬರುತ್ತಿಲ್ಲ. ನಿಮ್ಮ ರೆವಿನ್ಯೂ ಅಧಿಕಾರಿಗಳಿಗೆ ಎರಡು ತಿಂಗಳು ಟೈಂ ಕೊಡುವುದಕ್ಕೆ ಹೇಳಿ. ಅವರು ಬರುವುದಿಲ್ಲ ಆ ಊರಿನಲ್ಲಿ ಆ ಸುತ್ತಮುತ್ತಲಿನಲ್ಲಿ ಸಾಕಷ್ಟು ಬಡಜನಗಳು ಇದ್ದಾರೆ, ಹದಿನೇಳು ಸಾವಿರ ಮನೆ ಒಂದುಕಾಲು ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿಸಲಾಗಿದೆ ಅವುಗಳನ್ನು ಖಾಲಿ ಏಕೆ ಇಟ್ಟುಕೊಂಡಿದ್ದೀರಿ? ಯಾವ ಪುರುಷಾರ್ಥಕ್ಕೆ? ಯಾರೋ ಧಾನ ಧರ್ಮ ಕೊಟ್ಟು, ರಾಜ್ಯ ಮತ್ತು ಕೇಂದ್ರ ಸರ್ಕಾರ, ಬೇರೆಯವರಿಂದ ಭಿಕ್ಷೆ ತಂದು ಕಟ್ಟಿಸಿರುವಂಥ ಸುಂದರವಾದ ಮನೆಗಳನ್ನು ಒಂದು ವರ್ಷದಿಂದ ಯಾರೂ ಇಲ್ಲದೆ ಖಾಲಿ ಬಿದ್ದಿವೆ ಎಂದರೆ ಹೇಗೆ? ಆ ಮೇಲೆ ಯಾರು ಉಳಿಯುತ್ತಾರೆ? ಯಾರು ಕಸ ಗುಡಿಸುತ್ತಾರೆ? ದಯಮಾಡಿ ಹದಿನೈದು ದಿವಸಗಳಲ್ಲಿ ಈ ಬಗ್ಗೆ ತೀರ್ಮಾನ ಮಾಡಿ ಅವರು ವಾಪಸ್ ಬರುವುದಕ್ಕೆ ಹೇಳಿ, ಅವರು ಬರಲಿಲ್ಲ ಶಿಫ್ಟ್ ಮಾಡಲಿಲ್ಲವೆಂದರೆ ನಿಜವಾದ ಬಡವರು ಯಾರು ಇದ್ದಾರೆ ಅವರಿಗೆ ಉಳಿದಿರುವ ಹದಿನೇಳು ಲಕ್ಷ ಮನೆಗಳನ್ನು ಕೊಟ್ಟು ಬಿಡಿ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ವಿನಂತಿ ಮಾಡುತ್ತೇನೆ. ಇವತ್ತು ಬರಗಾಲದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ದಾರುಣ ಪರಿಸ್ಥಿತಿ ಇದೆ ಎಂದು ನಮ್ಮ ಶಾಸಕರು, ಮಂತ್ರಿಗಳು ಆ ಕಡೆ ಈ ಕಡೆ ಭೇದ ಭಾವನೆ ಇಲ್ಲದೇ ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನ ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ನಾವು war footingನಲ್ಲಿ ಕೆಲಸ ಮಾಡಬೇಕಾಗುತ್ತದೆ. ಕೆರೆಯ ನೀರನ್ನು ಕೆರಗೆ ಚೆಲ್ಲಿ ವರವ ಪಡೆದಂತೆ ಮಾಡಿರೋ ಎನ್ನುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಅಂದರೆ, ನಿಮ್ಮ ಜೇಬಿನಿಂದ ಅಥವಾ ನಮ್ಮ ಜೇಬಿನಿಂದ ಅವರಿಗೇನು ಕೊಡುವುದಿಲ್ಲ. ಸಾಮಾನ್ಯ ಜನರು ಕೊಟ್ಟಂಥ ತೆರೆಗೆ ಹಣವನ್ನು ಸಂಕಷ್ಟದಲ್ಲಿರುವ ಜನರಿಗೆ ಇಂಥ ಸಂಕಷ್ಟದ ಸಮಯದಲ್ಲಿ ತಲುಪಿಸುವಂಥದ್ದು ನಮ್ಮ ಕರ್ತವ್ಯ. ಇಲ್ಲದಿದ್ದರೆ ಜನರು ನಮ್ಮನ್ನು ಕ್ಷಮಿಸುವುದಿಲ್ಲ. ಅಧಿಕಾರಕ್ಕೆ ಬರುವುದು ಬಿಡುವುದು ಬೇರೆ ವಿಷಯ. ಜನರು ಯಾರನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಿಲಿ. ಆದರೆ, ನಮ್ಮನ್ನು ಅಧಿಕಾರಕ್ಕೆ ತಂದು ನಾಲ್ಕು ವರ್ಷಗಳವರೆಗೆ ಇಲ್ಲಿನ ಕುರ್ಚಿಯಲ್ಲಿ ಕುಳಿಸಿರುವಂಥವರಿಗೆ ಇಂಥ ಸಂಕಷ್ಟ ಇರುವಂಥ ಸಂದರ್ಭದಲ್ಲಿ ನಾವುಗಳು ಅವರ ನೆರವಿಗೆ ಹೋಗತಕ್ಕಂಥದ್ದು ನಮ್ಮ ಕರ್ತವ್ಯ ಆಗಿದೆ. ಆದ್ದರಿಂದ, ಪಕ್ಷಭೇದ ಮರೆತು ಕರ್ತವ್ಯ ಪ್ರಜ್ಞೆಯನ್ನು ನೆನಪು ಮಾಡುವಂಥ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಇಲ್ಲಿರುವಂಥ 224 ಜನ ಶಾಸಕರು ಗೌರವದಿಂದ ನಮ್ಮ ನಮ್ಮ ಕ್ಷೇತ್ರದಲ್ಲಿ ಓಡಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಆದ್ದರಿಂದ, ನಾನು ಹೇಳುವುದೇನೆಂದರೆ, ಈ ವರ್ಷ ಹೊಸ ಕೆಲಸಗಳನ್ನು ಮಾಡುವುದು ಬೇಡ. Ongoing works ಅನ್ನು ಪೂರ್ಣ ಮಾಡಿ. ಹೊಸ ಕಟ್ಟಡಗಳನ್ನು ಕಟ್ಟುವುದು ಬೇಡ. ಈಗಾಗಲೇ ಅರ್ಧಂಬರ್ಧ ಆಗಿರುವ ಕಟ್ಟಡಗಳನ್ನು ಮೊದಲು ಪೂರ್ಣ ಮಾಡಿ. ಹಾಗೆಯೇ ನೀರಾವರಿ ಯೋಜನೆಗೆ ಆದ್ಯತೆ ಕೊಡಿ. ಬೋರ್‌ವೆಲ್‌ಗಳನ್ನು ತೆಗೆದು ಹಾಳಾಗಿ ಹೋಗುವುದು ಬೇಡ. ಹೊಂಡ ತೆಗೆಯಲು ರೈತನಿಗೆ ದುಡ್ಡು ಕೊಡಿ. ಪ್ರತಿ 10 ಎಕರೆಗೆ ಕಡ್ಡಾಯವಾಗಿ ಹೊಂಡ ತೆಗೆದು ಮಳೆ ನೀರನ್ನು ಸಂಗ್ರಹ ಮಾಡಬೇಕೆಂದು ರೈತರಿಂದ ಕಡ್ಡಾಯವಾಗಿ ಮಾಡಿಸಿ. ಈಗಾಗಲೇ ಮನೆಗಳಲ್ಲಿ ಮಳೆ ನೀರು ಸಂಗ್ರಹ ಮಾಡಬೇಕೆಂದು ಹೇಳಿದಂತೆ ಅಲ್ಲಿಯೂ ಕೂಡ ಕಡ್ಡಾಯವಾಗಿ ಮಾಡಿಸಿ. ಈ ರೀತಿಯಾಗಿ ಮಾಡಿ ಅಂತರ್ಜಲ ಮಟ್ಟ ಕುಸಿಯುವುದನ್ನು ತಪ್ಪಿಸಿ ಕೆರೆಕಟ್ಟೆಯಲ್ಲಿ ನೀರು ನಿಲ್ಲುವುದಕ್ಕೆ ವ್ಯವಸ್ಥೆ ಮಾಡಿ. ಹಾಗೆಯೇ ಕೆರೆಯಲ್ಲಿ ಹೂಳನ್ನು ತೆಗೆಸಿ ಪುಣ್ಯ ಕಟ್ಟಿಕೊಳ್ಳುವಂಥ ಕೆಲಸವನ್ನು ನಾವು ಮಾಡಿದರೆ ಇವರು ಅಧಿಕಾರಕ್ಕೆ ಬಂದಿರುವುದು ಸಾರ್ಥಕವಾಯಿತು. ಏಕೆಂದರೆ, ಇಂಥ ಸಂಕಷ್ಟದ ಕಾಲದಲ್ಲಿ ಇವರು ನಮ್ಮನ್ನು ಸ್ಪಂದಿಸಿದ್ದಾರೆಂದು ಅವರು ನೆಮ್ಮದಿಯ ನಿಟ್ಟುಸಿರು ಬಿಟ್ಟು ದೇವರ ಮುಂದೆ ಕೈಮುಗಿದರೆ ಇಲ್ಲಿರುವ ಎಲ್ಲರಿಗೂ ಒಳ್ಳೆಯದಾಗುತ್ತದೆ. ಆದ್ದರಿಂದ, ಹೊರದೇಶಕ್ಕೆ ಹೋಗುವ ಹುಚ್ಚನ್ನು ಬಿಡಿ. ಹಳ್ಳಿಗಳು, ತಾಲ್ಲೂಕು, ಜಿಲ್ಲೆಗಳಲ್ಲಿ ಅಧಿಕಾರಿಗಳ ಜೊತೆ ಕುಳಿತು ಕೆಲಸ ಮಾಡೋಣ. ನಾವೆಲ್ಲ ಶಾಸಕರು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರ ಕಿವಿ ಹಿಂಡಿ ಅಲ್ಲಿನ ವಾಸ್ತವಿಕತೆಯನ್ನು ತಿಳಿದುಕೊಂಡು ಬಂದ ಹಣ ದುರುಪಯೋಗವಾಗದ ರೀತಿಯಲ್ಲಿ ಉಪಯೋಗವಾಗುವಂತೆ ಮಾಡಿಕೊಳ್ಳೋಣ. ಈ 10 ಸಾವಿರ ಕೋಟಿ ರೂಪಾಯಿ ಇದಕ್ಕಾಗಿ ಉಪಯೋಗ ಮಾಡಿಕೊಂಡರೆ ನಿಮ್ಮ ಹೆಸರು ಉಳಿಯುತ್ತದೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ ದೇಶದ ಬೇರೆ ಬೇರೆ ರಾಜ್ಯದವರು ನಿಮಗೆ ಅನುಕೂಲ ಮಾಡುವ ಬಗ್ಗೆ ಖಂಡಿತ ಯೋಚನೆ ಮಾಡುತ್ತಾರೆ. ಕೇಂದ್ರ ಸರ್ಕಾರದ ಹತ್ತಿರ ಹೋಗಿ ರಾಷ್ಟ್ರೀಕೃತ ಬ್ಯಾಂಕ್‌ನ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳೋಣ. ಹಿಂದೆ ಈ ಕೆಲಸವನ್ನು ನಾವೇ ಮಾಡಿದ್ದೇವೆ. ಅವರಿಂದ ಯಾವುದೇ concession ಕೇಳಿರಲಿಲ್ಲ.ಈಗ ಒಂದು ಬಾರಿ ರೈತನನ್ನು ನಾವು ಉಳಿಸಬೇಕಾಗಿದೆ. ನಾವು ಕೇಳಿರುವ 5 ಸಾವಿರ ಕೋಟಿ ರೂಪಾಯಿಯನ್ನು ಒಂದು ಪ್ಯಾಕೇಜ್‌ನಲ್ಲಿ ಕೊಡಿ ಎಂದು ಕೇಳೋಣ. ನಾವು ಈಗಾಗಲೇ 10 ಸಾವಿರ ಕೋಟಿ ತೆಗೆದಿಟ್ಟಿದ್ದು, ಇದರಲ್ಲಿ ನಾವು ಈಗಾಗಲೇ ನಾಲ್ಕೈದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು

ಅಕೌಂಟ್ ಅನ್ನು ತೆಗೆದುಕೊಂಡು ಹೋಗಿ ಹಣಕಾಸಿನ ಸಚಿವರಾಗಿರುವ ಮಾನ್ಯ ಪ್ರಧಾನ ಮಂತ್ರಿಯವರಿಗೆ ಕೊಡಿ. ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಜಯಚಂದ್ರರವರು ಸಹ ಬರುತ್ತಾರೆ. ಆದ್ದರಿಂದ, 224 ಜನರು ಸಹ ಒಟ್ಟಿಗೆ ಕೇಂದ್ರಕ್ಕೆ ಹೋಗೋಣ. ಕೇಂದ್ರದಿಂದ ಎರಡು ಕೆಲಸಗಳಾಗಬೇಕಾಗುತ್ತದೆ. ಅದರಲ್ಲಿ ಮೊದಲನೆಯದು ಏನೆಂದರೆ, ಒಂದು ಸಲ ರಾಷ್ಟ್ರೀಕೃತ ಬ್ಯಾಂಕ್‌ನಿಂದ one time ಸಾಲ ಮನ್ನಾ ಮಾಡುವುದು ಹಾಗು ನಾವು ಕೇಳಿರುವ 5 ಸಾವಿರ ಕೋಟಿ ರೂಪಾಯಿಗಳ ನೆರವನ್ನು ಒಂದೇ ಕಂತಿನಲ್ಲಿ ಕೊಡಬೇಕು. ಮತ್ತೆ ರಾಜ್ಯ ಸರ್ಕಾರ ಏನು ಮಾಡಬೇಕೆಂದರೆ, ಬ್ಯಾಂಕ್‌ನಿಂದ ಸಾಲ ಪಡೆಯದೆ ಇರುವ ಸುಮಾರು 30 ಲಕ್ಷ ರೈತರ ಬ್ಯಾಂಕಿನ ಅಕೌಂಟ್‌ಗೆ 5 ಸಾವಿರ ರೂಪಾಯಿ ಜಮಾ ಮಾಡಿ ಆತ 6 ತಿಂಗಳು ನೆಮ್ಮದಿಯಿಂದ ಇರುವಂತೆ ಮಾಡಬೇಕು. ಮತ್ತೆ ಈಗ ಆತ ತೆಗೆದುಕೊಂಡಿರುವ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವಂಥ ಕಾರ್ಯಕ್ರಮವನ್ನು ರೂಪಿಸುವಂಥ ಕೆಲಸವನ್ನು ಸರ್ಕಾರ ಮಾಡಿದರೆ ಜನರು ನಿಮ್ಮನ್ನು ಒಪ್ಪುತ್ತಾರೆ. ಸಾರ್ಥಕ ಕೂಡ ಆಗುತ್ತದೆ. ತಾವು ಹಿಂದೆ ಮುಂದೆ ನೋಡುವುದಾದರೆ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ, ತಾವು ತಕ್ಷಣ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯಿರಿ. ಅಲ್ಲಿ ಈ ವಿಷಯ ಚರ್ಚೆ ಮಾಡಿ ಅಲ್ಲಿ ಕುಳಿತಿರುವವರನ್ನು convince ಮಾಡಿ ಒಮ್ಮತದಿಂದ ಆಗಬಹುದೆಂದು ಎಲ್ಲರೂ ಹೇಳಿದರೆ ನೀವು ಮತ್ತು ಕಂದಾಯ ಇಲಾಖೆಯ ಸಚಿವರು ಕುಳಿತುಕೊಂಡು ಚರ್ಚೆ ಮಾಡಿ ಸ್ಪಷ್ಟವಾಗಿ ಇಂತಹ ದಿನಾಂಕದಿಂದ ಸಾಲ ಮನ್ನಾ ಮಾಡುತ್ತೇವೆಂದು ಹಾಗೂ ಇಂಥ ದಿನಾಂಕದಿಂದ 5 ಸಾವಿರ ರೂಪಾಯಿಯನ್ನು ನಿಮ್ಮ ಅಕೌಂಟ್‌ನಲ್ಲಿ ಜಮಾ ಮಾಡುತ್ತೇವೆಂದು ಹಾಗೂ ಇಂಥ ದಿನಾಂಕದಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಮತ್ತು ಪಿ.ಡಿ.ಎಸ್. ಅನ್ನು ಪೂರ್ಣ ಮಾಡುತ್ತೇವೆಂದು ಹಾಗೂ ಪ್ರತಿ ತಿಂಗಳು ಬಾಕಿ ಇರುವಂತಹ ಹಣವನ್ನು ಅಂದರೆ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಕೊಡುತ್ತೇವೆ, ಎಂದು ಹೇಳಿ ನಿಮ್ಮನ್ನು ರಸ್ತೆಯಲ್ಲಿ ಓಡಾಡುವುದಕ್ಕೆ ಬಿಡುವುದಿಲ್ಲ ಎಂಬುವುದನ್ನು ತಾವು ರಿಪ್ಲೈ ಮಾಡಿಸುವ ದಿವಸ ಸ್ಪಷ್ಟವಾಗಿ ಹೇಳಬೇಕೆಂದು ಹೇಳುತ್ತಾ ಈ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಮುಂದಕ್ಕೆ ಬರಬೇಕೆಂದು ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಿದ್ದರಾಮಯ್ಯನವರು ಮತ್ತು ನಾವೆಲ್ಲ ಒಟ್ಟಾಗಿ ರಾಜ್ಯದಲ್ಲಿ ಪ್ರವಾಸ ಮಾಡೋಣ. ಇದಕ್ಕೆ ಪಕ್ಷ ಪಂಗಡಗಳು ಮಾಡುವುದು ಬೇಡ. ಚುನಾವಣೆ ಬಂದಾಗ ಇದನ್ನು ನೋಡೋಣ. ನಿಮ್ಮ ಕಷ್ಟ

ಏನೆಂಬುದನ್ನು ನಾವೆಲ್ಲರೂ ಇಟ್ಟಾಗಿ ಹೋಗಿ ಮೊದಲಬಾರಿಗೆ ವಿಚಾರಿಸಿ ಅವರ ಕಷ್ಟ ಸುಖಗಳಿಗೆ ಸ್ಪಂದಿಸೋಣ. ನಾನು ಮುಂದಿನ ತಿಂಗಳ ಮೊದಲನೇ ವಾರದಿಂದ ಒಂದು ತಿಂಗಳು ರೈತರ ಮಧ್ಯೆ ಹಳ್ಳಿಯಲ್ಲಿಯೇ ಇದ್ದು, ಈ ಯೋಜನೆಗಳೆಲ್ಲವನ್ನು ನಾವು ತಂದಿದ್ದೇವು, ಅಧಿಕಾರಿಗಳು ತಿಂದು ಹಾಕುವುದಕ್ಕೆ ಬಿಡಬೇಡಿ ಮತ್ತೆ ಯಾರಿಗೂ ಸಹ ಒಂದು ರೂಪಾಯಿ ಲಂಚ ಕೊಡಬೇಡಿ ಎಂದು ಮತ್ತು ನಿಮ್ಮ ಬ್ಯಾಂಕ್‌ನಲ್ಲಿ ಹಣ ಜಮಾ ಮಾಡುತ್ತಿದ್ದೇವೆ. ಆ ಹಣವನ್ನು ಉಪಯೋಗ ಮಾಡಿಕೊಂಡು ನೆಮ್ಮದಿಯಿಂದ ಬದುಕಿ ನಾವು ನಿಮ್ಮ ಜೊತೆ ಈ ಸಂದರ್ಭದಲ್ಲಿ ಇದ್ದೇವೆಂದು ಹೇಳೋಣ. ಮಳೆ ಬಂದು ಕೆರೆ ಕಟ್ಟೆ, ಜಲಾಶಯಗಳು ತುಂಬಿದರೂ ಸಹ ಈಗ ಆಗಿರುವ ತೀರ್ಮಾನದಲ್ಲಿ ಹಿಂದೆ ಹೋಗಬಾರದು. ಆದ್ದರಿಂದ, ತಾವು ರಿಪ್ಲೈ ಮಾಡುವಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ಈ ಮನೆಯ ಮೂಲಕ ನಾಡಿನ 6 ಕೋಟಿ ಜನರಿಗೆ ಈ ಸಂದೇಶ ಕಳುಹಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಈಗ ಸದನವನ್ನು ಮಧ್ಯಾಹ್ನ 2 ಗಂಟೆ 45 ನಿಮಿಷ ಸೇರುವಂತೆ ಮುಂದೂಡಲಾಗಿದೆ.

**(ಸದನವನ್ನು ಮಧ್ಯಾಹ್ನ 2 ಗಂಟೆ 4 ನಿಮಿಷಕ್ಕೆ ಮುಕ್ತಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

**(ಸದನದ ಕಲಾಪವು ಮಧ್ಯಾಹ್ನ 3.17 ಗಂಟೆಗೆ ಪುನಃ ಪ್ರಾರಂಭವಾದಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)**

**ಉಪಾಧ್ಯಕ್ಷರು:** ಈಗ ಒಂದು ಪ್ರಕಟಣೆ ಇದೆ. ದಿನಾಂಕ 24.7.2012 ರ ಮಂಗಳವಾರದಂದು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ Institute of public Health ಸಂಸ್ಥೆಯವರು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಾನ್ಯ ಸಚಿವರುಗಳಿಗೆ, ಶಾಸಕರುಗಳಿಗೆ ಅರಿವು ಮೂಡಿಸುವ ಸಲುವಾಗಿ ಜಾಗೃತ ಕಾರ್ಯಕ್ರಮವನ್ನು ಆಯೋಜಿಸಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ತಾವುಗಳೆಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಮಾನ್ಯ ಸದಸ್ಯರುಗಳನ್ನು ಕೋರಲಾಗಿದೆ.

ಈಗ ಶ್ರೀ ಕೆ.ಎಂ. ಶಿವಲಿಂಗೇಗೌಡರೇ ಮಾತನಾಡಿ.

**ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.**

**ವಿಷಯ: ಬರ ಪರಿಸ್ಥಿತಿ ಬಗ್ಗೆ ಮುಂದುವರೆದ ಚರ್ಚೆ:**